ಇನ್ನು ಜನಗಣತಿಯ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುತ್ತೇನೆ. ಈ ಸಂಬಂಧವಾಗಿ ನಮ್ಮ ಅಧಿಕಾರಿಗಳು ನಿಜವಾದ ಅಂಕಿಅಂಶಗಳನ್ನೊದಗಿಸಿರುವುದಕ್ಕಾಗಿ ಮತ್ತು ಅವರು ಸಲ್ಲಿಸಿರುವ ಸೇವೆಗಾಗಿ ಅವರಿಗೆ ನಾವು ನಮ್ಮ ವಂದನೆಗಳನ್ನರ್ಪಿಸಬೇಕಾಗಿದೆ. ಈಗ ನಮ್ಮ ದೇಶದ ಪ್ರಜಾಸಂಖ್ಯೆ ಹೆಚ್ಚಾದುದಕ್ಕಾಗಿ ನಾವೇಕೆ ಹೆದರಬೇಕೋ ನನಗಂತೂ ಗೊತ್ತಾಗುವುದಿಲ್ಲ. ಈಗಾಗಲೆ ಕೆಲವು ಮಹನೀಯರು ತಿಳಿಸಿರುವ ಪ್ರಕಾರ ನಮ್ಮ ಸೀಮೆಯಲ್ಲಿ ಲಕ್ಷಾಂತರ ಎಕರೆ ಜಮೀನು ಉಳುಮೆಯಾಗದೆ ಹಾಗೆ ಪಾಳುಬಿದ್ದಿದೆಯೆಂದು ತಿಳಿಸಿದ್ದಾರೆ. ಇದನ್ನೆಲ್ಲಾ ವ್ಯವಸಾಯಕ್ಕೆ ತರಲು ಸಾಕಷ್ಟು ಜನ ಸಿಬ್ಬಂದಿಯಿಲ್ಲ. ಕೂಲಿ ಆಳುಗಳಿಲ್ಲವೆಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಾ ಇದೆ. ಜನಬೆಂಬಲ ಸಾಲದೆ ಜಮೀನು ವ್ಯವಸಾಯ ನಡೆಸಲು ಜನರು ಬುಲ್‌ಡೋಜರ್ಸ್ ಟ್ರಾಕ್ಟರ್ಸ್ ಇತ್ಯಾದಿಗಳ ಬಗ್ಗೆ ವಿಶೇಷ ಹಣವನ್ನು ಪೋಲುಮಾಡುತ್ತಿದ್ದಾರೆ. ಹೀಗೆಲ್ಲಾ ಹಣವನ್ನು ಪೋಲುಮಾಡುವ ಬದಲು ಆ ಹಣವನ್ನೆಲ್ಲಾ ಈ ಹೆಚ್ಚು ಪ್ರಜಾಸಂಖ್ಯೆಯ ಏಳಿಗೆಗೆ ಉಪಯೋಗಿಸಿ, ಇವರನ್ನೇ ಆ ಕೆಲಸಕ್ಕೆ ನೇಮಿಸಿಕೊಂಡಿದ್ದರೆ ಆಗುತ್ತಿರಲಿಲ್ಲವೇ ; ಜನ ಸಂಖ್ಯೆ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಟಿ. ಮಾದಯ್ಯಗೌಡರು ಪೂರಾ ಹೆದರಿರುವಂತೆ ಕಾಣುತ್ತದೆ. ಶ್ರೀ ಗೌಡರು ವಯಸ್ಕರ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಆದ್ದರಿಂದ ಇವರು ವಯಸ್ಕರಿಗೆ ಪ್ರಜಾಸಂಖ್ಯೆಯ ವಿಷಯದಲ್ಲಿ ಬೇಕಾದ ಸಲಹೆ ಕೊಡುವ ಅವಕಾಶವಿದೆ. ಇದನ್ನು ಅವರು ಉಪಯೋಗಿಸಿ ಕೊಳ್ಳಲಿ.

ಇನ್ನು ಆಹಾರದ ವಿಷಯ. ಈಗಾಗಲೇ ಈ ಸಂಬಂಧವಾಗಿ ಹಿಂದಿನ ಲೆಕ್ಕಾಚಾರದ ಪ್ರಕಾರ ಸಬ್ಸಿಡಿ, ನೀರಾವರಿ ಕಾಂಗಾರಿಗಳು ವಗೈರೆ ಬಾಬುಗಳಿಗಾಗಿ ಸುಮಾರು 13—14 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಸಬ್ಸಿಡಿ ಕೊಡುವುದಕ್ಕೆ ಷುರು ಮಾಡಿದ ಮೇಲೆ ಸರ್ಕಾರದ ಬೊಕ್ಕಸ ಖಾಲಿಯಾಗುತ್ತಿದೆಯೆಂದು ಗೊತ್ತಾಗಿದೆ. ಆದರೆ ದೇಶದಲ್ಲಿ ತಪ್ಪಿತಸ್ಥರು ಯಾರು ? ಸಬ್ಸಿಡಿ ತೆಗೆದುಕೊಂಡಿರುವುದು ಸರಿಯಾಗಿದೆಯೆ ? ರೇಷನ್ ಅಂಗಡಿಗೆ ಹೋಗಿ ಚೀಲ ತೆಗೆದುಕೊಂಡು ಸಾಮಾನು ತರುವವರು ಸುಖವಾಗಿದ್ದಾರೆಯೆ ? ಈ ಪ್ರಶ್ನೆಗಳನ್ನು ಹಾಕಿದರೆ ಯಾವುದೂ ಹೇಳುವ ಹಾಗಿಲ್ಲ. ಅವರುಗಳು ಹೇಳುವ ಮಾತು ಮತ್ತು ಬಯ್ಯುವುದನ್ನು ಕಿವಿಯಲ್ಲಿ ಕೇಳುವುದಕ್ಕಾಗುವುದಿಲ್ಲ. ಇದನ್ನು ಬಿಟ್ಟು ರೈತರಿಗೆ ಉಪಕಾರವಾಗಿದೆಯೇ, ಅವನೇನಾದರೂ ಒಳ್ಳೆಯ ಮಾತನ್ನು ಹೇಳುತ್ತಾನೆಯೆ ಎಂದರೆ ಅದೂ ಇಲ್ಲ. ಇಷ್ಟು ಖರ್ಚು ಮಾಡಿದರೂ ಯಾರೂ ಒಂದು ಒಳ್ಳೆಯ ಮಾತು ಹೇಳುವ ಹಾಗಿಲ್ಲ. ಆಹಾರದ ಇಲಾಖೆ ವಗೈರೆ ಇಲಾಖೆಗಳನ್ನು ಹೆಚ್ಚಿಸಿರುವುದರಿಂದ ಬೇಕಾದಷ್ಟು ಅಧಿಕಾರಿಗಳಿಗೆ ನೌಕರಿ ಸಿಕ್ಕಿದೆ. ಆದರೆ ಅವರೂ ಸಹ ಬಂದು ಒಳ್ಳೆಯ ಮಾತನ್ನು ಹೇಳುವಂತಿಲ್ಲ. ಅದು ಅಲ್ಲದೆ ಇಷ್ಟು ಖರ್ಚಾಗಿದ್ದರೂ ತಕ್ಕಷ್ಟು ಉಪಕಾರವಾಗಿಲ್ಲ. ಯಾರನ್ನು ಕೇಳಲಿ ಈ ಕಿರುಕುಳ ಹೋದರೆ ಸಾಕು ಎಂದು ಹೇಳುತ್ತಾರೆ. ಹಾಗೆಂದ ಮೇಲೆ ಏನಾಗಬೇಕಾಗಿದೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದನ್ನು ಬಹು ದೂರದೃಷ್ಟಿಯಿಂದ ಯೋಚನೆ ಮಾಡಬೇಕಾಗಿದೆ. ಆದರೆ ಜನರಲ್ಲಿ ಸುಖಶಾಂತಿಯುಂಟಾಗಲೆಂಬ ಉದ್ದೇಶದಿಂದ ಸರ್ಕಾರದವರು 13 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಹಣವನ್ನು ಸದುಪಯೋಗಪಡಿಸಿ ಎಷ್ಟಾದರೂ ಖರ್ಚುಮಾಡಿ ಜನರಿಗೆ ನೆಮ್ಮದಿಯುನ್ನುಂಟುಮಾಡಬೇಕೆಂದು ಪ್ರಯತ್ನಪಟ್ಟಿದ್ದಾರೆ. ಆದರೆ ಈಗ ನೋಡಿದರೆ ಆ ಸುಖ ಶಾಂತಿಗಳೆರಡೂ ಮಾಯವಾಗಿವೆ. ಇಷ್ಟು ಹಣ ಖರ್ಚು ಮಾಡಿದರೂ ಎಷ್ಟು ಅನುಕೂಲವಾಗಬೇಕಾಗಿತ್ತೋ ಅಷ್ಟಾಗಿಲ್ಲ.

ಅಲ್ಲದೆ 13 ಕೋಟಿ ಸಾಲದಿದ್ದರೆ ಇನ್ನಷ್ಟು ಖರ್ಚುಮಾಡಿ ಸುಖಶಾಂತಿಗಳನ್ನು ದೊರಕಿಸಿಕೊಡುವುದಕ್ಕೆ ಸರ್ಕಾರದಲ್ಲಿ ಸಾಕಷ್ಟು ಹಣ ಇರುವ ಹಾಗೆ ಕಾಣುವುದಿಲ್ಲ. ಹೀಗೆಂದು ಹೇಳಿದ ಮೇಲೆ ಈಗ ಅನುಸರಿಸುತ್ತಿರುವ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲೇಬೇಕಾಗುತ್ತದೆ. ಇಷ್ಟು ಕೋಟಿ ರೂಪಾಯಿಗಳನ್ನು ನಾವು ಯಾವ ರೀತಿ ನೀತಿಗಳ ಮೇಲೆ ಖರ್ಚುಮಾಡಿದ್ದೇವೆಯೋ ಆ ರೀತಿ ನೀತಿಯನ್ನು ಬದಲಾಯಿಸಬೇಕೆಂದು ನನಗೆ ತೋರುತ್ತದೆ. ಈಗಾಗಲೇ ಅಲ್ಲಲ್ಲಿ ಸಾಲವನ್ನು ಕೊಡುವುದಕ್ಕೆ ಶುರು ಮಾಡಿದ್ದಾರೆ. ಸಬ್ಸಿಡಿ ಕೊಡುವುದನ್ನು ತಪ್ಪಿಸಿ ಸರ್ವಿಸ್ ಅಟ್ ಕಾಸ್ಟ್ ನೀತಿಯ ಪ್ರಕಾರ ಗೊಬ್ಬರ ವಗೈರೆ ಸರಬರಾಯಿ ಮಾಡಿ ಹೆಚ್ಚು ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದಾರೆ, ಇದೆಲ್ಲಾ ಸರಿ. ಇಷ್ಟೇ ಸಾಲದು ಎಂದು ಬೀಳು ಬಿದ್ದಿರುವ ಜಮೀನನ್ನು ಉಳುಮೆ ಮಾಡಿಸುವುದಕ್ಕೂ ಏರ್ಪಾಡು ಮಾಡಿದ್ದಾರೆ. ಹಾಗೆ ಮಾಡಿದರೆ ಒಳ್ಳೆಯದು. ಆದರೆ 13 ಕೋಟಿ ಖರ್ಚಾಗಿರುವ ಹಾಗೆ ಇದಕ್ಕೆ ಖರ್ಚು ಮಾಡುವ ಹಣವೂ ಹಾಳಾಗಬಹುದು ಎಂದು ನನಗೆ ಕಾಣುತ್ತದೆ. ಇದರಿಂದ ದೇಶದಲ್ಲಿರುವ ಎಲ್ಲಾ ಪಾಳು ಜಮೀನೂ ಸಾಗಾಗುತ್ತದೆ. ಈ ಬಗ್ಗೆ ಅಮಲ್ದಾರರಿಗೆ ಕೊಟ್ಟಿರುವ ಅಧಿಕಾರ ಸದುಪಯೋಗವಾಗುತ್ತದೆ. ಹೀಗೆ ಮಾಡುವುದರಿಂದ ದೇಶದ ಆಹಾರದ ಕೊರತೆಯು ಪೂರ್ಣವಾಗಿ ತಪ್ಪುತ್ತದೆ ಎಂಬ ನಂಬಿಕೆ ನನಗಿಲ್ಲ.

ಶ್ರೀ ಜಿ. ಎ. ಆಚಾರ್ಯರು.—ಅಧಿಕಾರಿಗಳಿಗೆ ಕೊಡಬೇಕೆಂದು ಹೇಳಿಲ್ಲ. ಯಾರಿಗೆ ಜಮೀನಿಲ್ಲವೋ ಅವರಿಗೆ ಕೊಡಬೇಕೆಂದು ಸರ್ಕಾರದವರು ಹೇಳಿದ್ದಾರೆ.

Sri M. N. JOIS.—I will thank the Hon'ble Sri Acharya for being so keen in explaining things. Officials ಗೆ ಕೊಡಬೇಕೆಂದು ಹೇಳಲಿಲ್ಲ. I did not say that nor I intended it. I only request him to be more attentive and follow my speech carefully.

Sri G. A. ACHARYA.—He did say that.

ಶ್ರೀ ಎಂ. ಎನ್. ಜೋಯಿಸರು.—ಅದರಿಂದ ಅವರ ಕೈಲಿ ಎಷ್ಟಾಗುತ್ತದೆ ಎಂಬುದು ಕಾದು ನೋಡಬೇಕಾದ ವಿಚಾರ. ಪಾಳು ಜಮೀನು ಲೆಕ್ಕ ತೆಗೆದುಕೊಂಡರೆ ಸಾಮಾನ್ಯವಾಗಿ 1941-42 ರಲ್ಲಿ 13½ ಲಕ್ಷ ಎಕರೆ ಜಮೀನು ಪಾಳು ಬಿದ್ದಿತ್ತು. 1948-49 ರಲ್ಲಿ ಅದು 20 ಲಕ್ಷ ಆಯಿತು. ಇಷ್ಟು ಹಣ ಖರ್ಚು ಮಾಡಿ ಹೆಚ್ಚು ಆಹಾರ ಬೆಳೆಯುವ ಯೋಜನೆ ಮುಂತಾದ್ದನ್ನು ಬೇಕಾದಷ್ಟು ಜಾರಿಗೆ ತಂದರೂ ಪಾಳು ಭೂಮಿ 20 ಲಕ್ಷವಿದೆ. ಆದರೆ ಸರ್ಕಾರದವರು ಹೇಳಿದ ಹಾಗೆ ಬೇಕಾದಷ್ಟು ಜಮೀನು ಕೊಟ್ಟರೂ ಹೆಚ್ಚು ಬೆಳೆ ಬೆಳೆಯದೆ ಜಮೀನು ಸ್ವಂತವಾಗಿ ಸಂಪಾದನೆ ಮಾಡಿಕೊಳ್ಳಲು ಮುಂದೆ ಬರುತ್ತಿದ್ದಾರೆ. ಆದ್ದರಿಂದ 20 ಲಕ್ಷ ಎಕರೆ ಪಾಳು ಬಿದ್ದಿದೆ. ಹೆಚ್ಚು ಆಹಾರ ಬೆಳೆಯುವ ಯೋಜನೆ ಮಾಡಿದರೂ ಕೂಡ ಸ್ವಂತ ಜಮೀನು ಪಡೆಯಲು ಕೆಲವರಿಗೆ ಅವಕಾಶವಾಯಿತೇ ವಿನಾ ಬೆಳೆ ಹೆಚ್ಚು ಮಾಡಲು ಉತ್ಸಾಹ ಹೆಚ್ಚಲಿಲ್ಲ. ಇದರಿಂದ ಸ್ವಾಮಿತ್ವದ ಮೇಲೆ ಮಾತ್ರ ಉತ್ಸಾಹ ಹೆಚ್ಚಿತು, ಇದರಿಂದಲೇ 1944-45 ರಲ್ಲಿ 50 ಸಾವಿರ ಟನ್, 1950-51 ರಲ್ಲಿ 141 ಸಾವಿರ ಟನ್ ಆಮದು ಮಾಡಿಕೊಂಡಿರಬಹುದು. ಆದ್ದರಿಂದ ಅಲ್ಲಿಂದ ಇಲ್ಲಿಗೆ ತರಿಸುವುದು ಜಾಸ್ತಿಯಾಗುತ್ತಿದೆ. ನನ್ನ ದೃಷ್ಟಿಯಲ್ಲಿ ಇದು ಸರಿಯಾಗಿ ಕಾಣುವುದಿಲ್ಲ. ಮನೆ ಮನೆಗೆ ಜೋಳಿಗೆ ಹಾಕಿಕೊಂಡು ಹೋಗಿ ಧಾನ್ಯ ವಸೂಲಿ ಮಾಡುತ್ತೇವೆಂದು ಹೇಳಿ ಮತ್ತು ಬೇಕಾದಷ್ಟು ಖರ್ಚು ಮಾಡಿ ನಮ್ಮ ದೇಶದ ಉತ್ಪತ್ತಿಯನ್ನು ಹೆಚ್ಚಿಸದೆ ಹೊರಗಿನಿಂದ ತರಿಸುತ್ತಿದ್ದದನ್ನು 50 ರಿಂದ 140 ಸಾವಿರ ಟನ್‌ಗಳಿಗೆ ಹೆಚ್ಚಿಸಿರುವುದನ್ನು ನೋಡಿದರೆ ಎಷ್ಟುಮಟ್ಟಿಗೆ ಹೆಚ್ಚು ಆಹಾರ ಬೆಳೆಯುವ ಯೋಜನೆಯಿಂದ ಉಪಯೋಗವಾಗಿದೆ ಎಂಬುದು ತಾನೇ ಗೊತ್ತಾಗುತ್ತದೆ. ನಮ್ಮ ಮಂತ್ರಿಗಳು ಹೋಗಿ ಬೇಕಾದಷ್ಟು ಪ್ರಯತ್ನ ಮಾಡಿ ಎಷ್ಟು ಹೊರಗಿನಿಂದ ತರುವುದಕ್ಕೆ ಸಾಧ್ಯವೋ ಅಷ್ಟನ್ನು ತರುತ್ತಿದ್ದಾರೆ. ಅದಕ್ಕೆ ಮನ್ನಣೆಯಿದ್ದರೂ ಕೂಡ ಈ ಪರಿಸ್ಥಿತಿ ದೇಶದಲ್ಲಿರುವುದು ಬಹಳ ಶೋಚನೀಯ. ಈ ರೀತಿ ನೀತಿಗಳಲ್ಲಿ ಬಹಳ ವಿಶೇಷ ತರವಾದ ಬದಲಾವಣೆಯಾದ ಹೊರತು ಏನೂ ಪ್ರಯೋಜನವಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಇದೇ ರೀತಿಯಲ್ಲಿ ಶೇಖರಣೆ ಮಾಡುವುದಾದರೆ ವರ್ಷ ವರ್ಷ ಧಾನ್ಯ ಸಿಕ್ಕುವುದು ಹೆಚ್ಚುತ್ತದೆಯೆ, ಅಕಸ್ಮಾತ್ತಾಗಿ ಒಂದು ವರ್ಷ ಮಳೆ ಬೀಳದಿದ್ದರೆ ಹೇಗೆ ಎಂಬ ಶಂಕೆ ಉಂಟಾಗುತ್ತದೆ. ಹಿಂದಿನ ಅಂಕಿ ಅಂಶಗಳಿಗೂ ಈಗಿನ ಅಂಕಿ ಅಂಶಗಳಿಗೂ ಹೋಲಿಸಿದರೆ ಬಹಳ ಮಟ್ಟಿಗೆ ಕಡಮೆಯಾಗಿದೆಯೆಂದೇ ಹೇಳಬೇಕು. ಯಾವ ದೃಷ್ಟಿಯಿಂದ ನೋಡಿದರೂ ಕೂಡ ಆಹಾರದ ಕೊರತೆಗೆ ಏನೇನು ನಿವಾರಣೋಪಾಯವನ್ನು ಮಾಡಿದರೂ, ಸರ್ಕಾರದವರು ವಿಶೇಷ ಪ್ರಯತ್ನ ಮಾಡಿದರೂ, ಎಷ್ಟೋ ಹಣ ಖರ್ಚು ಮಾಡಿದರೂ, ಈ ದಿವಸದವರೆಗೂ ಎಷ್ಟು ಅನುಕೂಲ ದೊರೆಯಬೇಕಾಗಿತ್ತೋ ಅಷ್ಟು ದೊರೆತಿಲ್ಲ. ಆದಾದ ಹೊರತು ವಿಧಿಯಿಲ್ಲ ಎಂಬುದನ್ನು ಎಲ್ಲರೂ ಮನಗಂಡಿದ್ದೇವೆ. ಈಗ ಯಾವುದಕ್ಕೆ ಕೇಳಿದರೂ ದುಡ್ಡಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಕಾರಣ ಇಷ್ಟೆ : ನಮ್ಮ ಪರಿಸ್ಥಿತಿ, ಸ್ವರಾಜ್ಯ ಬಂದರೂ ಹಿಂದಿನಂತೆಯೇ ಇರುವುದು ಸರಿಯಲ್ಲ. ರೀತಿ ನೀತಿಯನ್ನು ಯಾವ ರೀತಿ ಬದಲಾಯಿಸಬೇಕೋ ಆ ರೀತಿ ಮಾಡಲೇಬೇಕು. ಅದಕ್ಕೆ ನಮ್ಮ ಸರ್ಕಾರಕ್ಕೆ ಧೈರ್ಯವಿಲ್ಲ. ಉದಾಹರಣೆಗೆ ಎಲ್ಲರೂ ಹೇಳುವ ಹಾಗೆ ಈಗಿರುವ ವಿದ್ಯಾಭ್ಯಾಸ ಪದ್ಧತಿಯ ಕ್ರಮ ಸರಿಯಾಗಿಲ್ಲ. ಇದರಿಂದ ಉಪಯೋಗವಾಗುವುದಿಲ್ಲ. ಈ ವಿದ್ಯಾಭ್ಯಾಸವನ್ನು ಕಲಿತವನಿಗೆ ಎಷ್ಟು ಉಪಯೋಗವಾಗಬೇಕೋ ಅಷ್ಟೂ ಆಗುವುದಿಲ್ಲ. ಇದರಿಂದ ದೇಶಕ್ಕೆ ತಕ್ಕಷ್ಟು ಅನುಕೂಲ ದೊರೆಯುವುದಿಲ್ಲ. ಹೀಗೆ ಹೇಳುತ್ತಿರುವಾಗ ಇದನ್ನು ಬದಲಾಯಿಸುವುದಕ್ಕೆ ತಕ್ಕ ಪ್ರಯತ್ನ ಮಾಡಿದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ.

ಕಾರ್ಯರೂಪಕ್ಕೆ ಬರದೇ ಇರುವುದರಿಂದ ಏನಾಗಿದೆ ಎಂದರೆ ಎಲ್ಲೆಲ್ಲಿ ಕೇಳಿದರೂ ಕಾಲೇಜು ಕೊಡುತ್ತೇವೆ, ವಿದ್ಯಾಭ್ಯಾಸಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೇವೆ. ಆ ಕೋಟ್ಯಾಂತರ ರೂಪಾಯಿ ಎಲ್ಲವೂ ಪ್ರಯೋಜನವಿಲ್ಲದೇ ಇರುವ ಹುಡುಗರನ್ನು ತಯಾರು ಮಾಡುವುದಕ್ಕೆ ಖರ್ಚಾಗುತ್ತಾ ಇದೆ. ಆದ್ದರಿಂದ ನಾನು ಹೇಳುವುದಾದರೂ ಇಷ್ಟೆ: ಎಲ್ಲಿಯವರೆಗೆ ವಿದ್ಯಾಭ್ಯಾಸದ ಕ್ರಮದಲ್ಲಿ, ಸಮರ್ಪಕವಾದ ಕ್ರಮವನ್ನು ರೂಢಿಗೆ ತರಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಪ್ರೈಮರಿ ವಿದ್ಯಾಭ್ಯಾಸವೆಂದು ಏನು ಇದೆಯೋ ಅದನ್ನು ಕೊಡುತ್ತಾ ಇರಬೇಕು. ಏಕೆಂದರೆ ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ಅಲ್ಲಿಂದ ಮುಂದೆ ಏನು ಬೇಕಾದರೂ ಮಾಡಬಹುದು. ಅಲ್ಲಿಯ

(ಶ್ರೀ ಎಂ. ಎಕ್. ಜೋಯಿಸರು.)

ವರೆಗೆ ಕಾಲೇಜು ವಿದ್ಯಾಭ್ಯಾಸವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದರೂ ಸರಿಯೆ. ಅಥವಾ ಯುದ್ಧ ಕಾಲದಲ್ಲಿ ಅತ್ಯಂತ ಮುಖ್ಯವಾದ ಪದಾರ್ಥಗಳ ವಿನಃ ಬಾಕಿ ವಸ್ತುಗಳ ಉತ್ಪನ್ನವನ್ನು ನಿಲ್ಲಿಸುವಂತೆ, 4 ವರ್ಷ ಕಾಲೇಜು ವಿದ್ಯಾಭ್ಯಾಸವನ್ನು ನಿಲ್ಲಿಸಿದರೂ ಕೂಡ ದೇಶಕ್ಕೆ ಏನೂ ಹಾನಿಯಾಗುವುದಿಲ್ಲ. ಅದರಿಂದ ಲಾಭ ಹೆಚ್ಚಾಗಿ ಬರುತ್ತದೆ. ಅಲ್ಲಿರತಕ್ಕ ಪ್ರೊಫೆಸರುಗಳು, ಉಪಾಧ್ಯಾಯರುಗಳು ಹಳ್ಳಿಗಳಿಗೆ ಹೋಗಿ, ಹಳ್ಳಿಗಳಲ್ಲಿ ಸ್ವರಾಜ್ಯದ ಪದ್ಧತಿ ಏನು, ಅವರ ನೈತಿಕ ಮಟ್ಟವನ್ನು ಯಾವ ರೀತಿ ಉತ್ತಮಪಡಿಸಿಕೊಳ್ಳಬೇಕು ಎಂಬ ವಿಷಯಗಳಲ್ಲಿ ಬೋಧನೆ ಮಾಡಬೇಕು. ಅವರನ್ನು ಇದಕ್ಕಾಗಿ ಉಪಯೋಗಿಸಿಕೊಂಡರೆ ಒಳ್ಳೆಯದು. ಈಗ ಸಾಮಾನ್ಯ ಮನುಷ್ಯನ ಜೀವನದ ನೈತಿಕಮಟ್ಟ ಇಳಿದು ಹೋಗಿದೆ. ಅದು ಉತ್ತಮವಾಗುವವರೆಗೂ ದೇಶ ಉದ್ಧಾರವಾಗುವುದಿಲ್ಲವೆಂದು ಹೇಳುತ್ತೇನೆ. ಬಿ.ಎ., ಎಂ.ಎ. ಪಾಸ್ ಮಾಡಿಕೊಂಡು ಹುಡುಗರು ಕಾಲೇಜುಗಳಿಂದ ಬರುವುದಕ್ಕೆ ದುಡ್ಡು ಖರ್ಚು ಮಾಡುವುದಕ್ಕಿಂತ ಕಾಲೇಜುಗಳಲ್ಲಿರತಕ್ಕ ಪ್ರೊಫೆಸರುಗಳನ್ನು ಮತ್ತು ಉಪಾಧ್ಯಾಯರುಗಳನ್ನು ಈ ಕೆಲಸಕ್ಕಾಗಿ ಉಪಯೋಗಿಸಿಕೊಂಡು ಹಣ ಖರ್ಚು ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆಯೋ ಏನೋ ಎಂದು ಹೇಳತಕ್ಕ ಭಾವನೆ ನನ್ನಲ್ಲಿ ಇದೆ. ಆದರೆ ಇದಕ್ಕೆ ಧೈರ್ಯಬೇಕು. ಕಾಲೇಜುಗಳನ್ನು ತೆಗೆದುಬಿಟ್ಟು ಹುಡುಗರು ಪೋಲಿ ಬಿದ್ದರು, ಮನೆಯಲ್ಲಿದ್ದ ಹುಡುಗರು ಕಾಲೇಜಿಗೆ ಹೋಗುತ್ತಿದ್ದರು ಇತ್ಯಾದಿಯಾಗಿ ಆಕ್ಷೇಪಣೆ ಬರುತ್ತದೆ. ಆದರೆ ಎದೆಗಾರಿಕೆಯಿಂದ, ಧೈರ್ಯದಿಂದ ಆ ಹುಡುಗರನ್ನು ಹಳ್ಳಿಗಳಲ್ಲಿ ಅಥವಾ ಬೇರೆ ಕಡೆ ಇಟ್ಟು ಅವರಿಂದ ಕೆಲಸ ಕಾರ್ಯಗಳನ್ನು ಮಾಡಿಸಿ ತಕ್ಕ ಕಾರ್ಯಕ್ರಮ ಕೈಗೊಳ್ಳುವುದು ಸೂಕ್ತ; ಆ ರೀತಿ ಮಾಡಿದರೆ ಇವತ್ತು ಇರತಕ್ಕ ಪರಿಸ್ಥಿತಿ ಸುಧಾರಿಸಬಹುದೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಬರಿ ಹರಿದು ಹೋದ ಬಟ್ಟೆಗೆ ತೇಪೆ ಹಾಕುವುದರಿಂದ ಯಾವ ಉಪಯೋಗವೂ ಇಲ್ಲ. ಅಂಥಾ ಕಾರ್ಯಕ್ರಮದಿಂದ ದೇಶದ ಪರಿಸ್ಥಿತಿ ಸುಧಾರಿಸುತ್ತದೆ ಎಂದು ನಾನು ಖಂಡಿತ ನಂಬಿಲ್ಲ. ಈ ಪರಿಸ್ಥಿತಿಯನ್ನು ನಾವು ಮೂರು ವರ್ಷಗಳಿಂದಲೂ ನೋಡುತ್ತಿದ್ದೇವೆ. ಸರ್ಕಾರದವರಾಗಲೀ, ವಿರೋಧ ಪಕ್ಷದವರಾಗಲೀ, ನಮಗಾಗಲೀ ಹೆಚ್ಚು ಯಾವ ಸದುದ್ದೇಶದಲ್ಲೂ ಭಿನ್ನಾಭಿಪ್ರಾಯವಿಲ್ಲ. ಉದ್ದೇಶ ಒಂದೇ ಆದರೂ ಅದನ್ನು ಕಾರ್ಯರೂಪದಲ್ಲಿ ತರಲು ಏನು ಮಾಡಬೇಕೆಂಬುದರಲ್ಲಿ ಒಬ್ಬರು ಒಂದು ರೀತಿ ಹೇಳುತ್ತಾರೆ, ಇನ್ನೊಬ್ಬರು ಇನ್ನೊಂದು ರೀತಿ ಹೇಳುತ್ತಾರೆ. ಮೂರು ವರ್ಷದಿಂದಲೂ ನೀವು ಮಾಡುತ್ತಿರುವ ಕಾರ್ಯಕ್ರಮವನ್ನು ನೋಡುತ್ತಿದ್ದೇವೆ. ಅದರಿಂದ ಹೆಚ್ಚು ಉಪಯೋಗವಾಗಿಲ್ಲ. ಸ್ವಲ್ಪ ಉಪಯೋಗವಾಗಿದೆ. ಅದು ಸಾಕಾಗಿಲ್ಲ, ಈಗ ನೀವು ಹೋಗುತ್ತಿರುವ ವೇಗದಲ್ಲಿ ಹೋದರೆ ಇನ್ನೂ ಎಷ್ಟು ವರ್ಷವಾದರೂ ಪ್ರಯೋಜನವಾಗುವುದಿಲ್ಲ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಎಲ್ಲಿಯವರೆಗೆ ನೀವು ಈಗಿರತಕ್ಕ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದಿಲ್ಲವೋ ಅಲ್ಲಿಯವರೆಗೂ ದೇಶಕ್ಕೆ ಹಿತವಿಲ್ಲ. ಈಗಿರತಕ್ಕ ಪರಿಸ್ಥಿತಿಯಿಂದ ಉಂಟಾಗತಕ್ಕ ಕಷ್ಟ ನಿಷ್ಠುರಗಳನ್ನು ಇನ್ನು ಜನರು ಸಹಿಸಲಾರರು. ಅದನ್ನು ಮೂಲೋತ್ಪಾಟನ ಮಾಡಿ, ತೇಪೆ ಹಾಕುವ ತಂಟೆಗೆ ಹೋಗಲು ಪ್ರಯತ್ನ ಮಾಡದಿರುವವರೆಗೂ ನಮ್ಮ ಕಷ್ಟ ತಪ್ಪಿದ್ದಲ್ಲ. ಆಹಾರದ ಪರಿಸ್ಥಿತಿ ಸುಧಾರಿಸುವುದರಲ್ಲಿ ಕೂಡ ಅಂಥಾ ದೊಡ್ಡ ಬದಲಾವಣೆ ಜಾರಿಗೆ ತರಬೇಕು. ಹಾಗೆಯೇ ಬಟ್ಟೆಯ ಪರಿಸ್ಥಿತಿಯಲ್ಲೂ ಸಹ ಬದಲಾವಣೆ ಮಾಡಬೇಕು.

ಇನ್ನು ಕೈಗಾರಿಕೆಗಳ ವಿಚಾರ ಹೆಚ್ಚಾಗಿ ಹೇಳುವುದಿಲ್ಲ. The less I talk about it the better. ಇಷ್ಟು ಮಾತ್ರ ಹೇಳಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅನೇಕ ಅಂಶಗಳನ್ನು ತಿಳಿಸಿ ಅವುಗಳ ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಈ ಒಂದು ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

Mr SPEAKER.—The House will adjourn for half an hour for lunch.

The Assembly adjourned for lunch at Thirty-Five Minutes past Ten of the Clock and re-assembled at Five Minutes past Eleven of the Clock, Mr. Speaker (The Hon'ble Sri V. Venkatappa in the Chair),

---

Srimathi RATNAMMA ISAAC (Kolar District—General).—Sir, we are grateful to His Highness for graciously opening the Assembly with an Address and we Christians are specially thankful to His Highness' gracious words of appreciation of *Rajamantrapravina Diwan Bahadur* K. Matthan. To us, Indian Christians, his death is an irreparable loss.

His Highness states that the Government are exploring ways and means for developing on a modest scale such of our industries as have an assured market or are of vital importance to our national economy. We Mysoreans have been used to the feeling that we lead India in the matter of industrial development. Until recently this was true. But unfortunately, for the past three years, there has been more exploring than any achievement. As early as 1946 an expert committee published volumes in connection with development schemes for Mysore. Many of the schemes were actually taken up and implemented half-way. Now, again, new deliberations have been started and the natural and usual developments that we were accustomed to, have been dropped in

favour of further reports, and further plans and paper schemes. Let me touch on one simple case where I have details. As a result of 1946 plans, nearly six lakhs worth of modern plants and four lakhs worth of raw materials were stocked in one of our factories for the manufacture of irrigation pumps and their accessories which we need badly for the Grow More Food campaign. The plant and the material have been lying idle for the past 2½ years while we for Grow More Food campaign still prefer to send Mysore money out of the State for bringing in foreign things from outside. After fourteen years of experience in the manufacture of transformers, schemes planned for the economical manufacture of these were first sanctioned by the Government, but the implementation is forbidden, on the basis that Messrs. Westinghouse of America were going to teach us at considerable cost to us how to manufacture transformers. I also learn that for our urgent requirements transformers, etc., are now being purchased from Japan at a cost of Rs. 30 lakhs. While there is material stocked in our factory for 3,000 motors and pumping sets, our factory has been instructed to stop production.

Mahatmaji in preference to foreign cloth asked us to wear Khaddar. Perhaps we have so soon forgotten him.

Messrs. Simpson & Co., have been pressing for the agency of electric motors for the past 1½ years and they have been constantly refused during this period. I feel so sad to state that our Government cannot claim the establishment of even essential improvements to the industries of the State and their capacity for scheming new industries is very unlikely. While our revered leader Panditji insists on work for this generation, our Government on the other hand want to be sponsored at fabulous expenditure by America.

India can never gain any status in its industrial contribution to the economy of the world unless we go on steadly with what we have got and achieved.

Then again Sir, in His Highness's Address I felt that the women's sphere of life—medical and public health—were not touched upon. Now there is a chance for a senior woman being selected as Senior Surgeon since the post is falling vacant and we the women of the State are anxious to see that this post is offered to this senior Lady Doctor. With these words I commend the motion.

*Janab MAHMOOD SHARIFF (Mysore *cum* Mandya *cum* Hassan—Muslim).—Mr. Speaker, Sir, the Address delivered so generously by His Highness the Maharaja to this august House, covers almost all the points which have been agitating the public mind not only in Mysore but outside it. The main problem which has been touched upon by him and which has given to all of us a great concern is the one relating to the shortage of food and cloth. This problem is becoming acuter in spite of the fact that hopes were entertained a short time ago that the situation is going to become easy. But, unfortunately it has become considerably bad. With the war clouds appearing on the horizon and the whole atmosphere seething with war fear, I do not know what is in store for us. The extent of suffering and hardship experienced by the common man and the consequent loss of vitality due to the meagre supplies given to him in the shape of rations are too well known to the Members of this House that it is not necessary for me to dilate upon them. It is said Sir, by all the medical men that diseases are attributable to malnutrition and under-nutrition. The supply of sufficient food grains is essential for keeping our health. If supposing the present insufficient supply goes on, I am afraid the national health will soon be in jeopardise. Apart from that, it seems to me, if any indifferent attitude is adopted as we have been adopting in this behalf, the State may probably have to face the problem of communism. Communism, if we examine it in detail, arises out of discontentment like non-supply of food stuffs and non-availability of accommodation. If

* Speech not revised by the Hon'ble Member concerned.

(JANAB MAHMOOD SHARIFF).

one were to trace the history of communism, —so many books have been written and so much is said about it— it is due to discontentment arising from some of these factors. Therefore, I think it is very necessary for every citizen to strive his nerve and see what best is done to stop this communism. In this connection I may refer to the remarks made by His Highness that this is no time for complacency. We are thinking that we are going to get food from outside. But the Centre again and again has declared that 1951 would be the target for self-sufficiency in food and that they would not import even an ounce of food grains from outside thereafter. But it would not be desirable that they should elude themselves in the belief that they would become self-sufficient in the year 1951, although every attempt is being made by the Centre and by the State Government in that direction. It seems to me therefore that taking all the circumstances into consideration the target which has been placed before us *i.e.*, 1951, is as a matter of fact impossible to be reached. Therefore, with this point before us, we have to once again plan and see how best we can face the situation.

In the first place, I would suggest that this is not the time for them to venture upon schemes of doubtful utility. Enthusiasm will have to be employed in going on with industrial, agricultural and other policies. But enthusiasm must not run riot. We will have to put first things first instead of spending our money on industrial and other schemes. All of us will have to concentrate to see that production of food-grains becomes successful.

Another point which I would refer to the Government is, thousands of acres of land are lying fallow in the malnad region. Nobody is turning his attention to improve the malnad although again and again, on the floor of the Representative Assembly and on the floor of the Legislative Council, the Malnad representatives tried to divert the attention of the Government for the improvement of the conditions there. But, unfortunately they have done nothing satisfactory. No doubt attempts have been made to see that improvements are effected in Malnad area. But unfortunately, we are lingering and we have not applied ourselves to the task in all earnestness. I have gone to Malnad region during the course of my tours. I have seen places there and contacted the people, and I can say without fear of contradiction,—everybody is going to bear with me,—that the water available there in the monsoon season is plenty for cultivation. If we are going to husband our resources there, lot of paddy could be cultivated in that area. Government should only apply itself to this task. It may be argued that labour is not available and that in spite of the best effort of the Government people are not coming forward to cultivate on account of malaria that is prevalent there. But it has been proved in the course of two or three years that malaria could be brought under control. Successful experiments are going on and so far as this incidence is concerned, it can be stopped. I do not know when the Government is turning its attention towards this. So far as the Grow More Food campaign is concerned, it could be made easy.

The third thing is that there is no sufficient vigilance in order to bring the blackmarketeers to book. Although the Hon'ble Home Minister has been pleased to say that the Police has been doing its best, I am afraid that large stocks have been left in the hands of people in the urban and rural areas. On account of want of vigilance, people possessing these stocks are not coming forward to surrender their grain which must be made available to the people. We will have to cajole them and persuade them to part with the surplus grain with great vigilance. By that I do not mean, as was complained by Sri H. M. Channabasappa, that the Police should enter houses during night time and take forcible possession of grain. That would be too much. What I say is that sufficient vigilance has not been exercised. Better means have got to be adopted to appeal to the people to release their

surpluses for the use of the general public. That has not been done. Persuasive means have got to be adopted. These are some of the steps which I would request the Government to adopt in this matter.

One other matter which has been referred to by His Highness the Maharaja is about the dispensing with the services of the officers of the military department. I do not like to dilate upon this point. The misery which these people are undergoing on account of sudden dismissal is too much. These people have been very efficiently managing themselves. They have discharged their duties very efficiently. They have gone to the battle field and even after putting service of 25 years with distinction, their services have been dispensed with and their case is disposed of in a summary manner. It only shows that there is something rotten in the State of Denmark. Well Sir, it seems to me that we have sufficiently given in to the Centre. In every field of activity, to whatever they have said we have given in and it is time for us to reverentially appeal to them that we are not going to submit ourselves to humiliations any more. We know that for the sake of uniformity all the units must be made to work together. But that does not mean that the rights of the units must be trampled upon. The whole chain consists of links and each link should be strong. Otherwise, the chain itself is going to crack.

Sri B. M. SHAMANNA GOWDA Bangalore (Retroceded Area)—General).—Why reverentially?

A VOICE.—Vehemently!

Janab MAHMOOD SHARIFF.—I would submit, Sir, that the Members of the Government and those who represent our State must bring to bear their influence upon the Government of India and tell them pointedly that in deciding the fates of these people they must take into consideration all the relevant facts and deal with their case in the most sympathetic manner possible. Otherwise, it is just possible that communism and such like theories might receive an impetus from such circumstances.

The last point which I want to dwell upon is the one relating to the administrative services. Fortunately for us the Board which has been constituted for this purpose is examining our officers. I may declare on the floor of this House that these officers are second to none in their vision and efficient discharge of their duties and that others may have even to take lessons from them in this respect. If the claims of such people are going to be ignored, I think the morale of the services is going to be lost. Therefore, I think it is time for the Government to see that the claims of these officers are dealt with justly. The Government should not give in here also. So many misgivings are already in the air. People are already talking loosely so many things. It is therefore just the time that our Government make up their minds and impress upon their attention that in view of the fact that our officers are second to none they should not be dealt with unjustly.

These are some of the points which I wanted to touch upon while going through the Address so generously delivered by His Highness and I associate myself with the resolution which was moved by my friend Sri H. K. Veeranna Gowda.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ಮಾಡಿದ ಭಾಷಣಕ್ಕಾಗಿ ವಂದನೆಗಳನ್ನರ್ಪಿಸತಕ್ಕದ್ದು ನಮ್ಮ ಮುಖ್ಯ ಕರ್ತವ್ಯ. ಅವರು ಜನತೆಯ ಮುಂದಿರತಕ್ಕ ಅನೇಕ ಮಹತ್ತರವಾದ ಪ್ರಶ್ನೆಗಳ ಪೈಕಿ ಒಂದೆರಡನ್ನು ಮಾತ್ರ ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಜನತೆಯ ಮುಂದಿರತಕ್ಕ ಇನ್ನೂ ಅನೇಕ ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಎನ್ನಿಸುತ್ತದೆ. ರಾಜಪ್ರಮುಖರ ಭಾಷಣವಾಗುತ್ತಿರುವಾಗ ಸರ್ಕಾರದ ರೀತಿ ನೀತಿಗಳ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಏನು ಹೇಳುತ್ತಾರೋ ಎಂದು ದೇಶಾದ್ಯಂತ ಜನರು ಕಾತುರತೆಯಿಂದ ನೋಡುತ್ತಿದ್ದರು. ಆದರೆ ಈ ಭಾಷಣದಲ್ಲಿ ಅವರು ಮೂರು ನಾಲ್ಕು ಅಂಶಗಳನ್ನು ಮಾತ್ರ ಒತ್ತಿ ಹೇಳಿ ಪ್ರಸ್ತಾಪಮಾಡಿದ್ದಾರೆ. ಒಂದನೆಯದು ಆಹಾರದ ವಿಚಾರ. ದವಸ ಧಾನ್ಯಗಳ ಬೆಲೆಗಳ ಏರಿಕೆ ವಿಚಾರ ಎರಡನೆಯದು. ಆಹಾರಾಭಾವದ ವಿಚಾರ ಮೂರನೆಯದು. ಈ ಅಭಾವವನ್ನು ಸರ್ಕಾರದವರು ಯಾವ ರೀತಿ ಪರಿಹಾರಮಾಡಬೇಕೆಂಬ ವಿಚಾರ, ನಾಲ್ಕನೆಯದು. ಅಡ್ಮಿನಿಸ್ಟ್ರೇಟಿವ್ ಸರ್ವಿಸಸ್, ಮಿಲಿಟೆರಿ ಸರ್ವಿ

* Speeches not revised by the member concerned.

(ಶ್ರೀ ಎಚ್. ಎಂ. ಚೆನ್ನಬಸಪ್ಪನವರು.)

ನಸ್ ಮತ್ತು ಕೈಗಾರಿಕೆಗಳ ವಿಚಾರ ಐದನೆಯದು. ಹೀಗೆ ಜನತೆಯ ಮುಂದಿರತಕ್ಕ ಇನ್ನೂ ಅನೇಕ ಮಹತ್ವದ ಪ್ರಶ್ನೆಗಳಿವೆ. ಆ ವಿಚಾರದಲ್ಲಿ ಸರ್ಕಾರದ ನೀತಿ ಏನೆಂಬುದನ್ನು ಪ್ರಸ್ತಾಪಮಾಡುತ್ತಾರೆಂದು ನಿರೀಕ್ಷಣೆಮಾಡಿದವರಲ್ಲಿ ನಾನೂ ಒಬ್ಬನು. ಆ ರೀತಿ ಪ್ರಸ್ತಾಪಮಾಡದೇ ಇದ್ದುದಕ್ಕಾಗಿ ನನಗೆ ಪಶ್ಚಾತ್ತಾಪವಾಗಿದೆ. 1950ನೆಯ ಜನವರಿ 26ನೆಯ ತಾರೀಖು ಹೊಸ ರಾಜ್ಯಾಂಗ ಜಾರಿಗೆ ಬಂದ ಮರುದಿನವೇ ಪಬ್ಲಿಕ್‌ಸರ್ವಿಸ್ ಕಮಿಷನ್ ನಮ್ಮ ಸಂಸ್ಥಾನದಲ್ಲಿ ಏರ್ಪಾಟಾಗಬೇಕಾಗಿತ್ತು.

Mr. SPEAKER.—The Hon'ble Member must speak either on the main motion or on the amendment,

Sri H. M. CHANNABASAPPA.—I beg to submit that I am only drawing the attention of the House that these matters have been omitted.

Mr. SPEAKER.—Those points could have been brought in by means of an amendment to the Address of Thanks. But the Hon'ble Member has not given notice of any such amendment.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ರಾಜಪ್ರಮುಖರ ಭಾಷಣದಲ್ಲಿ ಸರ್ಕಾರದ ನೀತಿಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುವುದು ಒಂದು ಸಂಪ್ರದಾಯ. ಈ ಭಾಷಣದಲ್ಲಿ ಅವುಗಳನ್ನು ಸೇರಿಸಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು.—ಯಾವುದನ್ನು ಸೇರಿಸದೆ ಬಿಟ್ಟಿದ್ದಾರೋ ಅಂತಹ ವಿಷಯಗಳನ್ನು ತಿದ್ದುಪಡಿಯ ಮೂಲಕ ಹೇಳಬಹುದು. ವಂದನಾಸಮರ್ಪಣೆ ಸೂಚನೆಯ ಮೇಲೆ ಮಾತನಾಡುವಾಗ ಇಂತಿಂಥಾ ವಿಷಯಗಳನ್ನು ಹೇಳದೆ ಬಿಟ್ಟಿದ್ದಾರೆಂದು ಹೇಳುವಹಾಗಿಲ್ಲ. ಅವರು ಭಾಷಣದಲ್ಲಿ ಏನು ಹೇಳಿದ್ದಾರೋ ಅದನ್ನು ಹೇಳಬಹುದೇ ಹೊರತು ಏನು ಹೇಳಲ್ಲವೋ ಅದನ್ನು ಹೇಳುವ ಹಾಗಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೋದಸಾರಿ ಇದೇ ವಿಷಯದಲ್ಲಿ ಮಾತನಾಡುವಾಗ ಯಾವ ಯಾವುದನ್ನು ಬಿಟ್ಟಿದ್ದರು ಎಂಬುದನ್ನೂ ಹೇಳಿದುದು ನನಗೆ ಜ್ಞಾಪಕವಿದೆ. ಅದು ರಿಕಾರ್ಡಾಗಿದೆ, ನೋಡಬಹುದು, ಅದನ್ನು ಪ್ರಸ್ತಾಪಮಾಡಿದೆ. ಆದರೂ ಅಧ್ಯಕ್ಷರು ಅದನ್ನು ಮಾಡುವುದು ಅಪ್ರಕೃತವೆಂದು ಹೇಳಿದರೆ ಅದನ್ನು ಬಿಟ್ಟುಬಿಡುತ್ತೇನೆ.

ಮುಖ್ಯವಾಗಿ ಈಗ ಅವರ ಭಾಷಣದಲ್ಲಿ ಆಹಾರದ ವಿಚಾರ ಪ್ರಸ್ತಾಪಮಾಡಿದ್ದಾರೆ. ದೇಶದಲ್ಲಿ ಆಹಾರಾಭಾವ 1943ರಿಂದ ಪ್ರಾರಂಭವಾಯಿತೆಂದು ಈಗಿರತಕ್ಕ ವಸ್ತುಸ್ಥಿತಿಯಿಂದ ಗೊತ್ತಾಗುತ್ತದೆ. ಆಗ ಎಷ್ಟು ಅಭಾವವಿತ್ತು, ಈ ಹೊತ್ತು ಎಷ್ಟು ಅಭಾವವಿದೆ, ವರ್ಷ ವರ್ಷವೂ ಎಷ್ಟು ಅಭಾವ ಹೆಚ್ಚುತ್ತಿದೆ, ಇದಕ್ಕೆ ಏನು ಕಾರಣ, ಇದನ್ನೆದುರಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದು ಈಗಿನ ಪರಿಸ್ಥಿತಿಯನ್ನು ನೋಡಿದರೆ ಹೊರಬೀಳುತ್ತದೆ. ದವಸಧಾನ್ಯಗಳ ಮತ್ತು ಇತರ ಆಹಾರ ಪದಾರ್ಥಗಳ ಬೆಳೆಗಳು ದಿಗ್ಭ್ರಮೆಗೊಳಿಸತಕ್ಕದ್ದಾಗಿವೆಯೆಂದು ಶ್ರೀಮನ್ಮಹಾರಾಜರವರು ಹೇಳಿದ್ದಾರೆ. ಹೆಚ್ಚು ಪ್ರಮಾಣದಲ್ಲಿ ಬೆಳೆದರೆ ವಿನಾ ಬೇರೆ ಗತ್ಯಂತರವಿಲ್ಲವೆಂದು ಹೇಳಿದ್ದಾರೆ. ಜೊತೆಗೆ ಸರ್ಕಾರದವರು ಕೈಕೊಳ್ಳುವ ಕಾರ್ಯಾಚರಣೆಯನ್ನೂ ಅವಲಂಬಿಸಿವೆಯೆಂದೂ ಹೇಳಿದ್ದಾರೆ. ಕಳೆದ ಐದಾರು ವರ್ಷಗಳಿಂದ ಸರ್ಕಾರದವರು ಕೈಕೊಂಡಿರುವ ಕಾರ್ಯಾಚರಣೆಯಿಂದ ಈ ಸಮಸ್ಯೆ ಬಗೆಹರಿದಿಲ್ಲ, ಕಾರ್ಯ ಪರಿಣಾಮಕಾರಿಯಾಗಿಲ್ಲ ಎಂದು ಅವರು ಸತ್ಯಾಂಶವನ್ನು ಹೇಳಿದ್ದಾರೆ.

ಅವರು ಹೀಗೆ ಸತ್ಯಾಂಶಗಳನ್ನು ಹೊರಗೆಡವಿರತಕ್ಕ ಬಗ್ಗೆ ನನಗೆ ಬಹಳ ಸಂತೋಷವಾಯಿತು. ಈಗಲಾದರೂ ಸರ್ಕಾರದವರು ಇದೆಲ್ಲವನ್ನೂ ಮನಗಂಡು, ಇದುವರೆಗೂ ಈ ಸಮಸ್ಯೆಗಳೆಲ್ಲವೂ ಏತಕ್ಕಾಗಿ ಬಗೆಹರಿಯಲಿಲ್ಲ, ನಾವು ಕೈಗೊಂಡ ಕಾರ್ಯಕ್ರಮಗಳಲ್ಲಿ ಏನೇನು ನ್ಯೂನಾತಿರಿಕ್ತಗಳಿವೆಯೆಂಬುದನ್ನು ಈಗಲಾದರೂ ಪರಿಶೀಲನೆಮಾಡಿಕೊಂಡು, ಮುಂದಕ್ಕೆ ತಮ್ಮ ಕಾರ್ಯನೀತಿಯನ್ನು ಸರಿಪಡಿಸಿಕೊಳ್ಳಲೆಂಬ ಉದ್ದೇಶದಿಂದ ಕೆಲವು ಲೋಪ ದೋಷಗಳನ್ನು ಎತ್ತಿ ತೋರಿಸಬೇಕೆಂಬ ಭಾವನೆಯಿಂದಲೇ ಅವರು ಹೀಗೆ ಹೇಳಿರಬಹುದು. ಅದಕ್ಕಾಗಿ ನಾನು ಅವರನ್ನು ವಂದಿಸಬೇಕಾಗಿದೆ. ಆದರೆ ಈಗ ತಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮದ ಯೋಜನೆಯ ಪ್ರಕಾರ ಆಹಾರ ವಸ್ತುಗಳ ಬಗ್ಗೆ ನಾವು ಸ್ವಪರಿಪೂರ್ಣತೆಯನ್ನು ಪಡೆಯಲು ಖಂಡಿತ ಸಾಧ್ಯವಿಲ್ಲವೆಂಬ ಅಂಶವನ್ನು ನಿಸ್ಸಂದೇಹವಾಗಿ ಹೇಳಬಹುದು. ಈಗಾಗಲೇ ಶ್ರೀ ಎಂ. ಎನ್. ಜೋಯಿಸರವರು ಹೇಳಿರುವಂತೆ ಈ ಗ್ರೋಮೋರ್ ಫುಡ್ ಯೋಜನೆಯ ಬಗ್ಗೆ ಇಲ್ಲಿಯ ತನಕ ಖರ್ಚು ಮಾಡಿರುವ $14\frac{1}{2}$ ಕೋಟಿ ರೂಪಾಯಿಗಳೆಲ್ಲ ನಿರರ್ಥಕವಾಗಿ ಹೋಗಿದೆ.

ಅಧ್ಯಕ್ಷರು.—ಅವರು ಒಂದು ಕಡೆ ವರ್ಷಕ್ಕೆ 10 ಕೋಟಿ ಖರ್ಚಾಯಿತೆಂದೂ ಮತ್ತೊಂದು ಸಲ ವರ್ಷಕ್ಕೆ 13 ಕೋಟಿ ಖರ್ಚಾಗಿರುತ್ತೆಂದೂ ತಿಳಿಸಿದ್ದಾರೆ......

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಫುಡ್ ಸಬ್‌ಸಿಡಿ ಇತ್ಯಾದಿಗಳ ಬಗ್ಗೆ ಖರ್ಚಾಗಿರುವುದನ್ನೆಲ್ಲಾ ಸೇರಿಸಿಕೊಂಡರೆ ಶ್ರೀ ಜೋಯಿಸರು ಹೇಳಿರುವ ಪ್ರಕಾರ $14\frac{1}{2}$ ಕೋಟಿ ಸರಿಯಾದ ಸಂಖ್ಯೆಯೆಂದು ತಿಳಿಯುತ್ತದೆ. ಇರಿಗೇಷನ್ ಒಂದರ ಬಗ್ಗೆಯೇ ಕಳೆದ 6-7 ವರ್ಷಗಳಲ್ಲಿ 350·03 ಕೋಟಿ ರೂಪಾಯಿಗಳಷ್ಟು ಖರ್ಚಾಗಿವೆ. ಅಂದಮೇಲೆ ಈ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಬಗ್ಗೆ ಮತ್ತು ಇತರ ಎಲ್ಲಾ ಈ ಸಂಬಂಧವಾದ ಖರ್ಚುಗಳೂ ಸೇರಿ $10\frac{1}{2}$ ಕೋಟಿ ರೂಪಾಯಿಗಳಾಗಿವೆ. ಈ ಎಲ್ಲಾ ಬಾಬುಗಳನ್ನೂ ಒಟ್ಟುಗೂಡಿಸಿದರೆ $14\frac{1}{2}$ ಕೋಟಿ ರೂಪಾಯಿಗಳು ಖರ್ಚಾಗಿವೆ. ಆದಾಗ್ಯೂ ಈ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿಲ್ಲ. (An Hon'ble Member : 'Question') ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿರುವುದಿಲ್ಲವೆಂಬುದಕ್ಕೆ ನಾನೀಗ ಕೆಲವು ನಿದರ್ಶನಗಳನ್ನು ಕೊಡಬೇಕಾಗಿದೆ. ಮಾನ್ಯ ಮಂತ್ರಿಗಳು ತಿಳಿಸಿರತಕ್ಕ ಅಂಕಿ ಅಂಶಗಳ ಆಧಾರದ ಪ್ರಕಾರ 1943–44ರಿಂದೀಚೆಗೆ ಉಳುಮೆಯಾಗುತ್ತಿದ್ದಂಥ ಜಮೀನಿನ ಪೈಕಿ 8 ಲಕ್ಷ ಎಕರೆಗಳಲ್ಲಿ ಬೆಳೆ ಬೆಳೆಯುವುದು ಕಮ್ಮಿಯಾಗಿದೆ. ಆದರೆ ಪ್ರತಿಯೊಬ್ಬರಿಗೂ ಹೆಚ್ಚು ಹೆಚ್ಚಾಗಿ ಜಮೀನುಗಳನ್ನು ಪಡೆದುಕೊಳ್ಳಬೇಕೆಂಬ ಆಶೆ ಆಕಾಂಕ್ಷೆಗಳಿಂದ ತುಂಬಿದ್ದು ಕಳೆದ ನಾಲ್ಕಾರು ವರ್ಷಗಳಲ್ಲಿ ಸರ್ಕಾರದವರಿಂದ ಕೆಲವರು ಜಮೀನುಗಳನ್ನು ಪಡೆದಿದ್ದಾರೆ. ಆದಾಗ್ಯೂ ಪ್ರಯೋಜನವೇನೂ ಇಲ್ಲ. 1943-44 ರಲ್ಲಿ 13 ಲಕ್ಷ ಎಕರೆಗಳಷ್ಟು ಇದ್ದ ಪಾಳುಭೂಮಿಯು ಇಂದು 20 ಲಕ್ಷಕ್ಕೆ ಏರಿದೆ. ಅಂದಮೇಲೆ ಆಹಾರದ ಬೆಳೆ ಕಮ್ಮಿಯಾಗಿರತಕ್ಕದ್ದರಲ್ಲಿ ಏನಾಶ್ಚರ್ಯ! ಇದರ ಜೊತೆಗೆ ಈ ಆಹಾರ ಸಾಮಗ್ರಿಗಳ ಬೆಳೆಯನ್ನೂ ಕೂಡ ಇತ್ತೀಚೆಗೆ ಜನರು ಕಡಿಮೆಮಾಡುತ್ತಿದ್ದಾರೆ. ಯಾವ ಬೆಳೆಗಳನ್ನು ಬೆಳೆದರೆ ಬೆಲೆ ಹೆಚ್ಚಾಗಿ ದೊರೆಯುತ್ತದೆಯೋ

ಅಂಥಾ ಬೆಳೆಗಳನ್ನೇ ರೈತರು ಈಗ ಬೆಳೆಯತೊಡಗಿದ್ದಾರೆ. ಈ ಎಲ್ಲ ಕಾರಣಗಳನ್ನೂ ಒಟ್ಟುಗೂಡಿಸಿ ಒಂದು ಮಾತಿನಲ್ಲಿ ಹೇಳುವುದೆಂದರೆ ವ್ಯವಸಾಯಗಾರರಿಗೆ ವ್ಯವಸಾಯದ ಕಸುಬಿನಲ್ಲಿ ಅಷ್ಟು ವ್ಯಾಮೋಹವಿದ್ದಂತೆ ಕಾಣುತ್ತಿಲ್ಲ. ಆ ವ್ಯಾಮೋಹ ಕಮ್ಮಿಯಾಗಿದೆ. ನಾನು ಇಷ್ಟೆಲ್ಲವನ್ನೂ ಹೇಳಿದನಂತರ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆಂಬುದೂ ಕೂಡ ನನಗೆ ಗೊತ್ತೇ ಇದೆ. ನಾವು ಎಷ್ಟು ಕೆರೆಗಳನ್ನು ಕಟ್ಟಿಸಿ, ಎಷ್ಟು ಕೆರೆಗಳ ರಿಪೇರಿ ಮಾಡಿಸಿದ್ದಾಗ್ಯೂ, ಕಾಲುವೆಗಳನ್ನು ತೆಗೆಸಿದ್ದಾಗ್ಯೂ, ಇಷ್ಟೆಲ್ಲಾ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾಗ್ಯೂ, ನೀವು ಏನು ಮಾಡಿದ್ದೀರಿ, ಅಂಥ ಮಹತ್ಕಾರ್ಯಗಳ್ಯಾವುದನ್ನೂ ಮಾಡಲಿಲ್ಲವೆಂದು ಹೇಳುವುದು ಯಾವ ನ್ಯಾಯ' ಎಂದು. ಹೀಗೆ ಕೆರೆ ಕಾಲುವೆಗಳನ್ನು ಕಟ್ಟಿಸತಕ್ಕ ಕೆಲಸ ಬಹಳ ವರ್ಷಗಳ ಹಿಂದಿನಿಂದಲೂ ನಡೆದುಕೊಂಡು ಬರುತ್ತಿರುವ ಕೆಲಸ. ಇದು ಇಂದೂ ನಡೆಯುತ್ತಿದೆ, ಇನ್ನು ಮುಂದಕ್ಕೂ ನಡೆಯತಕ್ಕದ್ದೇ ಆಗಿದೆ. ಆದರೆ ನಾನೀಗ ಕೇಳುತ್ತಿರುವುದು ಮುಖ್ಯವಾಗಿ ಜನಸಾಮಾನ್ಯರಿಗೆ ಇಂದು ಇದರಿಂದಾಗಿರುವ ಫಲವೇನು; ಎಂದು. ಮುಖ್ಯವಾಗಿ ಜನರು ಕೇಳತಕ್ಕ ವಿಚಾರ ಇದು. ಆದರೆ ಮಾನ್ಯ ಮಂತ್ರಿಗಳು ಹೇಳತಕ್ಕ ಅಂಶಗಳ ಬಗ್ಯೆ ಹೆಚ್ಚು ಭೂಮಿ ಸಾಗುವಳಿಗೆ ಬಂದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಈ ಆಹಾರ ಪದಾರ್ಥಗಳ ಬಗ್ಯೆ ಶೇಖರಿಸಿ ಹೇಳುತ್ತಿರುವ ಅಂಕಿ ಅಂಶಗಳನ್ನು ಅಷ್ಟು ಸರಿಯಾಗಿಲ್ಲವೆಂದು ನಾನು ಅವರಿಗೆ ತಿಳಿಸಬೇಕಾಗಿದೆ. ಈ ಉದ್ದೇಶಕ್ಕಾಗಿಯೇ ನಾನೀಗ ಮಾತನಾಡಲು ಎದ್ದು ನಿಂತಿದ್ದೇನೆ. ಈ ಬಗ್ಯೆ ಇವರು ಇಲ್ಲಿಯತನಕಲೂ ಮಾಡಿರುವ 14 ಕೋಟಿ ರೂಪಾಯಿಗಳು ನಷ್ಟವಾಯಿತೆಂದು ಹೇಳುವುದರ ಜೊತೆಗೆ ದೇಶಕ್ಕೆ ತುಂಬಾ ಅನ್ಯಾಯವೂ ಆಯಿತೆಂದು ಹೇಳಬೇಕಾಗಿದೆ. ಆದರೆ ತಾವು ಈ ಬಗ್ಯೆ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ—ಈ ದಿವಸ ದೇಶದಲ್ಲಿರುವ ಜನರ್ಯಾರೂ ಅನ್ನವಿಲ್ಲದೆ ಸತ್ತಿಲ್ಲವೆಂಬ ಅಂಶವನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಇಷ್ಟೇ ಅಲ್ಲದೆ ಜನರೆಲ್ಲರೂ ಈಗ ತಾವು ಕೊಡುತ್ತಿರುವ ಕೇವಲ 9 ಔನ್ಸುಗಳ ಆಹಾರವನ್ನೇ ನಂಬಿಕೊಂಡು ಯಾರೂ ಬ್ಲಾಕ್ ಮಾರ್ಕೆಟ್ಟಿಗೆ ಹೋಗುತ್ತಿಲ್ಲವೇ ಎಂಬ ಅಂಶವನ್ನೂ ತಾವು ಮನಗಾಣಬೇಕು. ಲಕ್ಷಾಂತರ ರೂಪಾಯಿಗಳನ್ನು ಹೊರದೇಶಕ್ಕೆ ಕಳುಹಿಸಿದಾಗ್ಯೂ ನಮಗೆ ಹೊರಗಡೆಯಿಂದ ನಿರೀಕ್ಷಿಸಿದ್ದಷ್ಟು ಆಹಾರ ಸಾಮಗ್ರಿಗಳು ಬಾರದೆ ಇದ್ದಾಗ್ಯೂ ನಾವು ಜೀವನವನ್ನು ನಿತ್ಯವೂ ಹೇಗೆ ಸಾಗಿಸಿಕೊಂಡು ಹೋಗುತ್ತಿದ್ದೇವೆಂಬ ಇಬ್ಬಂದಿ ಅಂಶಗಳನ್ನೆಲ್ಲಾ ತಾವು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರ ಸತ್ಯಾಂಶವನ್ನು ಮನಗಾಣಬೇಕು. ದೇಶದ ಜನತೆ, ಮಳೆ, ಸರಿಯಾಗಿ ನಡೆಸಲಿ, ಅಥವಾ ನಡೆಸದೆ ಹೋಗಲಿ ಈ ಕಂಟ್ರೋಲಂತೂ ಹೋಗಲೇಬೇಕೆಂಬ ಮನೋಭಾವ ಉಳ್ಳವರಾಗಿದ್ದಾರೆ. ಆದರೆ ಕೆಲವರು ಬೀರುತ್ತಿರುವ ಪ್ರಭಾವಕ್ಕೆ ತುತ್ತಾಗಿ ಈ ಹತೋಟಿ ಆಜ್ಞೆಗಳನ್ನು ತಾವು ಮುಂದುವರಿಸುತ್ತಾ ಬರುತ್ತಿದ್ದೀರಿ. ದೇಶದಲ್ಲಿ ಈ ಅನಿಶ್ಚಿತ ಸ್ಥಿತಿಯಲ್ಲಿ ಕ್ರಾಂತಿಯುಂಟಾಗುವ ಭೀತಿ ಬಂದುಹೋಗಿದೆ. ಆದರೆ ಎಂದಿನ ತನಕ ತಾವು ಅನಿಶ್ಚಿತವಾಗಿ ದೇಶದಲ್ಲಿ ಈ ಹತೋಟಿ ಆಜ್ಞೆಗಳನ್ನು ಮುಂದುವರೆಸಿಕೊಂಡು ಹೋಗುತ್ತೀರೋ ಅಂದಿನತನಕ ದೇಶಕ್ಕೆ ಈ ಕಷ್ಟ ಪರಿಸ್ಥಿತಿ ಇದ್ದೇ ಇರುತ್ತದೆ. ಆದರೆ ಮಂತ್ರಿಗಳಿಗೂ ಈ ವಿಚಾರ ಗೊತ್ತಿದೆ. ಅವರೂ ಸಹ ಕೆಲವು ವೇಳೆ ಹೊರಗಡೆ ಈ ಅಭಿಪ್ರಾಯಗಳನ್ನೇ ಹೊರಗೆಡವಿದ್ದಾಗ್ಯೂ, ಅದೇ ಅಭಿಪ್ರಾಯವನ್ನು ಅವರು ಈ ಸಭೆಯ ಮುಂದೆ ತಿಳಿಸಲು ಅವರಿಗೆ ಧೈರ್ಯವಿಲ್ಲವೆಂದು ಕಾಣುತ್ತಿದೆ. ದೇಶದಲ್ಲಿ ಎಂದಿನತನಕ ಈ ಹತೋಟಿ ಆಜ್ಞೆಗಳಿರುತ್ತವೆಯೋ ಅಂದಿನತನಕ ರೈತರಿಗೆ ವ್ಯವಸಾಯ ಮಾಡಲು ಅದರಲ್ಲಿ ವ್ಯಾಮೋಹ ಉಂಟಾಗುವುದಿಲ್ಲ. ಇಷ್ಟೇ ಅಲ್ಲದೆ ತಾವು ಯಾವಾಗ ಈ ಕಂಟ್ರೋಲ್ ಆಜ್ಞೆಯನ್ನು ಜಾರಿಯಲ್ಲಿಟ್ಟುಕೊಂಡು ಜನರಿಗೆಲ್ಲಾ ಆಹಾರ ಸಾಮಗ್ರಿಗಳನ್ನು ಕೊಡುತ್ತೇವೆಂದು ಎಲ್ಲೆಲ್ಲಿ ಹೀಗೆ ಒಂದು ಗ್ಯಾರಂಟಿಯನ್ನು ಕೊಟ್ಟಿದ್ದೀರೋ ಅಂಥಾ ಸ್ಥಳಗಳಿಗೆಲ್ಲಾ ಅಂದರೆ ಪಟ್ಟಣಗಳ ಕಡೆಗೆ, ಹಳ್ಳಿಗಳಿಂದ ಜನರು ಬರಲು ಪ್ರಾರಂಭವಾಯಿತು. ಹಳ್ಳಿಯಲ್ಲಿ ಹೀಗಾಗಿ ಈಗ ಅಲ್ಲಿನ ಜನಸಂಖ್ಯೆ ದಿನೇ ದಿನೇ ಕಮ್ಮಿಯಾಗುತ್ತಿದೆ. ಇದರ ಬಗ್ಯೆ ಏನು ಮಾಡಬೇಕೆಂದು ತಾವೇನಾದರೂ ಯೋಚನೆ ಮಾಡಿದ್ದೀರಾ? ಇಂದು ಪಟ್ಟಣವಾಸಗಳಲ್ಲಿರುವ ಜನರು ಅನುಭವಿಸುತ್ತಿರುವ ವೈಭವವನ್ನು ನೋಡಿ ಹಳ್ಳಿಯಲ್ಲಿರತಕ್ಕವರ ಮನಸ್ಸೆಲ್ಲ ಈ ಪಟ್ಟಣದ ಕಡೆಗೆ ತಿರುಗಿಹೋಗಿ ಅವರು ಮಾಡುತ್ತಿದ್ದ ವ್ಯವಸಾಯದ ಕಸುಬಿಗೆ ಈಗ ಕಲ್ಲು ಬಿದ್ದಿದೆ. ವ್ಯವಸಾಯ ಮಾಡತಕ್ಕವರ ಮನೋಭಾವ ಏತಕ್ಕೆ ಹೀಗೆ ಉತ್ಪಾದನವಾಯಿತೆಂಬುದನ್ನು ಯಾರಾದರೂ ಯೋಚಿಸಿ ನೋಡಿದ್ದೀರಾ? ಮೊದಲು ಮೇಣಿಯಮೇಲೆ ಎಷ್ಟು ಜನ ಕೈ ಇಟ್ಟಿದ್ದರು, ಇಂದು ಎಷ್ಟು ಜನ ಅದರ ಮೇಲೆ ಕೈ ಇಟ್ಟಿದ್ದಾರೆ ಹಾಗೆ ಕೈಹಾಕಿ ಉಳುಮೆ ಕಸುಬಿನಲ್ಲಿರತಕ್ಕವರ ಸಂಖ್ಯೆ ಎಷ್ಟೆಂಬುದನ್ನು ತಾವು ತಿಳಿಸಬಲ್ಲಿರಾ? ಇಲ್ಲಿಗೆ ಕಳೆದ ಏಳು ವರ್ಷಗಳಲ್ಲಿ ಈ ಬಗ್ಯೆ ಎಷ್ಟು ವ್ಯತ್ಯಾಸವಾಗಿದೆಯೆಂಬುದನ್ನು ತಾವು ಆಲೋಚಿಸಿ ನೋಡಿದ್ದೀರಾ? ಈ ಎಲ್ಲಾ ಅಂಶಗಳನ್ನೂ ಮನಗಂಡೇ ಶ್ರೀಮನ್ಮಹಾರಾಜರವರು ಈ ಧಾರಣೆ ವಾಸಿಗಳು ತಗ್ಗುವ ಸಂಭವವಿಲ್ಲವೆಂದು ತಿಳಿಸಿದ್ದಾರೆ. ಆದರೆ ಒಂದು ವಿಚಾರ, ಇಂದು ಹೊಲ ಉಳತಕ್ಕವನ ದೃಶ್ಯ ಹೇಗಿದೆ ಮತ್ತು ಇತರ ದೃಶ್ಯ ಹೇಗಿದೆಯೆಂಬ ಅಂಶ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ, ತಮಗೂ ಗೊತ್ತಿದೆ ಮತ್ತು ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಈ ಮುಖ್ಯ ಸಮಸ್ಯೆಗಳನ್ನೆಲ್ಲಾ ಪರಿಹಾರ ಮಾಡಬೇಕಾಗಿದ್ದರೆ ಮೊದಲು ಇದೆಲ್ಲಕ್ಕೂ ಮೂಲಭೂತವಾಗಿರತಕ್ಕ ನಮ್ಮ ವಿದ್ಯಾಭ್ಯಾಸದ ನೀತಿಯನ್ನು ನಾವು ಮೊದಲು ಬದಲಾಯಿಸಬೇಕಾಗಿದೆ. ಶ್ರೀ ಜೋಯಿಸರವರು ಹೇಳಿದ ಹಾಗೆ "ಎಸ್–ನೋ" ಎಂಬ ಎರಡು ಪದಗಳನ್ನು ಕಲಿತುಕೊಂಡು ಈ ಮೇಣಿ ಮೇಲೆ ಕೈಹಾಕುವುದು ಇತ್ತೀಚೆಗೆ ಕಮ್ಮಿಯಾಗುತ್ತಿದೆ. ಹಾಗೇನಾದರೂ ಯಾರಾದರೂ ಅಪ್ಪಿ ತಪ್ಪಿ ಒಬ್ಬಿಬ್ಬರು ಕೈವಿಡಿದಿದ್ದರೆ ಅವರು ನನ್ನಂತಹವರೇ ಇರಬೇಕೆಂದು ತೋರುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ತಾವೂ ಈಗ ಮೈಸೂರು ಸಿಟಿಗೆ ಬಂದಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ತಾವು ಹೋಗಬೇಕೆಂದು ಹೇಳಿದರೆ ನಾನು ಹೊರಟುಹೋಗುತ್ತೇನೆ.

ಶ್ರೀ ಎಂ. ಎನ್. ಜೋಯಿಸರು.—ನಿಮ್ಮನ್ನು ಕಳುಹಿಸಿಕೊಡುವುದು ಅಷ್ಟು ಸುಲಭವಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಬೀಳು ಬಿದ್ದಿರತಕ್ಕ ಜಮೀನುಗಳಲ್ಲಿ ಬೆಳೆಯುವತಕ್ಕ ಬಗ್ಯೆ ಮತ್ತು ಹೆಚ್ಚು ಆಹಾರ ಬೆಳೆಯಬೇಕೆಂಬುದರ ಬಗ್ಯೆ ಮೊದಲು ನೀವು ಜನರ ನಿತ್ಯ ಜೀವನದ ವ್ಯವಹಾರದಲ್ಲಿ ಬದಲಾವಣೆ ಮಾಡಬೇಕಾಗಿದೆ. ಅದರ ಜೊತೆಗೆ ತಾವು

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ತಮ್ಮ ನೀತಿಯನ್ನೂ ಬದಲಾಯಿಸತಕ್ಕ ಬಹು ಮುಖ್ಯವಾದ ಅಂಶ. ಆದರೆ ಈ ಬಗ್ಗೆ ತಾವೀಗ ಒಂದು ಕಾನೂನನ್ನು ಜಾರಿಗೆ ತರಬೇಕೆಂದಿದ್ದೀರಿ. ಇದರಿಂದ ಜನರಿಗೆ ಇನ್ನೂ ಹೆಚ್ಚಿನ ತೊಂದರೆಗಳಾಗಿ, ದೇಶಕ್ಕೆ ತುಂಬಾ ಅನಾನುಕೂಲವಾಗುತ್ತದೆಂದು ಹೇಳಬೇಕಾಗಿದೆ. ಆದರೆ ಹೀಗೊಂದು ಕಾನೂನಿನ ಬಲದಿಂದಲೇ ಏನೂ ಸಾಧ್ಯವಾಗಲಾರದೆಂದು ನನ್ನ ಭಾವನೆ. ತಾವೀಗ ಈ ಪಾಳುಬಿದ್ದಿರುವ ಜಮೀನುಗಳನ್ನು ಹಾಗೆ ವ್ಯವಸಾಯ ಮಾಡದೆ ಯಾರು ಪಾಳುಗೆಡವಿಕೊಂಡಿದ್ದಾರೋ ಅಂಥವರಿಂದ ಆ ಜಮೀನುಗಳನ್ನು ಕಿತ್ತುಕೊಂಡು ಬೇರೆ ವ್ಯವಸಾಯ ಮಾಡತಕ್ಕವರಿಗೆ ವಿಲೇವಾರಿ ಮಾಡತಕ್ಕ ಅಧಿಕಾರವನ್ನು ತಾಲ್ಲೂಕಿನ ಅಮಲ್ದಾರರಿಗೆ ಕೊಟ್ಟಿದ್ದೀರಿ. ಹಾಗೆ ಅಮಲ್ದಾರರು ಈ ಅಧಿಕಾರವನ್ನು ಚಲಾಯಿಸಿ ಒಂದು ಹಳ್ಳಿಯಲ್ಲಿರುವ ಒಬ್ಬನ ಜಮೀನನ್ನು ಕಿತ್ತು ಮತ್ತೊಬ್ಬನಿಗೆ ಕೊಟ್ಟಿದ್ದೇ ಆದರೆ ಮತ್ತೆ ಪುನಃ ಅಮಲ್ದಾರರು ಆ ಹಳ್ಳಿಗೆ ಹೋಗುವ ಹಾಗೇ ಇಲ್ಲ. ಹೀಗೆಲ್ಲಾ ತಾವು ಮಾಡುವುದರಿಂದ ತೊಂದರೆ ಕಡಿಮೆಯಾಗುವುದಕ್ಕೆ ಬದಲಾಗಿ ಇನ್ನೂ ಹೆಚ್ಚಿನ ಕ್ಲಿಷ್ಟ ಸಮಸ್ಯೆಗಳು ಉದ್ಭವವಾಗಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಅಂದರೆ ಒಟ್ಟಿನಲ್ಲಿ ಜನರಿಗೆ ತೊಂದರೆ ತಪ್ಪುವ ಬದಲು ಅದು ಇನ್ನೂ ಹೆಚ್ಚಾಗುತ್ತದೆ. ಹೀಗೆ ತಾವು ಕೈಗೊಂಡಿರುವ ಮತ್ತು ಅನುಸರಿಸುತ್ತಿರುವ ರೀತಿ ನೀತಿಗಳೂ ಮತ್ತು ಕಾನೂನುಗಳೂ ಆಯ ತಪ್ಪಿ ಹೋಗಿವೆ. ಅಂದಮೇಲೆ ಪುರೋಭಿವೃದ್ಧಿಯಾಗಲು ಹೇಗೆ ಸಾಧ್ಯ ?

ಅಧಿಕಾರವನ್ನು ಆಯವರಿತು ಜಾರಿಮಾಡಿದರೆ ಪ್ರಯೋಜನವಾದೀತು. ಎಲ್ಲಿ ಆಯ ತಪ್ಪಿ ಹೋಗುತ್ತದೆಯೋ ಅಲ್ಲಿ ಎಲ್ಲವೂ ಅವಿವೇಕಕ್ಕೆ ಕಾರಣವಾಗುತ್ತದೆ. ಆದ್ದರಿಂದ ಆಯವನ್ನರಿತು ಮಾಡಿದರೆ ಸಹಾಯವಾಗುತ್ತದೆ ಎಂಬುದು ನನ್ನ ಖಚಿತ ಅಭಿಪ್ರಾಯ.

ಕಾಳಸಂತೆ ಹುಟ್ಟುವುದಕ್ಕೆ ಈ ದಿವಸ ನಮ್ಮ ದೇಶದಲ್ಲಿ ಹತೋಟಿಯಿರುವುದೇ ಕಾರಣ. ಹತೋಟಿಯಿದ್ದ ಮೇಲೆ ಕಾಳಸಂತೆಯುಂಟು ಮತ್ತು ಲಂಚವೂ ಇರುತ್ತದೆ. ಲಂಚವಿಲ್ಲದೆ ಕಾಳಸಂತೆಯಿಲ್ಲ. ಅಂದಮೇಲೆ ಕಾಳಸಂತೆ ಯಥೇಚ್ಛವಾಗಿದೆಯೆಂದು ಸರ್ಕಾರ ಒಪ್ಪಿದೆ. ಆದ್ದರಿಂದ ಲಂಚವೂ ಕೂಡ ಹೆಚ್ಚಿದೆ ಎಂಬುದನ್ನು ಅವರು ಒಪ್ಪಲೇ ಬೇಕು, ಇಲ್ಲದಿದ್ದರೂ ಅದು ವಾಸ್ತವವಾದ ಸಂಗತಿ. ಪ್ರಜಾಪ್ರಭುತ್ವಕ್ಕೆ ಇದನ್ನು ಮುಚ್ಚುಮರೆ ಮಾಡುವುದು ಭೂಷಣವಲ್ಲ. ಆದ್ದರಿಂದ ಲಂಚವನ್ನು ತಪ್ಪಿಸುವುದಕ್ಕೆ ಅನೇಕ ಕಾನೂನುಗಳನ್ನು ಮಾಡಿದ್ದಾರೆ, ಆದರೂ ಇವೆರಡನ್ನೂ ತಪ್ಪಿಸಲು ಸಾಧ್ಯವಿಲ್ಲದಿದ್ದರೆ ಅದು ಅವರ ಅಶಕ್ತತೆಯನ್ನು ತೋರಿಸುತ್ತದೆಯೇ ಹೊರತು ಮತ್ತೆ ಬೇರೆ ಅಲ್ಲ. ಸಂಪೂರ್ಣವಾಗಿ ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ಹೇಳಿದರೆ ಅದನ್ನು ಒಪ್ಪುತ್ತೇನೆ, ಹೀಗಿರುವಾಗ ಲಂಚಕೋರರನ್ನು ಶಿಕ್ಷಿಸದೇ ಹೋದರೆ ಹೇಗೆ ? ಅವರನ್ನು ಹತೋಟಿಯಲ್ಲಿಟ್ಟಿದ್ದೀರಾ ಎಂದು ಪ್ರಶ್ನೆ ಮಾಡುತ್ತೇನೆ. ಹೋಟಲುಗಳಲ್ಲಿ ಮತ್ತು ಎಷ್ಟೋ ಮನೆಗಳಲ್ಲಿ ಹೋಗಿ ನೋಡಿದರೆ ಲಕ್ಷಾಂತರ ಪಲ್ಲ ದವಸ ಸಿಕ್ಕುತ್ತದೆ, ಅದು ಬಿಟ್ಟು ಸಣ್ಣಪುಟ್ಟ ಜನರ ಮೇಲೆ ತಮ್ಮ ಕಾನೂನನ್ನು ಪ್ರಯೋಗ ಮಾಡಿದರೆ ಏನು ಪ್ರಯೋಜನ ? ಈ ದಿವಸ ಹಳ್ಳಿಯಲ್ಲಿರುವ ಜನರಿಂದ ಧಾನ್ಯವನ್ನು ವಸೂಲು ಮಾಡುವಾಗ ಜನರ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತಿದೆ ಎಂಬುದನ್ನು ಶ್ರೀ ಮಾದಯ್ಯಗೌಡರು ಹೃದಯಂಗಮವಾಗಿ ಹೇಳಿದರು. ಅವರ ಬಾಯಲ್ಲಿ ಈ ವಿಚಾರವು ಬಂದುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು ! ಅಂಥವರ ಬಾಯಲ್ಲೇ ಅದು ಬಂದ ಮೇಲೆ ನಾನು ಇನ್ನೆಷ್ಟು ಮುಂದೆ ಹೋಗಬಹುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಅವರಿಗೇ ಅಷ್ಟು ಬೇಜಾರಾಗಿರಬಹುದು. ಅಂದ ಮೇಲೆ ಪರಿಸ್ಥಿತಿ ಸ್ವಲ್ಪ ಹದಗೆಟ್ಟಿದೆ ಎಂಬುದನ್ನು ಮನಗಾಣಬೇಕು. ಸತ್ಯವನ್ನು ಮುಚ್ಚಬಾರದು. ಭೂಮಿಯಿಲ್ಲದೆ ವಾರ ಮಾಡಿಕೊಂಡಿರುವ ಮತ್ತು ಅಲ್ಪ ಸ್ವಲ್ಪ ಜೀವನಕ್ಕಾಗುವಷ್ಟನ್ನು ಇಟ್ಟುಕೊಂಡಿರುವ ಜನರ ಮನೆಗೆ ರಾತ್ರಿ ಹೊತ್ತು ಅಧಿಕಾರಿಗಳು ನುಗ್ಗಿ ಅವರಿಗೆ ತಿನ್ನುವುದಕ್ಕೆ ಸಹ ಸ್ವಲ್ಪವನ್ನೂ ಬಿಡದೆ ತೆಗೆದುಕೊಂಡು ಬಂದಿರುವ ನಿದರ್ಶನಗಳಿವೆಯೆಂದು ಘಂಟಾಘೋಷವಾಗಿ ಹೇಳುತ್ತೇನೆ, ಅವನ್ನು ದೃಢಪಡಿಸಲು ಸಿದ್ಧವಾಗಿದ್ದೇನೆ, ಹಾಗೆ ಹೇಳುವುದು ಅಸತ್ಯವೆಂದು ತೋರಿಸುವುದಕ್ಕೆ ಶಕ್ತಿಯಿದ್ದರೆ ತೋರಿಸಲಿ. ನಾನು ಅದನ್ನು ದೃಢಪಡಿಸದಿದ್ದರೆ ಈ ಸಭೆಯಲ್ಲಿ ನನ್ನ ಸ್ಥಾನವನ್ನು ಬಿಡುವುದಕ್ಕೆ ಸಿದ್ಧ. ಇದು ಸತ್ಯವೆಂದು ಪ್ರತಿಪಾದನೆ ಮಾಡಿ ತೋರಿಸಿದರೆ ತಾವು ರಾಜೀನಾಮೆ ಕೊಡುವುದಕ್ಕೆ ಸಿದ್ಧರಾಗಿದ್ದೀರಾ ? ದೇಶದಲ್ಲಿ ಜನರಿಗೆ ಆಕ್ರೋಶ ಬಹಳವಾಗಿ ಹೆಚ್ಚುತ್ತಿದೆ, ಅಧಿಕಾರಿಗಳು ದವಸ ಧಾನ್ಯಗಳನ್ನು ತೆಗೆದುಕೊಳ್ಳುವ ರೀತಿ ನೀತಿಯು ಸರಿಯಿಲ್ಲ. ಅದನ್ನು ಸತ್ಯವೆಂದು ಒಪ್ಪೋಣ, ಸತ್ಯವಿಲ್ಲದಿದ್ದರೆ ಅದನ್ನು ಬಿಡೋಣ. ಈ ವಿಚಾರದಲ್ಲಿ ನನಗೆ ಒಂದು ಅರ್ಜಿ ಸಹ ಬಂದಿದೆ. ಚನ್ನಪಟ್ಟಣದಲ್ಲೂ ಇದೇ ಪರಿಸ್ಥಿತಿಯಿದೆ. ಇದಕ್ಕೇನು ಕಾರಣ ಅಧಿಕಾರಿಗಳ ಮೇಲೆ ತಮ್ಮ ಹತೋಟಿಯಿಲ್ಲವೆ ಅಥವಾ ಅವರಿಗೆ ಕಾನೂನು ಜಾರಿ ಮಾಡುವುದಕ್ಕೆ ಸಾಕಾದಷ್ಟು ತಿಳುವಳಿಕೆಯಿಲ್ಲವೇ ಅರ್ಧರಾತ್ರಿಯಲ್ಲಿ ಹೋಗಿ 200–300 ಎಕರೆ ಜಮೀನಿರುವವರನ್ನು ಬಿಟ್ಟು ಕೇವಲ 2—3—4 ಎಕರೆ ಜಮೀನಿರುವವರ ಮನೆ ಮತ್ತು 4—5 ಪಲ್ಲ ದವಸವಿರುವವರ ಮನೆ ಶೋಧಿಮಾಡಿ ಅವರಲ್ಲಿದ್ದ ದವಸ ತರುವುದು ಸರಿಯೇ ? ಹಾಗೆ ಮಾಡಿದ ಮಾತ್ರಕ್ಕೆ ಅವರು ಸತ್ಯಸಂಧರೆಂದು ಹೇಳೋಣವೆ ? ನಾಳೆ ದಿವಸ ಅನ್ನದ ಅಭಾವ ಹೆಚ್ಚಿದಾಗ ಕಿರುಕುಳವನ್ನು ಅನುಭವಿಸುವುದೇಕೆ, ರೇಷನ್ ಕಾರ್ಡು ಪಡೆದು ದವಸ ಪಡೆಯಬಹುದು ಎಂದು ಬೆಳೆಯುವ ರೈತರು ವ್ಯವಸಾಯವನ್ನು ಬಿಟ್ಟುಬಿಡಬಹುದು. ಆಗ ರೇಷನ್ ಕೊಡದಿದ್ದರೆ ಅವರು ಸರ್ಕಾರವನ್ನು ಉರುಳಿಸಲು ಪ್ರಯತ್ನ ಮಾಡುತ್ತಾರೆ. ಮಂಗಳೂರಿನ ಒಬ್ಬ ಗಂಡುಹುಡುಗ ಮತ್ತು ಒಬ್ಬಳು ಹೆಣ್ಣು ಹುಡುಗಿ ಮೊನ್ನೆ ಏತವನ್ನು ಎತ್ತುತ್ತಿದ್ದರು, ಆಗ ಪ್ರಶ್ನೆ ಮಾಡಿದಾಗ ನಾಲ್ಕೈದು ಪಲ್ಲ ಉಳಿಸಿಕೊಂಡಿದ್ದರೂ ಅದನ್ನು ತೆಗೆದುಕೊಂಡು ಹೋಗುತ್ತಾರೆಂದು ಹೇಳಿದರು. ಅಂಥ ಭಾವನೆ ಬರುವಂತೆ ಮಾಡಬಾರದು, ಸಣ್ಣ ಪುಟ್ಟ ಜನರ ಮೇಲೆ ಕೈ ಮಾಡಬಾರದು. ಹಾಗೆ ಮಾಡಿದರೆ ನಾವೇಕೆ ಬೆಳೆಯಬೇಕೆಂದು ಅವರು ಕೇಳಬಹುದು. ಆಮೇಲೆ ಎಲ್ಲಿಯವರೆಗೆ ಆಹಾರ ದವಸ ಬೆಳೆಯುವುದಕ್ಕಿಂತ ಇತರ ಪದಾರ್ಥಗಳನ್ನು ಬೆಳೆದರೆ ಹೆಚ್ಚು ಆದಾಯ ಬರುತ್ತದೆಂಬ ನಂಬಿಕೆಯಿರುತ್ತದೆಯೋ ಅಲ್ಲಿಯವರೆಗೆ ಯಾವ ಕಾನೂನು ಮಾಡಿದರೂ ಆದಾಯ ಬರುವ ಬೆಳೆಗಳ ಕಡೆಗೆ ಹೆಚ್ಚು ಗಮನ ಕೊಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕೆಂಬ ಆಶೆಯಿದ್ದರೆ ಇತರ ಬೆಳೆಗಳಿಂದ ಬರುವ ಉತ್ಪತ್ತಿಯು ಕಡಮೆಯಾಗಬೇಕು, ಜನರಿಗೆ ಕಿರುಕುಳ ಕಡಿಮೆಯಾಗಬೇಕು, ಆಹಾರ ದವಸವನ್ನು ಬೆಳೆಯುವುದರಿಂದ ಬರುವ ಉತ್ಪತ್ತಿಯು ಹೆಚ್ಚಬೇಕು. ಹಾಗಾದರೆ ಅಗ ಸ್ವಾಭಾ

ವಿಕವಾಗಿ ಎಲ್ಲರೂ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಹೋಗುತ್ತಾರೆಯೇ ವಿನಾ ಕಾನೂನಿಗೆ ಹೆದರಿ ಆಹಾರ ಬೆಳೆಯಲು ಹೋಗುತ್ತಾರೆಂದು ಹೇಳಲು ಅದು ಸಾಧ್ಯವಿಲ್ಲ. ಹಾಗೆ ಒಂದುವೇಳೆ ನಂಬಿದ್ದರೆ ಅದು ಸರಿಯಲ್ಲ ಎಂದು ಅತ್ಯಂತ ವಿನಯಪೂರ್ವಕವಾಗಿ ಅಷ್ಟೇ ಅಲ್ಲ, ಎಷ್ಟು ಒತ್ತಾಯ ಮಾಡಿ ಹೇಳಬಹುದೋ ಅಷ್ಟು ಒತ್ತಾಯದಿಂದ ಈ ವಿಚಾರವನ್ನು ಹೇಳುತ್ತೇನೆ. ಅದೂ ಅಲ್ಲದೆ ಜನರು ಹೆಚ್ಚಾಗಿ ಪಟ್ಟಣಗಳಲ್ಲಿ ಬಂದು ನೆಲಸುವುದು ವಾಡಿಕೆಯಾಗಿದೆ. ಆದ್ದರಿಂದ ಹಳ್ಳಿಗಾಡಿನವರು ಪಟ್ಟಣಗಳಲ್ಲಿ ನೆಲಸಕೂಡದು, ಪಟ್ಟಣದಲ್ಲಿ ಹೆಚ್ಚು ಜನ ಸೇರಬಾರದು? ಎಂದು ಏಕೆ ಕಾನೂನು ಮಾಡಬಾರದು, ಶೇಕಡ ನೂರರಷ್ಟು ಪಟ್ಟಣಗಳಲ್ಲಿ ಜನರು ಹೆಚ್ಚಿದ್ದಾರೆ. ಆದ್ದರಿಂದ ಇನ್ನು ಮುಂದೆ ಆಹಾರದ ಯೋಜನೆಗಳಿಗಾಗಿ ಖರ್ಚು ಮಾಡುತ್ತಿರುವುದನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಬೇಕು. ಅದಕ್ಕೆ ಅರಿತು ನುರಿತ ಜನರನ್ನು ಸೇರಿಸಿ ಯಾವ ರೀತಿ ನೀತಿಯನ್ನನುಸರಿಸಿ ಈ ಸಮಸ್ಯೆಯನ್ನು ಎದುರಿಸಬೇಕೋ ಅದಕ್ಕೆ ತಕ್ಕಂತೆ ಯೋಚನೆ ಮಾಡಿ ಮಾರ್ಪಾಡು ಮಾಡದಿದ್ದರೆ ಮುಂದೆ ನೀವು ಖರ್ಚುಮಾಡುವ ಹಣದಿಂದ ಪ್ರಯೋಜನವಾಗುವುದಿಲ್ಲ, ನಷ್ಟ ಮತ್ತು ದೇಶಕ್ಕೆ ಕ್ಷೋಭೆ, ಅಷ್ಟು ಹೊರತು ಮತ್ತೆ ಬೇರೆ ಏನೂ ಆಗಲಾರದು.

ಇನ್ನೊಂದು ಅಂಶ, ಮಿಲಿಟರಿ ಪರ್ಸನಲ್ ನೋಡಿ ಬಹಳ ದುಃಖವಾಯಿತು. ಹಿಂದೆ ಮುಖ್ಯ ಮಂತ್ರಿಗಳು ಒಂದು ವಿಚಾರ ಹೇಳಿದ್ದರು. ಇಲ್ಲಿರುವ ಪರಿಸ್ಥಿತಿಗಿಂತ ಅಲ್ಲಿ ಉತ್ತಮವಾಗುತ್ತದೆಯೇ ವಿನಾ ಅದಕ್ಕಿಂತ ಕನಿಷ್ಟವಾಗುವುದಿಲ್ಲ, ಆದ್ದರಿಂದ ನಿಮ್ಮನ್ನು ಅಲ್ಲಿಗೆ ಕಳುಹಿಸುವುದಕ್ಕೆ ಬಂದಿದ್ದೇನೆ ಎಂದು ಮುಖ್ಯ ಮಂತ್ರಿಗಳು ಸೈನ್ಯದವರಿಗೆ ಹೇಳಿದ್ದರು. ಅಂದಮೇಲೆ ಅವರು ಕೊಟ್ಟ ಆಶ್ವಾಸನ ಈಗ ಎಲ್ಲಿ ಹೋಯಿತು? ಕೊಟ್ಟಂಥ ಆಶ್ವಾಸನವನ್ನು ಉಳಿಸಿಕೊಳ್ಳಬೇಕಾದ್ದು ಅವರ ಕರ್ತವ್ಯ ಮತ್ತು ದೇಶದ ಕರ್ತವ್ಯ. ಆ ದಿವಸ ಆಶ್ವಾಸನವನ್ನು ಯಾವ ಆಧಾರದಮೇಲೆ ಕೊಟ್ಟರು? ಇಂಡಿಯಾ ಸರ್ಕಾರದವರಿಗೂ ಮತ್ತು ನಮ್ಮ ಸರ್ಕಾರದವರಿಗೂ ಆದ ಒಪ್ಪಂದದ ಆಧಾರದ ಮೇಲೆ. ಈಗ ಅದಕ್ಕೆ ಬೆಲೆಯಿಲ್ಲ, ಮುಖ್ಯ ಮಂತ್ರಿಗಳ ಮಾತಿಗೆ ಬೆಲೆಯಿಲ್ಲ ಎಂದು ಹೇಳಿದರೆ ಏನು ಪ್ರಯೋಜನ? ಕೊಟ್ಟ ವಚನವನ್ನು ಪಾಲಿಸದಿದ್ದರಿಂದ ಅದಕ್ಕೆ ಏನು ಔಷಧಿಯಿದೆ? ಇಂಡಿಯಾ ಸರ್ಕಾರಕ್ಕೆ ಧೈರ್ಯದಿಂದ ಎಲ್ಲವನ್ನೂ ಹೇಳಬೇಕು. ಹಾಗೆ ಹೇಳಿ ಸರಿಪಡಿಸದಿದ್ದರೆ, ಕೇಂದ್ರದವರು ಅವರು ಕೊಟ್ಟ ವಚನವನ್ನು ನಡೆಸಿಕೊಡದಿದ್ದರೆ ಸಚಿವರು ರಾಜಿನಾಮೆ ಕೊಡುವುದೊಂದೇ ಮಾರ್ಗ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಷ್ಟು ತೀವ್ರತೆಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೇ ವಿನಾ ನಾವೂ ಸ್ವಲ್ಪ ಹಣ ಕೊಡುತ್ತೇವೆ, ಕೇಂದ್ರದಿಂದಲೂ ಕೊಂಚ ಕೊಟ್ಟರೆ ಅದನ್ನು ಉಪಯೋಗಿಸಿ ಪರಿಹಾರವೊದಗಿಸುತ್ತೇವೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಶ್ರೀ ಜೋಯಿಸರು ಹೇಳಿದಹಾಗೆ ಖರ್ಚಾಗಿರುವ ಹಣವನ್ನೆಲ್ಲಾ ಇಂಡಿಯಾ ಸರ್ಕಾರದವರು ಕೊಡಬೇಕು. ಹಾಗಿಲ್ಲದಿದ್ದರೆ ಈ ವಿಚಾರದಲ್ಲಿ ಅವರು ಕರ್ತವ್ಯಲೋಪ ಮಾಡಿದ ಹಾಗಾಗುತ್ತದೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ.

ಇಷ್ಟೇ ಅಲ್ಲದೆ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗೆ ಅಧಿಕಾರಿಗಳನ್ನು ತೆಗೆದುಕೊಳ್ಳಲು ಏರ್ಪಾಡಾಗಿದೆ. ಮಿಲಿಟರಿ ಪರ್ಸನಲ್‌ಗೆ ಆಗಿರುವ ಪರಿಣಾಮ ನೋಡಿದರೆ ಇಂಡಿಯಾ ಸರ್ಕಾರಕ್ಕೆ ಹೋಗಲು ಅಧಿಕಾರಿಗಳಿಗೆ ಎದೆಯೊಡೆಯುತ್ತದೆ. ಏಕೆಂದರೆ ಇಂಡಿಯಾ ಸರ್ಕಾರದ ರೀತಿ ನೀತಿ ಮತ್ತು ಅವರುಕೊಟ್ಟ ಭರವಸೆ ಎಲ್ಲವೂ ಬದಲಾವಣೆಯಾಗುವ ಪರಿಸ್ಥಿತಿಯಿದೆ. ನಮ್ಮ ಸರ್ಕಾರದವರಿಗೆ ನಮಗೆ ಕೊಡುವ ಭರವಸೆಯನ್ನು ಉಳಿಸಿಕೊಳ್ಳುವ ಶಕ್ತಿಯಿದೆಯೇ, ಇಲ್ಲವೇ ಎಂಬ ಒಂದು ಅನುಮಾನ ಬಂದಮೇಲೆ ಹೊರಗೆ ಕಳುಹಿಸಿದರೆ ನಾವು ಹೋಗಕೂಡದು ಎಂದು ಅಧಿಕಾರಿಗಳು ಪ್ರಯತ್ನಪಡುತ್ತಾರೆ.

ಪ್ರಜಾಪ್ರಭುತ್ವದಲ್ಲಿ ಇದು ಬಹಳ ಪ್ರಾಮುಖ್ಯವಾದದ್ದು. ಇದನ್ನು ಮುಖ್ಯ ಸಚಿವರು – ಈಗ ಅವರು ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು—ಯೋಚನೆಮಾಡುತ್ತಾರೆಂದು ನಾನು ನಂಬಿದ್ದೇನೆ.

ಮತ್ತೊಂದು ವಿಷಯ. ಮೈಸೂರು ಸಂಸ್ಥಾನ ಇದುವರೆಗೂ ರಾಜ್ಯಾಂಗ ಶಾಸನದ 371 (b) ಸೆಕ್ಷನ್ ಆಡಳಿತಕ್ಕೆ ಒಳಪಟ್ಟಿರತಕ್ಕದ್ದು ಬಹಳ ಶೋಚನೀಯ. ನನಗೆ ಜ್ಞಾಪಕವಿದೆ. ಮೈಸೂರಿನಲ್ಲಿ ಜಗನ್ಮೋಹನ ಬಂಗಲೆಯಲ್ಲಿ ನಡೆದ ರಾಜ್ಯಾಂಗ ರಚನಾ ಸಭೆಯಲ್ಲಿ 371 (b) ಸೆಕ್ಷನ್ ನಮ್ಮ ದೇಶದಲ್ಲಿ ಜಾರಿಗೆ ಬರುವುದಿಲ್ಲವೆಂಬ ಆಶ್ವಾಸನವನ್ನು ಕೊಡುತ್ತೇನೆ, ಇದಕೆ ತಮ್ಮ ಒಪ್ಪಿಗೆಯನ್ನು ಕೊಡಿ ಎಂದು ಹೇಳಿದಮೇಲೆ ನಾನು ಒಪ್ಪಿಕೊಂಡೆ. ಅನೇಕರು ವಿರೋಧವಾಗಿದ್ದರು. ಆ ಆಶ್ವಾಸನ ಕೊಡದಿದ್ದರೆ 371(b) ಸೆಕ್ಷನ್ ಅಧಿಕಾರಕ್ಕೆ ಒಳಪಡಲು ಒಪ್ಪುತ್ತಾ ಇರಲಿಲ್ಲ. ಈಗಾಗಲೇ $2\frac{1}{2}$ ವರ್ಷ ಆಯಿತು. ಇವತ್ತಿನವರೆಗೂ 371 (b) ಸೆಕ್ಷನ ಆಡಳಿತಕ್ಕೆ ನಾವು ಒಳಪಟ್ಟಿದ್ದೇವೆಯೇ ಹೊರತು ಬೇರೆ ಏನೂ ಆಗಿಲ್ಲ. ಏಕೆ ಹೀಗೆ ಆಯಿತು? ಮುಖ್ಯ ಸಚಿವರು ಪತ್ರಿಕಾಪ್ರತಿನಿಧಿಗಳಿಗೂ ಸಹ ಆ ವಿಷಯವನ್ನು ಹೇಳಿದ್ದು ನನಗೆ ಜ್ಞಾಪಕವಿದೆ. ಅಂದಿನ ವಾಗ್ದಾನವನ್ನು ಉಳಿಸಿಕೊಂಡಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ಆದ್ದರಿಂದ ಆ ವಿಷಯದಲ್ಲಿ ಈ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಮೈಸೂರು ಸಂಸ್ಥಾನವನ್ನು 371 (b) ಸೆಕ್ಷನಿಂದ ತಪ್ಪಿಸುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅವರ ಅಶಕ್ತತೆಯನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವಕ್ಕೆ ಭೂಷಣವಲ್ಲವೆಂದು ಹೇಳಿ ಶ್ರೀಮನ್ಮಹಾರಾಜರವರ ಭಾಷಣಕ್ಕೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ನೆನ್ನೆಯ ದಿನ ಈ ಸಭೆಗೆ ದಯಪಾಲಿಸಿದ ಪ್ರಾರಂಭ ಭಾಷಣಕ್ಕೆ, ವಂದನಾರ್ಪಣಾ ನಿರ್ಣಯವನ್ನು ನನ್ನ ಕಾಂಗ್ರೆಸ್ ಮಿತ್ರರೊಬ್ಬರು ಸೂಚಿಸಿದ್ದಾರೆ. ಅದಕ್ಕೆ ನಮ್ಮ ಈ ತಿದ್ದುಪಡಿಯನ್ನು ಸೂಚಿಸಿದ್ದೇವೆ. ಇದನ್ನು ಅಂಗೀಕಾರ ಮಾಡಬೇಕಾಗಿ ಸಭೆಯನ್ನು ಪ್ರಾರ್ಥಿಸಿ, ಶ್ರೀಮನ್ಮಹಾರಾಜರವರ ಭಾಷಣಕ್ಕಾಗಿ ನಾನು ವಂದನೆ ಮಾಡುವವನಾಗಿದ್ದೇನೆ.

ಮುಖ್ಯವಾಗಿ ದೇಶದ ಮುಂದೆ ಪ್ರಾಮುಖ್ಯವಾಗಿರತಕ್ಕ ಸಮಸ್ಯೆ ಎಂದರೆ ಅನ್ನ, ಬಟ್ಟೆ. ಈ ಎರಡು ಸಮಸ್ಯೆಗಳಿಗೆ ಈ ಭಾಷಣದಲ್ಲಿ ಸಾಕಾದಷ್ಟು ಪ್ರಾಮುಖ್ಯತೆ ಕೊಟ್ಟಿಲ್ಲ. ಇದುವರೆಗೂ ಸರ್ಕಾರದವರು ನಡೆಸಿರತಕ್ಕ ಒಂದು ನೀತಿಯಿಂದ ಯಾವ ಪರಿಣಾಮವಾಗಿದೆ, ಮುಂದೆ ಯಾವ ರೀತಿ ಅದನ್ನು ಬದಲಾಯಿಸಬೇಕು, ಈಗ ಯಾವ ತರಹ ಒಂದು ತೀವ್ರವಾದ ಅಭಿಪ್ರಾಯ ಹೊರಟಿದೆ ಎಂಬುದನ್ನು ಈಗಾಗಲೇ ಮಾತನಾಡಿದ ನಮ್ಮ ಸ್ನೇಹಿತರುಗಳೆಲ್ಲರೂ ಒತ್ತಿಹೇಳಿದ್ದಾರೆ. ಬಹುಶಃ ಈ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಈ ಸಭೆಯಲ್ಲಿ

(ಶ್ರೀ ಬಿ. ಹುಚ್ಚೇಗೌಡರು.)

ಬರಲಿಲ್ಲ. ಆದ್ದರಿಂದ ನಾನೇನೂ ಕೂಡ ಹೆಚ್ಚಾಗಿ ಆ ವಿಚಾರದ ಮೇಲೆ ಹೇಳಬಯಸುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ವೀರಣ್ಣಗೌಡರು ನಾನು ಸೂಚಿಸಿದ ನಿರ್ಣಯವನ್ನು ಒಪ್ಪಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.

ಮುಖ್ಯವಾಗಿ ಆಹಾರದ ನೀತಿಯಿಂದ ಹತೋಟಿ ಜಾರಿಗೆ ಬಂತು. ಅದು ಈಗ 7-8 ವರ್ಷದಿಂದಲೂ ದೇಶದಲ್ಲಿ ನಡೆಯುತ್ತಾ ಇದೆ. ಆದರೆ ಅದು ಖಂಡಿತ ದೇಶದಲ್ಲಿ ಆಹಾರವನ್ನು ಹೆಚ್ಚುಮಾಡುವುದಕ್ಕಾಗಲೀ, ಜನಗಳಿಗೆ ಹೆಚ್ಚು ಆಹಾರ ಒದಗಿಸುವುದಕ್ಕಾಗಲೀ ಸಹ ಕಾರಿಯಾಗಿಲ್ಲ. ಆದ್ದರಿಂದ ಅದರಲ್ಲಿ ಬದಲಾವಣೆ ಮಾಡಬೇಕು, ಇಲ್ಲವೇ ಪೂರ್ಣವಾಗಿ ಹೋಗಬೇಕು ಎಂಬ ವಿಷಯವೂ ಕೂಡ ಪ್ರತಿ ಅಧಿವೇಶನದಲ್ಲೂ ಈ ಸಭೆಯ ಮುಂದೆ ಬಂದು ನಾವೆಲ್ಲರೂ ಅದನ್ನು ಒತ್ತಾಯ ಮಾಡುತ್ತಾ ಇದ್ದೇವೆ. ಸರ್ಕಾರದವರು ಅದರಲ್ಲಿ ಯಾವ ವಿಧವಾದ ತಿದ್ದುಪಡಿಯನ್ನಾಗಲೀ ಅಥವಾ ಅದರಿಂದ ಪಡೆದ ಒಂದು ಅನುಭವವನ್ನು ಅನುಸರಿಸುವುದಕ್ಕಾಗಲೀ ಸಿದ್ಧವಾಗಿಲ್ಲ ಎಂದು ಕಂಡುಬರುತ್ತದೆ ನಮ್ಮ ಮಂತ್ರಿಗಳಿಗೆ ಆ ಹತೋಟಿಗಳನ್ನು ಮುಂದುವರಿಸುವುದು ತಪ್ಪು ಎಂಬ ಭಾವನೆ ಬಂದಿದ್ದರೂ ಅದನ್ನು ಹೇಳುವುದಕ್ಕೆ ಧೈರ್ಯಮಾಡುತ್ತಿಲ್ಲ. ಇದು ಮಾನಸ್ತವಾದ ಶವೆಂದು ನಾನು ಹೇಳುತ್ತೇನೆ. ಈ ಸಭೆಯಲ್ಲಿ ಅನೇಕರಿಗೆ ಅದೇ ಅಭಿಪ್ರಾಯವಿದ್ದು. ಮುಂದಾದರೂ ಸರಿಹೋಗಬಹುದೆಂದು ಸರ್ಕಾರದವರಿಗೆ ಬೆಂಬಲ ಕೊಡುತ್ತಿದ್ದರು. ಆದರೆ ಎಲ್ಲರ ಮನಸ್ಸಿನಲ್ಲೂ ಒಂದು ಜಿಗುಪ್ಸೆಯ ಭಾವನೆ ಮೂಡತೊಡಗಿದೆ. ಅದು ನಿಲ್ಲುವ ಹಾಗಿಲ್ಲ. ಆದ್ದರಿಂದ ಹತೋಟಿಯನ್ನು ತೆಗೆಯಬೇಕು ಅಥವಾ ಬೇರೆ ಮಾರ್ಗವನ್ನು ಅನುಸರಿಸಬೇಕು. ಇಲ್ಲವಹೊರತು ದೇಶದಲ್ಲಿ ಆಹಾರದ ಸಮಸ್ಯೆ ಪರಿಹಾರವಾಗುವುದಿಲ್ಲ. ಅದೇ ರೀತಿ ಜನಗಳ ಅಭಿವೃದ್ಧಿಯೂ ಸಹ ಶ್ರೀ ಮಾದಯ್ಯಗೌಡರು ಹೇಳಿದಂತೆ ತುಂಬೆಗಿಡಕ್ಕೆ ಏಣಿ ಹಾಕುವಂತೆ ಆಗುತ್ತದೆ. ದಿನದಿನಕ್ಕೆ ಮನುಷ್ಯ ನಶಿಸಿಹೋಗುತ್ತಾನೆ. ಇಷ್ಟು ವರ್ಷದಿಂದ ಈ ನೀತಿಯನ್ನು ನಡೆಸಿಕೊಂಡುಬಂದಿದ್ದರೂ ದೇಶದಲ್ಲಿ ಒಂದು ಲಕ್ಷ ಟನ್ ಆಹಾರ ಹೆಚ್ಚಾಗಿ ಬೆಳೆಯುವುದಕ್ಕೆ ಆಗಿಲ್ಲ. ಅದು ಹೋಗಲಿ ಎಂದರೆ ಸರ್ಕಾರದವರಿಗೆ ಆಗತಕ್ಕ ಕೋಟ್ಯಾಂತರ ರೂಪಾಯಿ ನಷ್ಟವನ್ನೂ ಕೂಡ ನಿವಾರಣೆಮಾಡಿಕೊಳ್ಳುವುದಕ್ಕೆ ಆಗಿಲ್ಲ. ಇದೆಲ್ಲಾ ನೋಡಿದರೆ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ನಡೆಯಬೇಕೆಂಬ ನೀತಿ ಇವತ್ತಿನವರೆಗೂ ಸರ್ಕಾರದವರಲ್ಲಿ ಇಲ್ಲದಿರುವುದು ವ್ಯಸನಕರವಾದ ಅಂಶ. ಒಂದು ವಿಷಯ ಯೋಚನೆಮಾಡಬೇಕು. ರೈತನ ಕಷ್ಟ, ಸುಖ ಮತ್ತು ಪ್ರೊಕ್ಯೂರ್‌ಮೆಂಟ್ ಆರ್ಡರ್‌ನಿಂದ ಆಗತಕ್ಕ ಪರಿಸ್ಥಿತಿಯನ್ನು ಶ್ರೀ ಚೆನ್ನಬಸಪ್ಪನವರು ವಿಶದವಾಗಿ ತಿಳಿಸಿದ್ದಾರೆ. ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಒಂದು ಟಾರ್ಗೆಟ್ ಇಟ್ಟುಕೊಂಡು ವಸೂಲು ಮಾಡಿದರೂ, ಎಷ್ಟು ಬೇಕೋ ಅಷ್ಟನ್ನು ವಸೂಲುಮಾಡುತ್ತಾರೆಯೇ ವಿನಾಹ, ಎಷ್ಟು ಬೆಳೆಯುತ್ತಾರೋ ಅಷ್ಟನ್ನು ತೆಗೆದುಕೊಳ್ಳಬೇಕೆಂಬ ಭಾವನೆ ಇಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸರಿಯಲ್ಲ. ಎಷ್ಟು ಉತ್ಪತ್ತಿ ಆಗಬಹುದೆಂಬ ಅಂಕಿಅಂಶಗಳನ್ನು ನೋಡಿಕೊಂಡು ಸರ್‌ಪ್ಲಸ್ ಮೇರೆ ಇಷ್ಟು ವಸೂಲಾಗಬೇಕೆಂದು ನಿಗದಿಮಾಡುತ್ತೇವೆ. ತಾವು ಹೇಳುವ ಹಾಗೆ ಎಷ್ಟು ಬೇಕೋ ಅಷ್ಟನ್ನು ವಸೂಲುಮಾಡುವ ಹಾಗಿದ್ದರೆ ಇಂಡಿಯಾ ಸರ್ಕಾರದವರು ನಮಗೆ ಕಳುಹಿಸಲೇಬೇಕಾಗಿರಲಿಲ್ಲ.

ಶ್ರೀ ಬಿ. ಹುಚ್ಚೇಗೌಡರು.— ಸರ್‌ಪ್ಲಸ್ ಇಷ್ಟು ಎಂಬ ಅಂಕಿಅಂಶಗಳನ್ನು ಕೊಡುವವರು ತಮ್ಮ ಅಧಿಕಾರಿಗಳು. ಹೀಗೆ 11 ಗಜ, ಹಾಗೆ 11 ಗಜ, ಈ ಕಡೆ ನಾಲ್ಕುಗುಂಟೆ, ಆ ಕಡೆ ನಾಲ್ಕುಗುಂಟೆ ತೆಗೆದುಕೊಂಡು ಇಷ್ಟು ಸೇರು ಆಯಿತು ಎಂದು ನಿಗದಿಮಾಡುತ್ತಾರೆ. ಅದಕ್ಕೆ ಮಾರ್ಜಿನ್, ಬದು ವಗೈರೆ ಎಷ್ಟು, ಕೆಟ್ಟುಹೋಗುವುದು ಎಷ್ಟು ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ. ಈ ರೀತಿ ದೇಶದಲ್ಲಿ ಮುಖ್ಯವಾಗಿ ಬೆಳೆಯತಕ್ಕ ರೈತನಿಗೆ ಪ್ರೋತ್ಸಾಹವಿಲ್ಲ. ಎಷ್ಟುಮಟ್ಟಿಗೆ ಕಿರುಕುಳ ಇರಬೇಕೋ ಅಷ್ಟೂ ಇದೆ. ಉದಾಹರಣೆಗೆ ಪ್ರೊಕ್ಯೂರ್‌ಮೆಂಟ್ ಯಾವುದರ ಆಧಾರದಮೇಲೆ ಮಾಡುತ್ತೀರಿ ! ಶ್ಯಾನುಭೋಗ ಬರೆದ ಪಹಣಿ ಅಮಲ್ದಾರರ ಹತ್ತಿರಹೋಗುತ್ತದೆ. ಆ ಮೇಲೆ ಅವರು ಜಮಾಬಂದಿ ದಿನ ಇನ್ನೂ ಜಾಸ್ತಿಮಾಡುತ್ತಾರೆ. ಇದೇ ರೀತಿ ಸಬ್ ಡಿವಿಜನ್ ಆಫೀಸರು ಬಂದು ಜಮಾಬಂದಿ ಮಾಡಿದಾಗ ಅಷ್ಟಾಗುವುದಿಲ್ಲ. ಸುಮಾರು ಹತ್ತು ಸಾವಿರ ಇದ್ದರೆ 13 ಸಾವಿರ ಪಲ್ಲ ಎಂದು ತಿದ್ದುಪಡಿಮಾಡಬೇಕೆಂದರೆ, ಮಾಡಬೇಕು.

ಇದಾದ ಮೇಲೆ ಡೆಪ್ಯುಟಿ ಕಮಿಷನರು, ಡೈರೆಕ್ಟರು ಬೇರೆ ಬಂದು ಟಾರ್ಜೆಟ್ ಹೆಚ್ಚು ಮಾಡುತ್ತಾರೆ. ಡೈರೆಕ್ಟರು ಬಂದು ಹೀಗೆ ಹೆಚ್ಚುಮಾಡಿದ ಮಾತ್ರಕ್ಕೇ ರೈತನ ಮನೆಯಲ್ಲಿ ಅಕ್ಷಯವಾಗುತ್ತದೆಯೇ ? ಹೀಗೆಲ್ಲಾ ನಡೆಯುತ್ತಿದೆ. ನೀವು ಗೊತ್ತುಮಾಡುತ್ತಿರತಕ್ಕಂಥ ಟಾರ್ಜೆಟ್ ಎಂಬುದು ಇದು. ಈ ವರ್ಷ ಇಷ್ಟು ದವಸ ಬೇಕಾಗುತ್ತದೆ, ದೇಶದಲ್ಲಿ ಇಷ್ಟು ಶೇಖರಿಸಬೇಕೆಂದು ಹೇಳಿದರೆ ಆಯಿತು, ಯಾವ ರೈತನಿಗೆ ಏನಾದರೂ ಆಗಲಿ, ಅಷ್ಟು ವಸೂಲಾಗಲೇಬೇಕು. ಇದನ್ನು ನೋಡಿದರೆ ಕಲ್ಕತ್ತಾದಲ್ಲಿ "ಫೂಕಾ" ಪದ್ಧತಿ ಜಾರಿಯಲ್ಲಿದೆಯೆಂದು ಹೇಳುತ್ತಿರುವ ಒಂದು ಪದ್ಧತಿಯ ವಿಷಯ ಜ್ಞಾಪಕಕ್ಕೆ ಬರುತ್ತೆ. ಹತ್ತುಸೇರು ಹಾಲು ಬೇಕೆಂದರೆ ಹಸುವಿನ ಮೊರೆಯ ದ್ವಾರಕ್ಕೆ ಒಂದು ಕೊಳವೆಯನ್ನು ಸಿಕ್ಕಿಸಿ ಅದರಲ್ಲಿ ಹಾಲಿರಲಿ ಇಲ್ಲದಿರಲಿ, ರಕ್ತ ಬರುವವರೆಗೂ ಕರೆದುಬಿಡುತ್ತಾರೆ. ಅದೇರೀತಿ ಈಗ ನೀವು ಮಾಡುತ್ತಿರುವುದೂ ರೈತನ ರಕ್ತ ಬರುವವರೆಗೂ ಆತನನ್ನು ಹೀರಿಬಿಸುತ್ತಿದ್ದೀರಿ. ಅವನಿಗೇನೇ ಆಗಲಿ ಒಟ್ಟಿನಲ್ಲಿ ನಿಮ್ಮ ಲೆಕ್ಕಕ್ಕೆ ಬೇಕಾದಷ್ಟನ್ನು ಸರಿಮಾಡಿಕೊಳ್ಳಬೇಕೆಂದು ಮಾಡುತ್ತಿದ್ದೀರಿ. ಬೇಕಾದರೆ ಈಗಲೂ ಎಲ್ಲಾ ಕಡೆಯಿಂದಲೂ ಲೆಕ್ಕಗಳನ್ನು ತರಿಸಿ ನೋಡಿ ಅಂಕಿಗಳನ್ನು ಹೊಡೆದು ಹೊಡೆದು ವ್ಯತ್ಯಾಸ ಮಾಡಿರುವುದು ಕಂಡುಬರುತ್ತದೆ. ಹಾಗೇನಾದರೂ ಸರಿಯಾಗಿ ಮಾಡಿದ್ದರೆ ಇಂಥಿಂಥ ಕಡೆಯಲ್ಲಿ ಇಷ್ಟಿಷ್ಟು ಧಾನ್ಯ ಬಿಟ್ಟು ಬಂದಿದ್ದೇವೆಂದು ಹೇಳಿ ನೋಡೋಣ. ಈ ನಿಮ್ಮ ನೀತಿಯಿಂದ ದೇಶದಲ್ಲಿ ಏನು ಪರಿಣಾಮವಾಗುತ್ತದೆ, ರೈತನ ಮನಸ್ಸಿನಲ್ಲಿ ಯಾವ ಭಾವನೆಯುಂಟಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಆಹಾರ ಧಾನ್ಯಗಳನ್ನು ಬೆಳೆದ ತಪ್ಪಿಗಾಗಿ ಆತನ ಮನೆ ನುಗ್ಗುವುದಕ್ಕೆ ಕಾರಣವಾಯಿತು. ಇಂದು ಚುನಾವಣೆ ಮಾತು ಬಂದಿತೆಂದರೆ ರೈತನಿಗೆ ಹೆಚ್ಚಿಗೆ ತಿಳಿವಳಿಕೆಯಿಲ್ಲವೆಂದು ವಾದ ಮಾಡುತ್ತೀರಿ. ಅಂಥಾದ್ದರಲ್ಲಿ ಈ ಹತೋಟಿ ಆಜ್ಞೆಗಳ ವಿಷಯದಲ್ಲಿ ಮಾತ್ರ ರೈತರಿಗೆ ಎಲ್ಲಾ ತಿಳಿದಿದೆ ಎಂದು ಹೇಳುತ್ತೀರಿ !!. ಮೊದಲು ನೀವು ಒಬ್ಬನಿಗೆ 4 ಪಲ್ಲಾ ಬೆಳೆಯುತ್ತದೆಂದ ಅಂದಾಜು ಮಾಡಿಬಿಟ್ಟಿದ್ದರೆ ಸಾಕು, ಆತನ ಕಣಕ್ಕೇ ಹೋಗಿ ಅಲ್ಲಿ ಎಷ್ಟೇ ಮಾನ್ಯವಾಗಿ ಆಗಿರಲಿ ಒಂದು

ಕಾಳನ್ನೂ ಕೂಡ ಬಿಡದೆ ತಂದಿರುವ ಸಂದರ್ಭಗಳಿವೆ. ನಮ್ಮಂಥವರು ಎಷ್ಟೇ ಇದ್ದರೂ ಸದಾ ಕಾಲವೂ ರೈತರನ್ನು ಕಟ್ಟಿಕೊಂಡು ಹೊಡೆದಾಡುವುದಕ್ಕೆ ಸಾಧ್ಯವೇ? ಅವರಿಗಾಗಿಯೇ ಟೊಂಕಕಟ್ಟಿ ನಿಲ್ಲುವುದಕ್ಕಾಗುತ್ತದೆಯೇ? ಡೆಪ್ಯುಟಿ ಕಮಿಷನರು ತಾನೇ ಇದನ್ನೆಲ್ಲಾ ನೋಡುತ್ತಾರೆಯೇ? ನಿಮಗೆ ದವಸವನ್ನು ಒದಗಿಸಿ ಕೊಡುವುದೆನ್ನುವುದು ಒಂದೇ ಹೊರತು ಅವರೇನನ್ನೂ ಮಾಡುವುದಕ್ಕಾಗುವುದಿಲ್ಲ. ಅವರೇನೋ ರೈತರ ವಿಷಯದಲ್ಲಿ ಸ್ವಲ್ಪ ಪ್ರೀತಿಯಿಟ್ಟುಕೊಂಡಿದ್ದರೆಂದೂ ಏನೂ ಸಹಾಯ ಮಾಡುವುದಕ್ಕೆ ಅವರಿಗೆ ಸಾಧ್ಯವಿಲ್ಲ. ಏಕೆಂದರೆ ಒಬ್ಬರಿಗೆ ಸಹಾಯಮಾಡಲು ಹೊರಟಿತೆಂದರೆ ಎಷ್ಟೋ ಜನರು ಬರುತ್ತಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಪ್ರೀತಿಯಿಟ್ಟುಕೊಂಡಿದ್ದಾರೆಂದು ಹೇಳಿದಿರಿ !!

ಶ್ರೀ ಬಿ. ಹುಚ್ಚೇಗೌಡರು.—ನೀವಿಟ್ಟುಕೊಂಡಿರುವ ಕಾನೂನಿನ ಪ್ರಕಾರ ಅವರೇನು ಮಾಡುವುದಕ್ಕೂ ಸಾಧ್ಯವಿಲ್ಲ. ನೀವು ಇದೇರೀತಿ ಮಾಡುತ್ತಿದ್ದರೆ ದೇಶದಲ್ಲಿ ಎಂದಿಗೂ ಹೆಚ್ಚಿಗೆ ಆಹಾರ ಬೆಳೆಯುವುದಕ್ಕಾಗುವುದಿಲ್ಲ. ಇಂದಲ್ಲ ನಾಳೆಯಾದರೂ ನಿಮ್ಮ ಆಡಳಿತ ನೀತಿಯನ್ನು ಮಾರ್ಪಾಡು ಮಾಡಬೇಕಾಗಿದೆ. ಎಷ್ಟೋ ಬೆಳೆಗಳಲ್ಲಿ ರೈತನಿಗೆ ದುಡ್ಡು ಬಂದರೂಕೂಡ ಆತನು ಇನ್ನೊಬ್ಬರ ಮನೆಯ ಮುಂದೆ ಹೋಗಿ ದವಸ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಅವನಿಗೆ ಯಾವಾಗಲೂ ಮುಂದಿನ ವರ್ಷಕ್ಕೂ ತಕ್ಕಷ್ಟು ಕೂಡಿಡಬೇಕೆಂಬುದೇ ಆಸೆ. ಇಂದು ಬೆಂಗಳೂರು ಸಿಟಿಯಲ್ಲಿ ಈ 10 ವರ್ಷಗಳಲ್ಲಿ ಇಷ್ಟು ಜನಸಂಖ್ಯೆ ಹೆಚ್ಚಾಗಿರುವುದಕ್ಕೆ ಕಾರಣವಾದರೂ ಏನು ! ಈ ನಿಮ್ಮ ಸಿಟಿ ಪ್ರದೇಶಗಳಿಗೆ ಹಂಚಿಕೆ ಮಾಡಲು ಸಾಲದೆ ಬರುವ 1 ಲಕ್ಷ 44 ಸಾವಿರ ಟನ್‌ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಶೇಖರಣೆ ಮಾಡಿ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಆಹಾರ ಧಾನ್ಯಗಳನ್ನು ಯಾರು ಬೆಳೆಯುವುದಿಲ್ಲವೋ ಅವರಿಗೇನಾದರೂ ಕೊಡುವ ಏರ್ಪಾಡು ಮಾಡಿದ್ದೀರಾ ! ಅವರಿಗೆ ದವಸ ಡಿಪೋದಲ್ಲಿದ್ದರೆ ಕೊಡುತ್ತೀರಿ, ಇಲ್ಲದಿದ್ದರೆ ಇಲ್ಲ. ನಾನೇ ಒಮ್ಮೆ ಖುದ್ದಾಗಿ ನೋಡಿದ್ದೇನೆ. ಒಂದು ಹಬ್ಬಕ್ಕೆ ಒಂದುಸೇರು ಗೋಧಿ ಕೊಡಿ ಎಂದು ಕೇಳಿಕೊಂಡರೂ ಡೆಪ್ಯುಟಿ ಕಮಿಷನರವರು ಕೊಡುವುದಕ್ಕಾಗುವುದಿಲ್ಲವೆಂದು ತಮಗೆ ಅಧಿಕಾರವಿಲ್ಲವೆಂದು ಹೇಳಿಬಿಟ್ಟರು. ಗ್ರಾಮಾಂತರಗಳವರು ಎಷ್ಟೇ ರಾಗಿ, ಬತ್ತ ಕೊಟ್ಟಿರಲಿ ಅವರಿಗೆ ಒಂದುಸೇರು ಗೋಧಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಅವರಿಗೆಷ್ಟು ಸಂಕಟವಾಗಬೇಕು. ಅವರಿಗೆ ಅಕಸ್ಮಾತ್ ಬೇಕೆಂದರೂ ಸ್ವಲ್ಪ ಸಕ್ಕರೆಯನ್ನೂ ಸಹ ಕೊಡುವುದಿಲ್ಲ. ಇವೆಲ್ಲದರಿಂದ ಜನಗಳ ಮೇಲೆ ಯಾವ ಕೆಟ್ಟ ಪರಿಣಾಮವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಈ ಸಭೆಯಲ್ಲಿರತಕ್ಕವರೆಲ್ಲರೂ ಸರ್ವಾನುಮತದಿಂದ ಅದನ್ನೇ ಪ್ರತಿಬಿಂಬಿಸುತ್ತಾರೆ. ಈಗಲಾದರೂ ಸರ್ಕಾರದವರು ಇದನ್ನು ಮನಗಂಡು ಅದರಂತೆ ನಡೆದುಕೊಳ್ಳಬೇಕು. ರೈತನು ಇಂದು ಸಂಕಟಪಡುತ್ತಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ನಿಜವಾಗಿಯೂ ಆತನ ಮನೆ ಮಕ್ಕಳೆಲ್ಲರೂ ದುಡಿಯುತ್ತಿರುತ್ತಾರೆ. ಅಂಥ ಮಕ್ಕಳಿಗೆ ಒಂದು ಪಾವು ಅಕ್ಕಿ ಕೊಡುವುದಕ್ಕಾಗುವುದಿಲ್ಲವೆಂದರೆ ಏನು ಹೇಳೋಣ! ಅದೇ ಸಿಟಿಯಲ್ಲಿ ಇದ್ದುಕೊಂಡು ಉಣ್ಣುವ ಹಣಗಾರನ ಮಕ್ಕಳಿಗೆ ಕೊಡುತ್ತೀರಿ ! ಹೀಗಿದ್ದರೆ ಆ ಹಳ್ಳಿಯವರು ಹೇಗೆ ಕೆಲಸ ಮಾಡುತ್ತಾರೆ. ಆದ್ದರಿಂದ ಈ ತೆರದ ನೀತಿ ಎಲ್ಲಿಯವರೆಗೆ ದೇಶದಲ್ಲಿರುತ್ತದೆಯೋ ಅಲ್ಲಿಯವರೆಗೆ ನಮಗೆ ಮೋಕ್ಷವಿಲ್ಲ. ನಿಜವಾಗಿಯೂ ಕಂಟ್ರೋಲ್ ಇಟ್ಟುಕೊಳ್ಳಬೇಕೆಂದರೆ ಎಲ್ಲಾ ಪದಾರ್ಥಗಳನ್ನೂ ಕಂಟ್ರೋಲ್ ಮಾಡಿ ಸರಿಯಾಗಿ ಎಲ್ಲರಿಗೂ ಹಂಚಿಕೆ ಮಾಡಬೇಕು. ಹಾಗಿಲ್ಲದಿದ್ದರೆ ಕಂಟ್ರೋಲ್ ತೆಗೆದುಬಿಟ್ಟು, ಬೇರೆ ಕಡೆಯಿಂದ ಬೇಕಾದಷ್ಟು ಧಾನ್ಯಗಳನ್ನು ತರಿಸಿ ಅದನ್ನು Buffer Stock ನಂತೆ ಇಟ್ಟುಕೊಂಡು ವ್ಯಾಪಾರದ ಏರುಪೇರುಗಳನ್ನು ನೋಡಿಕೊಂಡು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ಅಷ್ಟೇ ಹೊರತು ಈಗ ನೀವು ಮಾಡುತ್ತಿರುವ ವಿಧಾನದಿಂದ ನಿಮ್ಮ ಕಾರ್ಯ ಎಂದೂ ಜಯಪ್ರದವಾಗುವುದಿಲ್ಲ.

ಇನ್ನೊಂದು ವಿಷಯವೇನೆಂದರೆ, ಈಗ ಯಾವುದನ್ನು ನೋಡಲಿ, ಮಾತೆತ್ತಿದರೆ ಇಂಡಿಯಾ ಸರ್ಕಾರವೆಂದು ಹೇಳುತ್ತಿದ್ದೀರಿ. ಮಿಲಿಟರಿ ಸೈನಿಕರ ವಿಷಯದಲ್ಲಿ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ಇಂಡಿಯಾ ಸರ್ಕಾರವಾದರೂ ಏನು ? ಅದೂ ಪ್ರಜಾಸತ್ತೆಯಲ್ಲವೇ ? ಹಿಂದಿನ ಬ್ರಿಟಿಷ್ ಸಾಮ್ರಾಜ್ಯಶಾಹಿಯಂತೆ, ಮೊಗಲ್ ಸಾಮ್ರಾಜ್ಯಶಾಹಿಯಂತೆ ಅದೂ ಒಂದು ಸಾಮ್ರಾಜ್ಯಶಾಹಿಯೆಂದು ನಿಮ್ಮ ಭಾವನೆಯೇ ? ಪ್ರಜೆಗಳಿಗೆ ಅನುಸಾರವಾಗಿ ಅವರು ನಡೆಯುವುದಿಲ್ಲವೆಂದು ನಿಮ್ಮ ಅಭಿಪ್ರಾಯವೇ ? ಹಾಗಿಲ್ಲದಿದ್ದಾಗ, ಆ ಸರ್ಕಾರದ ಮೇಲೆ ನಮ್ಮ ಸರ್ಕಾರದವರು ಈ ವಿಷಯದಲ್ಲಿ ತಮ್ಮ ಪ್ರಭಾವವನ್ನು ಬೀರುವುದಕ್ಕಾಗದಿದ್ದರೆ ಈ ಸರ್ಕಾರವೇಕೆ ? ಅವರ ಅಭಿಪ್ರಾಯಕ್ಕೆ ವಿರೋಧವಾಗಿ ಹೇಳುವುದಕ್ಕೆ ಶಕ್ತಿಯಿಲ್ಲದೆ ಇದ್ದರೆ ನಿಮ್ಮಿಂದ ಏನು ಪ್ರಯೋಜನ? ಅದೂ ಪ್ರಜಾಸರ್ಕಾರವೇ. ಅದು ಸಾಮ್ರಾಜ್ಯಶಾಹಿ ಸರ್ಕಾರ ಖಂಡಿತವಾಗಿಯೂ ಅಲ್ಲವೆಂದು ನಾನು ಭಾವಿಸುತ್ತೇನೆ. ಆಹಾರದ ವಿಷಯದಲ್ಲಿ ಒಂದು ಹೇಳುತ್ತೇನೆ. ಈ ವಿಷಯದವುಟ್ಟಿಗೆ ಯಾವ ವ್ಯಕ್ತಿಯ ಅಥವಾ ಪಕ್ಷ ಪಂಗಡದ ಮಾತಿಲ್ಲ, ಇಡೀ ದೇಶಕ್ಕೆ ಸಂಬಂಧಿಸಿದ್ದು. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ; ವಾಸ್ತವಿಕ ವಿಚಾರಗಳನ್ನು ಮುಚ್ಚಿಟ್ಟುಕೊಂಡು ಮಾತನಾಡಬಾರದು. ಅಂಥ ಮಾತನಾಡುವ ಕಾಲ ಹತ್ತು ವರ್ಷದ ಹಿಂದಕ್ಕೇ ಹೋಯಿತು. ಆದ್ದರಿಂದ ಯಾವಾಗಲೂ ನಾವು ಯಾವುದನ್ನು ಕಡ್ಡಾಯವಾಗಿ ನಡೆಸಬಹುದೆಂದಿದ್ದೇವೋ ಅಂಥಾದ್ದನ್ನು ಮಾತ್ರ ನಾವು ಕೈಕೊಳ್ಳಬೇಕು. ಹತೋಟಿ ಆಜ್ಞೆಗಳಿಂದ ಯಾವಾಗ ದೇಶಕ್ಕೆ ಹೆಚ್ಚಿನ ಪ್ರಯೋಜನವಿಲ್ಲವೆಂದು ಕಂಡುಬಂದಿತೋ, ಆಗ್ಗೆ ನೀವು ಕೂಡಲೇ ಈ ಹತೋಟಿಯನ್ನು ತೆಗೆದುಬಿಡಿ. ಬೇರೆ ಕಡೆಗಳಿಂದ ನಿಮಗೆಷ್ಟುಬೇಕೋ ಅಷ್ಟನ್ನು ತರಿಸಿಕೊಳ್ಳಿ. ರೈತರೂ ತಮ್ಮತಮ್ಮಲ್ಲೇ ಸರಿಹೊಂದಿಸಿಕೊಳ್ಳುವುದಕ್ಕೆ ಒಂದು ಅವಕಾಶ ಕೊಟ್ಟು ನೋಡಿ. ಇದು ಸಾಧ್ಯವಿಲ್ಲವೆಂದು ನೀವು ಭಾವಿಸುವುದಾದರೆ ಸುಮ್ಮನೆ ಎಲ್ಲವನ್ನೂ ಕಂಟ್ರೋಲ್ ಮಾಡಿ ಎಲ್ಲರಿಗೂ ಹಂಚಿಕೆಮಾಡುವ ವ್ಯವಸ್ಥೆ ಮಾಡಿ.

ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನೂ ನಿಮಗೆ ಬೇಕಾದರೆ ಕೊಡುತ್ತೇನೆ. ಈ ಆಹಾರವನ್ನು ಹಂಚಿಕೆ ಮಾಡುವ ವಿಷಯದಲ್ಲಿ ನಮ್ಮ ಈ ಅಸೆಂಬ್ಲಿ ಸದಸ್ಯರಿಗೇ ಒಂದೊಂದು ಡಿಸ್ಟ್ರಿಕ್ಟನ್ನು ವಹಿಸಿಕೊಡಿ. ಆ ಡಿಸ್ಟ್ರಿಕ್ಟ್‌ಗಳಲ್ಲಿ ಅವರುಗಳು ಹೇಗೆ ನಡೆಸುತ್ತಾರೆಂಬುದನ್ನೂ ಪರೀಕ್ಷೆಮಾಡಿ ನೋಡಿ. ಅದರಿಂದ ಎಷ್ಟರಮಟ್ಟಿಗೆ ತಾವು ಮಾಡುತ್ತಿರುವುದು ತಪ್ಪೆಂದು ಗೊತ್ತಾಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಸ್ಟ್ರಿಕ್ಟನ್ನು ವಹಿಸುವುದೆಂದರೇನು ? ಇನಾಂತಿ ಕೊಡುವುದೆಂತಲೇ, ಬಳುವಳಿ ಕೊಡುವುದೆಂತಲೇ? ಕೊಡುವುದು ಯಾವುದನ್ನು ?

ಶ್ರೀ ಬಿ. ಹುಚ್ಚೇಗೌಡರು.—ಆಯಾ ಡಿಸ್ಟ್ರಿಕ್ಟಿನ ಆಹಾರದ ಶೇಖರಣೆ, ಉತ್ಪತ್ತಿಯ ಹಂಚಿಕೆ ಮುಂತಾದ್ದೆಲ್ಲವನ್ನೂ ಆಯಾ ಡಿಸ್ಟ್ರಿಕ್ಟಿನ ಅಸೆಂಬ್ಲಿ ಸದಸ್ಯರುಗಳಿಗೇ ವಹಿಸಿಬಿಡಿ ಎಂದು.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಸಮರ್ಪಕವಾಗಿ ನಡೆಸದೆ ಹೋದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುವುದು ?

ಶ್ರೀ ಬಿ. ಹುಚ್ಚೇಗೌಡರು.—ಈಗ ನಿಮ್ಮ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೋ ಅದನ್ನೇ.

ಇನ್ನೊಂದು ವಿಷಯವೇನೆಂದರೆ, ಹೆಚ್ಚು ಬೆಳೆ ಬೆಳೆಯುವ ಯೋಜನೆ. ಇದರಿಂದ ಎಷ್ಟುಮಟ್ಟಿಗೆ ಬೆಳೆ ಹೆಚ್ಚಿದೆ ಎಂಬುದು ಸದಸ್ಯರಿಗೆ ಗೊತ್ತೇಇದೆ. ಟ್ರಾಕ್ಟರುಗಳಿಂದ ಹೆಚ್ಚು ಉಪಯೋಗವಾಗಿಲ್ಲ. ಕಳೆದ ಸಾಲಿನಲ್ಲಿ ವ್ಯವಸಾಯ ಮಂತ್ರಿಗಳು ಹದಿನೈದು ಲಕ್ಷ ರೂಪಾಯಿ ಒದಗಿಸಿ ಟ್ರಾಕ್ಟರುಗಳನ್ನಿಟ್ಟು ಕೆಲಸ ಮಾಡಿಸಿದರೂ ಸುಮಾರು 15 ಸಾವಿರ ಎಕರೆಯಷ್ಟು ಸಾಗುವಳಿಯಾಗಿದೆ. ಇದಕ್ಕಾಗಿ ಇಷ್ಟು ಶ್ರಮಪಡಬೇಕು! ನಮ್ಮ ಡಿಸ್ಟ್ರಿಕ್ಟಿನಲ್ಲಿರುವ ಹನ್ನೊಂದು ಟ್ರಾಕ್ಟರುಗಳಲ್ಲಿ ಒಂದೂ ಸರಿಯಾಗಿಲ್ಲ. ಈ ಹೊತ್ತು ಸರಿಮಾಡಿದರೆ ನಾಳೆ ಮತ್ತೆ ಕೆಟ್ಟು ಹೋಗಿ ವಾಪಸು ಬರುತ್ತದೆ. ಆದ ಕಾರಣ ಇದಕ್ಕಾಗಿ ಖರ್ಚು ಮಾಡುವುದು ವ್ಯರ್ಥ. ಇದೆಲ್ಲ ಉತ್ಸಾಹದಲ್ಲಿ ಮಾಡತಕ್ಕ ಪ್ರಚಾರ. ಈ ಪ್ರಚಾರಕ್ಕಾಗಿ ಎಷ್ಟು ಲಕ್ಷ ರೂಪಾಯಿ ಖರ್ಚಾಗುತ್ತಿದೆಯೋ ಗೊತ್ತಿಲ್ಲ. ಇದನ್ನು ನಿಲ್ಲಿಸುವುದೇ ಉತ್ತಮ. ಇದರಿಂದ ಜನರಿಗೆ ಏನೂ ಉಪಯೋಗವಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಚಾರಕ್ಕಾಗಿ ಎಷ್ಟು ಖರ್ಚಾಗಿದೆಯೆಂಬುದನ್ನು ಬಡ್ಜೆಟ್ಟಿನಲ್ಲಿ ನೋಡಿ.

ಶ್ರೀ ಬಿ. ಹುಚ್ಚೇಗೌಡರು.—ಜೋಳ ನಾಲ್ಕು ಲಕ್ಷದಿಂದ ಮೂರು ಲಕ್ಷಕ್ಕೆ ಇಳಿದಿದೆ, ರಾಗಿ ಬೆಳೆಯುವ ಪ್ರದೇಶ ಎಂಟು ಲಕ್ಷದಿಂದ ಏಳು ಲಕ್ಷ ಎಕರೆಗೆ ಕಡಿಮೆಯಾಗಿದೆ. ಬತ್ತ ಬೆಳೆಯುವ ಪ್ರದೇಶ ಹೋದ ವರ್ಷದಿಂದೀಚೆಗೆ ಹತ್ತು ಸಾವಿರ ಎಕರೆ ಹೆಚ್ಚಾಗಿದೆಯೆಂದು ಮಂತ್ರಿಗಳು ಹೇಳಿದರು..................

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇರ್ರಿಗೇಷನ್ ಪ್ರದೇಶದ ಉದಾಹರಣೆ ಮಾತ್ರ ಕೊಟ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಇರಲಿ. ಎಂಟು ಹತ್ತು ವರ್ಷಗಳಿಂದೀಚೆಗೆ ಎಷ್ಟು ಲಕ್ಷ ಎಕರೆ ಹೊಸದಾಗಿ ತರಿಯಾಗಿದೆ, ಇದರಿಂದ ಎಷ್ಟು ಆಹಾರಧಾನ್ಯ ಹೆಚ್ಚಾಗಿದೆ? ಅದಕ್ಕೆ ತಕ್ಕಂತೆ ಹೆಚ್ಚಿದೆಯೆ? ಇಲ್ಲ. ಹೆಚ್ಚಾಗಿದೆಯೆಂದು ಅವರು ತೋರಿಸಿದರೆ ನಾನು ಒಪ್ಪುತ್ತೇನೆ. ಅದು ಬಿಟ್ಟು ಯಾವುದೋ ಒಂದು ವರ್ಷದ್ದನ್ನು ಮಂತ್ರಿಗಳು ತೋರಿಸಿದರೆ ಹೇಗೆ ಒಪ್ಪುವುದು! ಇದನ್ನೆಲ್ಲಾ ಬಿಟ್ಟು ಜನರಿಗೆ ಮನಸ್ಸಿಗೆ ಹಿಡಿಯುವಂತೆ ಪ್ರೋತ್ಸಾಹ ಕೊಡಬೇಕು. ರೈತರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಮಾಡಿದರೆ ಬೆಳೆದುಬಿಡುತ್ತಾರೆಯೆ?

ಶ್ರೀ ಬಿ. ಹುಚ್ಚೇಗೌಡರು.—ಅವರು ಬೆಳೆಯದೇ ಇದ್ದಿದ್ದರೆ ರಂಗರಾಮಯ್ಯನವರಿಗೆ ತಿನ್ನುವುದಕ್ಕೇ ಇರುತ್ತಿರಲಿಲ್ಲ.

ಫೈನಾನ್ಷಿಯಲ್ ಇಂಟೆಗ್ರೇಷನ್ ವಿಚಾರದಲ್ಲಿ ಒಂದು ಮಾತು, ಇದು ವರ್ಷವರ್ಷಕ್ಕೂ ಬದಲಾವಣೆ ಆಗುವ ಹಾಗೆ ಕಾಣುತ್ತದೆ: ಈ ಇಂಟೆಗ್ರೇಷನ್ ಒಪ್ಪಂದದಲ್ಲಿ ನಮಗೆ ಕೇಂದ್ರದವರು 345 ಲಕ್ಷ ರೂಪಾಯಿನಂತೆ ಐದು ವರ್ಷ ಕಾಲ ಕೊಡಬೇಕೆಂದು ಆ ಮೇಲೆ ಕ್ರಮೇಣ ಕಡಿಮೆ ಮಾಡುತ್ತಾ ಹೋಗುವುದೆಂದೂ ಇತ್ತು. ಇತರ ಸಂಸ್ಥಾನಗಳಿಗೆ ಕೊಡುವಂತೆ ದಾಮಾಷಾ ಪ್ರಕಾರ ಕಡಿಮೆಯಿಲ್ಲದಂತೆ ಕೊಡುತ್ತೇವೆಂದು ಒಂದು ಕ್ಲಾಜೂ ಇದೆ. ಇದು ನನಗೆ ಸರಿಯಾಗಿ ಅರ್ಥವಾಗಿಲ್ಲ. ಕಾಫಿ, ಟೀ, ಸೀಮೆ ಎಣ್ಣೆ ಇವುಗಳ ಮೇಲಿನ ಸುಂಕ ಹೆಚ್ಚಿಸಿದ್ದಾರೆ, ಇನ್‌ಕಂಟ್ಯಾಕ್ಸ್ ಮತ್ತು ರೈಲ್ವೆ ದರಗಳನ್ನು ಜಾಸ್ತಿ ಮಾಡಿದ್ದಾರೆ. ಇದಕ್ಕೆಲ್ಲಾ ಸರಿಯಾಗಿ ನಮಗೆ ಅವರು ಕೊಡುತ್ತಾರೆಯೋ ಅಥವಾ ಎಲ್ಲವನ್ನೂ ಪೂಲ್ ಮಾಡಿ ಹಂಚುತ್ತಾರೆಯೋ ಗೊತ್ತಿಲ್ಲ. ಪೂಲ್ ಮಾಡಿ ಹಂಚುವುದಾದರೆ ಫೈನಾನ್ಷಿಯಲ್ ಇಂಟೆಗ್ರೇಷನ್ ಬೇಕಾಗಿಯೇ ಇಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಮಗೆ ಏನು ಅನುಮಾನವಿದೆಯೋ ಗೊತ್ತಾಗಲಿಲ್ಲ. ಎರಡರಲ್ಲಿ ನಾವು ಯಾವುದನ್ನು ಬೇಕಾದರೂ ಆರಿಸಿಕೊಳ್ಳಬಹುದು. ನಮಗೆ ಯಾವುದು ಅನುಕೂಲವಾಗಿರುತ್ತದೆಯೋ ಅದನ್ನು ತೆಗೆದುಕೊಳ್ಳಬಹುದು. 345 ಲಕ್ಷಕ್ಕಿಂತ ಹೆಚ್ಚಾಗಿ ಬರುವಹಾಗಿದ್ದರೆ ಅದನ್ನೇ ತೆಗೆದುಕೊಳ್ಳಬಹುದು. ಅದಕ್ಕಿಂತ ಕಡಿಮೆ ಬರುವಹಾಗಿದ್ದರೆ ಅವರು ಸೇರಿಸಿಕೊಡುತ್ತಾರೆ. ಡಿವಿಜನಲ್ ಪೂಲ್ ಪ್ರಕಾರ 400 ಲಕ್ಷ ಬಂದರೆ ನಾವು ಅದನ್ನೇ ತೆಗೆದುಕೊಳ್ಳಬಹುದು. ನಮಗೇ ಈ ಅನುಕೂಲವಿದೆ. ಮೊದಲನೆಯ ಐದು ವರ್ಷ ತುಂಬಿದ ಮೇಲೆ ಇನ್ನು ಐದು ವರ್ಷಕ್ಕೆ ಸೇಕಡ 8 ರಂತೆ ಕಡಿಮೆಯಾಗುತ್ತಾ ಬರುತ್ತದೆ. ಆ ಸಮಯದಲ್ಲಿ share of divisible pool ಹೆಚ್ಚಿದ್ದರೆ ಆಗ ಇದು ಕಡಿಮೆಯಾದರೆ ನಾವು ಆ ಕಡೆ ತಿರುಗಿಕೊಳ್ಳಬಹುದು. ನಮಗೆ ಈ ಅನುಕೂಲವಿದೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಅಡ್ಮಿನಿಸ್ಟ್ರೇಟಿವ್ ಸರ್ವಿಸಸ್ ಮತ್ತು ಪೋಲೀಸ್ ಸರ್ವಿಸಸ್ ವಿಷಯದಲ್ಲಿ ಅನುಸರಿಸುತ್ತಿರುವ ನೀತಿ ನಮ್ಮ ದೇಶದ ಗೌರವಕ್ಕೆ ಕುಂದಕ ತರುತ್ತದೆ. ಇದು ಬೇಡವೆಂದು ಈಗಾಗಲೇ ಹೇಳಿದ್ದೇವೆ. ನಮ್ಮ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಈಗಾಗಲೇ ಸಾಧ್ಯವಾದಷ್ಟು ಇಂಡಿಯಾ ಸರ್ಕಾರದೊತನೆ ವ್ಯವಹಾರ ನಡೆಸಿರುವುದಾಗಿ ತಿಳಿಸಿದ್ದಾರೆ. ಆದರೂ ಈ ಸಮಿತಿ ಬಂದಿದೆ. ಇದರಲ್ಲಿ ಚುನಾವಣೆಯಾಗದೇ ಹೋದವರಲ್ಲಿ ಒಂದು inferiority complex ಬಂದು ನೈತಿಕ ಮಟ್ಟಕ್ಕೇ ಕುಂದುಕ ಬರುತ್ತದೆಂದು ನನ್ನ ಅಭಿಪ್ರಾಯ. ಅನೇಕ ವರ್ಷಗಳಿಂದ ಈ ಅಧಿಕಾರಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ನಮ್ಮ ದೇಶದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇಂತಹ ನೌಕರರಿಗಿಂತ ಕಡಿಮೆಯವರಿಂದ ಇವರನ್ನು ಸ್ಕ್ರೀನ್ ಮಾಡಿಸಬೇಕೆಂದು ಹೇಳುವುದು ಇವರಿಗೆ ಅವಮಾನವೆಂದು ನನ್ನ ಭಾವನೆ.

ಮಿಲಿಟರಿ ಸರ್ವಿಸ್‌ಗಳ ವಿಚಾರ ಜನಾಬ್ ಇಮಾಂರವರು ಚೆನ್ನಾಗಿ ಹೇಳಿದ್ದಾರೆ. ಶ್ರೀಮಾನ್ ಜೋಯಿಸರವರೂ ಈ ವಿಚಾರವನ್ನು ಚೆನ್ನಾಗಿ ಹೇಳಿದ್ದಾರೆ. ಇಂಟೆಗ್ರೇಷನ್ ಪರಿಣಾಮವಾಗಿ ನಾವು ಮಿಲಿಟರಿ, ಕಮ್ಯೂನಿಕೇಷನ್ಸ್ ಮುಂತಾದ ಕೆಲವು ಬಾಬುಗಳನ್ನು ಇಂಡಿಯಾ ಸರ್ಕಾರಕ್ಕೆ ಸೇರಿಸುವುದು ನ್ಯಾಯ, ಆದರೆ ನಾವೂ ಭಾರತದ ಪ್ರಜೆಗಳೇ ಆದ ಮೇಲೆ ನಮ್ಮ ಸೈನ್ಯಕ್ಕೂ ಭಾರತದ ಸರ್ಕಾರದ ಸೈನ್ಯಕ್ಕೂ ತಾರತಮ್ಯ ಕಲ್ಪಿಸುವುದು ಯಾವ ನ್ಯಾಯ ಮತ್ತು ಧರ್ಮ! ನಮ್ಮ ಮೈಸೂರು ಸೈನ್ಯದವರು ಕಾಶ್ಮೀರ, ಮಲಯ, ಸಿಂಗಪುರ ಮುಂತಾದ ಕಡೆ ಹೋಗಿ ಹೋರಾಡಿದ್ದಾರೆ ಆ ಹೋರಾಟದಲ್ಲಿ ನೂರಾರು ಜನರು ಜೈಲಿನಲ್ಲಿದ್ದು ಮೂಳೆ ಮುರಿಸಿಕೊಂಡಿದ್ದಾರೆ. ಹೀಗಿರುವಾಗ ಇಂಥವರನ್ನು ಹಿಂದೆ ತಳಿದರೆ ಇವರ ಗತಿ

ಏನು ? ಇದರಿಂದ ಆಗುವ ಪರಿಣಾಮವೇನು ? ಇವರನ್ನು ಸರ್ವಿಸ್ಸಿಗೆ ತೆಗೆದುಕೊಳ್ಳಬೇಕಾಗಿದ್ದರೆ ಯಾವ ಭರವಸೆ ಕೊಟ್ಟಿದ್ದರೋ ಅದು ಈಗ ಬೇರೆಯವರಿಂದ ಹೀಗಾದರೆ ಅದನ್ನು ನೋಡಿಕೊಂಡು ನಮ್ಮ ಸರ್ಕಾರದವರು ಸುಮ್ಮನೆ ಇರುವುದಕ್ಕಾಗುವುದಿಲ್ಲ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಶ್ರಮ ತೆಗೆದುಕೊಂಡಿರುವುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಈ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಬಹಳವಾಗಿ ಶ್ರಮ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತಾ ಅವರು ಈ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇವರಿಗೆ ಸಾಕಷ್ಟು ಸೌಕರ್ಯಗಳನ್ನು ಬೇಗ ಒದಗಿಸಿಕೊಡಬೇಕೆಂದು ಒತ್ತಾಯ ಪಡಿಸುತ್ತೇನೆ. ಸುಮಾರು 2,000ಕ್ಕೆ ಜಾಸ್ತಿ ಜನಗಳಲ್ಲಿ 1,200 ಜನರನ್ನು ಒಂದೇ ದಿವಸದಲ್ಲಿ ಹೊರಗಡೆ ಕಳುಹಿಸಿದರೆ ಅವರ ಗತಿಯೇನು ? ನಾಳೆ ದಿವಸ ದೇಶದಲ್ಲಿ ಇಂದು ಅಧಿಕಾರದಲ್ಲಿರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳ ನೈತಿಕ ಮಟ್ಟ ಏನಾಗಬಹುದು? ಇಂಥಾ ಕಾರ್ಯಾಚರಣೆಗಳಿಂದ ದೇಶದಲ್ಲಿ ಶಾಂತಿ ಕಲಕಿ ಅಸಮಾಧಾನ, ಅಶಾಂತಿ ಎಲ್ಲೆಲ್ಲೂ ತಲೆದೋರಲು ಅವಕಾಶವಾಗುತ್ತದೆ. ಇದನ್ನು ಹೀಗೆಯೇ ಬಿಟ್ಟು ಬಿಟ್ಟರೆ ಖಂಡಿತ ದೇಶದಲ್ಲಿ ಜನರ ಜೀವನದಲ್ಲಿ ಶಾಂತಿ ಕಲಕುವುದು ಖಂಡಿತ. ಆದುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಕೈಗೊಂಡು ಅವರಿಗೆ ಕೊಟ್ಟಿದ್ದ ಸರ್ವಿಸ್ ಸೆಕ್ಯೂರಿಟಿಗಳಿಗನುಸಾರವಾಗಿ ಸಾಧ್ಯವಾದಷ್ಟನ್ನೂ ಮಾಡಿ ಅವರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಈಗ ಸರ್ಕಾರದವರ ಆಡಳಿತದಲ್ಲಿರತಕ್ಕ ಕೈಗಾರಿಕೋದ್ಯಮಗಳನ್ನು ಖಾಸಗಿ ಸಂಸ್ಥೆಗಳವರಿಗೆ ಅಂದರೆ ಯಾರಾರಿಗೋ ಕೊಡಲು ಸನ್ನಾಹಗಳು ನಡೆಯುತ್ತಿವೆಯೆಂಬ ಪ್ರತೀತಿ ಕೇಳಿ ಬರುತ್ತಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ತಾವು ಈ ಬಗ್ಗೆ ಯಾವ ಕಾರ್ಯಾಚರಣೆಯನ್ನೂ ಕೈಕೊಳ್ಳುವ ಮೊದಲು ಈ ವಿಚಾರಗಳಲ್ಲಿ ಈ ಸಭೆಯ ಅನುಮತಿಯನ್ನು ಪಡೆದುಕೊಳ್ಳದೆ ತಾವು ಯಾವುದನ್ನೂ ಮಾಡಬಾರದೆಂದು ತಿಳಿಸುತ್ತೇನೆ. ಈಗಿರತಕ್ಕ ಕಾರ್ಖಾನೆಗಳ ಪೈಕಿ ಕೆಲವು ಸರ್ಕಾರದ ಅಧೀನಕ್ಕೊಳಪಟ್ಟು ಮತ್ತೆ ಕೆಲವು ಸರ್ಕಾರದಿಂದ ದ್ರವ್ಯ ಸಹಾಯವನ್ನೇ ಪಡೆದುಕೊಂಡು ಕೆಲಸ ನಡೆಸುತ್ತಿವೆ. ಆದರೆ ಕೆಲವು ಕುಂದುಕೊರತೆಗಳಿಂದ ಇಲ್ಲವೇ ಕೆಲವು ನ್ಯೂನಾತಿರಿಕ್ತಗಳಿಂದ ಅವು ಹೀನಸ್ಥಿತಿಗೆ ಬಂದಿರಬಹುದು, ಅಷ್ಟಾಗಿದ್ದರೂ ತಾವೀಗ ಅವುಗಳನ್ನು ಬದಲಾಯಿಸಬೇಕಾದ ಪ್ರಮೇಯವಿಲ್ಲ. ಹಾಲಿ ಇರತಕ್ಕ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿದರೆ ಇವು ಮತ್ತೆ ಸುವ್ಯಸ್ಥೆಗೆ ಬಂದೇ ಬರುತ್ತವೆ. ಹೀಗೆ ಮಾಡಲು ಸಾಧ್ಯವಿದೆ. ಆದರೆ ಈ ಕೈಗಾರಿಕೋದ್ಯಮಗಳು ಹೀಗೆ ಇಂದು ಹೀನಸ್ಥಿತಿಗೆ ಬರಲು ಕಾರಣವೇನು, ಅದಕ್ಕಿರುವ ಅಡ್ಡಿ ಅತಂಕಗಳೇನು ಎಂಬುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಸರಿಪಡಿಸಬೇಕೇ ಶಿವಾಯಿ ಯಾವ ಜಾಯಿಂಟ್‌ಸ್ಟಾಕ್ ಕಂಪೆನಿಗಳಿಗೂ ತಾವು ಈ ಕೈಗಾರಿಕೆಗಳನ್ನು ಕೊಡಬಾರದು. ಹಾಗೇನಾದರೂ ತಾವು ಮನಸ್ಸು ಮಾಡುವುದಾಗಿದ್ದರೆ ಮೊದಲು ಈ ಸಭೆಯ ಅನುಮತಿ ಪಡೆಯದೆ ತಾವು ಯಾವ ಕಾರ್ಯಾಚರಣೆಯನ್ನೂ ಕೈಗೊಳ್ಳಬಾರದೆಂದು ಒತ್ತಿ ಹೇಳುತ್ತೇನೆ.

ಇಷ್ಟನ್ನು ಹೇಳಿ ಈ ನಿರ್ಣಯಕ್ಕೆ ಸೂಚಿಸಿರತಕ್ಕ ತಿದ್ದುಪಡಿಯು ಸರ್ವಸಮ್ಮತವಾಗಿರುತ್ತೆಂದು ತಿಳಿಸಿ ನಾನು ಇದನ್ನು ಅನುಮೋದಿಸುತ್ತೇನೆ. ಅಷ್ಟೇ ಅಲ್ಲದೆ ಈ ಬಗ್ಗೆ ಈ ಮಾನ್ಯ ಸದಸ್ಯರೆಲ್ಲರ ಅಭಿಪ್ರಾಯವೂ ಒಂದೇ ಆಗಿರುವುದರಿಂದ ಇದಕ್ಕೆ ಸರ್ವರೂ ಬೆಂಬಲ ನೀಡಬೇಕೆಂದೂ ಮತ್ತು ಇದನ್ನು ಒಪ್ಪಿಕೊಳ್ಳಬೇಕೆಂದೂ ತಮ್ಮೆಲ್ಲರನ್ನೂ ಪ್ರಾರ್ಥಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

* ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಯಾವುದನ್ನೂ ಮರೆಮಾಚದೆ ಇದ್ದುದನ್ನು ಇದ್ದಹಾಗೆಯೇ ಹೇಳಿರತಕ್ಕದ್ದು ಒಂದು ಬಹಳ ದೊಡ್ಡ ಸಂತೋಷದ ಸಂಗತಿ. ನಮ್ಮ ಮೈಸೂರು ದೇಶದಲ್ಲಿ ಇರತಕ್ಕ ಸ್ಥಿತಿಗತಿಗಳು ಇಂದು ನಮ್ಮ ದೇಶವೊಂದರಲ್ಲಿಯೇ ಅಲ್ಲದೆ ಇಡೀ ಪ್ರಪಂಚದಲ್ಲೆಲ್ಲಾ ಹರಡಿಕೊಂಡಿವೆ. ಆದುದರಿಂದಲೇ ಈ ಅನ್ನ ಬಟ್ಟೆಗಳ ಅಭಾವವನ್ನು ಅವರು ಮೊದಲೇ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಮತ್ತು ಈ ಅಭಾವಗಳನ್ನು ನೀಗಲು ಉತ್ಪನ್ನ ಮಾರ್ಗಗಳನ್ನು ಹೆಚ್ಚಿಸತಕ್ಕ ಕಾರ್ಯದಲ್ಲಿ ಎಲ್ಲರೂ ನಿರತರಾಗಲು ಮತ್ತು ಈ ಅಭಾವಗಳನ್ನು ನೀಗಲು ಸಾಧ್ಯವಿಲ್ಲವೇ ಎಂಬುವನ್ನು ಕೂಡಲೆ ಆಲೋಚನೆ ಮಾಡಿ ಕಾರ್ಯೋನ್ಮುಖರಾಗಬೇಕೆಂಬ ಸೂಚನೆಯನ್ನೂ ಸಹ ಕೊಟ್ಟಿದ್ದಾರೆ. ಈ ಅಭಾವಗಳನ್ನು ನೀಗಬೇಕೆಂದು ಇಡೀ ಇಂಡಿಯಾದೇಶದ ನಾನಾ ಸ್ಥಳಗಳಲ್ಲಿ ನಾನಾ ಸಂದರ್ಭಗಳಲ್ಲಿ ಪ್ರತಿಯೊಬ್ಬರೂ ಅಮೋಘವಾದ ಭಾಷಣಗಳನ್ನು ಮಾಡಿ ಹೇಳಿದ್ದಾರೆ. ಆದರೆ ಇಂಥಾ ಅಮೋಘವಾದ ಭಾಷಣಗಳಿಂದ ಪರಿಸ್ಥಿತಿ ಅಷ್ಟು ಉತ್ತಮವಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಈ ಅಭಾವಗಳ ಜೊತೆಗೆ ಈಗ ಹೊರಬಿದ್ದಿರುವ ಜನಗಣತಿಯಲ್ಲಿ 18 ಲಕ್ಷ ಪ್ರಜಾಸಂಖ್ಯೆ ಹೆಚ್ಚಾಗಿದೆಯೆಂದು ತಿಳಿದುಬಂದಿರುತ್ತದೆ. ಹಿಂದೆ 80 ಲಕ್ಷ ಚಿಲ್ಲರೆ ಇದ್ದುದು ಇಂದು ಇಷ್ಟು ಜಾಸ್ತಿಯಾಗಿದೆ. ಇದೇರೀತಿ ಜನಸಂಖ್ಯೆ ಬೆಳೆಯುತ್ತಾಹೋದರೆ ಇನ್ನು 50 ವರ್ಷಗಳಲ್ಲಿ ನಮ್ಮ ದೇಶದ ಜನಸಂಖ್ಯೆ 1 ಕೋಟಿ 60 ಲಕ್ಷವಾಗುತ್ತದೆ. ಹೀಗೆ ಪ್ರಜಾಸಂಖ್ಯೆ ಹೆಚ್ಚಾಗಿರುವುದು ಇಡೀ ಕರ್ಣಾಟಕದಲ್ಲೇ ಅಲ್ಲದೇ ಪ್ರಪಂಚದಲ್ಲೆಲ್ಲಾ ಹೀಗೆ ಆಗಿದೆ. ಇದೂ ಒಂದು ದೊಡ್ಡ ಸಮಸ್ಯೆಯೇ ಹೌದು. ಈ ಸಮಸ್ಯೆಗಳನ್ನೆಲ್ಲಾ ಪರಿಹರಿಸಲು ದೇಶದಲ್ಲಿರತಕ್ಕ ಜನರೆಲ್ಲರ ಕಾಲವೂ, ಅಧಿಕಾರಿಗಳ ಕಾಲವೂ ಮತ್ತು ಮಂತ್ರಿಗಳ ಕಾಲವೂ, ಈ ಆಹಾರ ಸಮಸ್ಯೆಯನ್ನೇ ಹೇಗೆ ಎದುರಿಸಬೇಕೆಂಬ ಬಗ್ಗೆ ಪ್ರತಿಯೊಬ್ಬರೂ ಭಾಷಣಗಳನ್ನು ಮಾಡುತ್ತ ಕಾಲಹರಣ ಮಾಡುತ್ತಿದ್ದಾರೆ. ಈ ಹೆಚ್ಚು ಆಹಾರ ಬೆಳೆಯುವ ಯೋಜನೆಯಬಗ್ಗೆ ಇಡೀ ಭಾರತದಲ್ಲೇ ಬರಿ ಕಾನ್ಫರೆನ್ಸ್, ಕಮಿಟಿ ಇತ್ಯಾದಿಗಳನ್ನು ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂಬುದಾಗಿ ಬರಿ ವಾದಗಳಲ್ಲಿ ಪೂರೈಸಿದೆಯೇ ಹೊರತು ಅದು ಮಾತ್ರ ಪೂರೈಸಲಿಲ್ಲ. ಈ ಸ್ಥಿತಿ ನಮ್ಮ ಮೈಸೂರೊಂದಕ್ಕೆ ಅಲ್ಲದೆ ಇಡಿ ಭಾರತಕ್ಕೇ ಒದಗಿದೆ. ಆದರೆ ಈ ಬಗ್ಗೆ ನಾನೊಂದು ಸಲಹೆ ನೀಡಬೇಕೆಂದಿದ್ದೇನೆ. ಸಾಮಾನ್ಯವಾಗಿ ಈ ನಿಮ್ಮ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆ ಯಶಸ್ವಿಯಾಗಬೇಕಾಗಿದ್ದರೆ ತಾವು ಮೈದಾನಕ್ಕಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಮಲೆನಾಡಿಗೆ ಒದಗಿಸಿದ ಹೊರತು ಇದು ಖಂಡಿತ ಸಾಧ್ಯವಿಲ್ಲ. ಮೈದಾನದಲ್ಲಿ ಕೇವಲ ದುಡ್ಡು ಬರತಕ್ಕಂಥ ಬೆಳೆಗಳನ್ನೇ ಹೆಚ್ಚಾಗಿ ಬೆಳೆಯತೊಡಗಿ ಆಹಾರೋತ್ಪನ್ನದ ಬಗ್ಗೆ ಅಷ್ಟು

---

* Speech not revised by the Hon'ble Member concerned.

(ಎಚ್. ಎಂ. ಮಲ್ಲಿಕಾರ್ಜುನಪ್ಪನವರು.)

ಆಕಾಂಕ್ಷೆಯಿಲ್ಲದಿರುವುದು ಸ್ವಾಭಾವಿಕವಾದ್ದೇ ಆಗಿದೆ. ಹೆಚ್ಚು ಹಣ ಬರುವಂಥ ಬೆಳೆಗಳು ಜನರ ಮನಸ್ಸನ್ನು ಆಕರ್ಷಿಸುವುದು ಸಹಜವಾದ್ದೆಂಬುದರಲ್ಲೇನೂ ಸಂದೇಹವಿಲ್ಲ. ಆದರೆ ಮಲೆನಾಡಿನ ಪರಿಸ್ಥಿತಿ ಹೀಗಿಲ್ಲ. ಬೆಳೆದರೆ ಅವರು ಭತ್ತ ಒಂದನ್ನು ಬೆಳೆಯಬೇಕೇ ಶಿವಾಯಿ ಬೇರೆ ಬೆಳೆಯನ್ನಿಟ್ಟರೂ ಅಲ್ಲಿ ಆಗುವುದೇ ಇಲ್ಲ. ಈ ಅಂಶವನ್ನು ಸರ್ಕಾರದವರು ಚೆನ್ನಾಗಿ, ಕೂಲಂಕಷವಾಗಿ ಪರಿಶೀಲನೆಮಾಡಬೇಕಾಗಿದೆ. ನಾನು ಉದಾಹರಣೆಗಾಗಿ ಈಗ ಹೇಳುವುದಾದರೆ ಲಕ್ಕವಳ್ಳಿಯ ಬಳಿ ಬೆಳೆ ಬೆಳೆಯಬೇಕಾಗಿದ್ದರೆ ಅಲ್ಲಿ ಭತ್ತ ಒಂದಕ್ಕೆ ಅವಕಾಶವಿದೆಯೆ ಶಿವಾಯಿ, ರಾಗಿ, ನೆಲಗಡಲೆ ಅಥವಾ ಕೊತ್ತಂಬರಿ ಇತ್ಯಾದಿಗಳನ್ನು ಬೆಳೆಯಲಿಕ್ಕಾಗುವುದಿಲ್ಲ. ಹೀಗೆ ಮಲೆನಾಡಿನವರಿಗೆ ಇರುವ ಅವಕಾಶವೆಲ್ಲಾ ಬರಿ ಒಂದು ಭತ್ತವನ್ನು ಬೆಳೆಯಲಿಕ್ಕೆ ಮಾತ್ರವಿರುತ್ತೆ. ಒಂದು ಎಕರೆಗೆ ಕೇವಲ ಹೆಚ್ಚೆಂದು ಹೇಳಿದರೆ 20 ಪಲ್ಲಾಕ್ಕಿ ಮೇಲೆ ಭತ್ತ ಆಗುವುದಿಲ್ಲ ಅಂದರೆ 400 ರೂಪಾಯಿಗಳು ಉತ್ಪತ್ತಿ ಬಂದಹಾಗಾಯಿತು. ಆದರೆ ಸ್ವಾಭಾವಿಕವಾಗಿ ಇದಕ್ಕೆ ಖರ್ಚು ಹೆಚ್ಚಾಗಿರುತ್ತದೆ. ಅಲ್ಲದೆ ಕಷ್ಟವೂ ಜಾಸ್ತಿ. ಹೀಗೆ ಭತ್ತ ಬೆಳೆಯುವುದಕ್ಕೆ ಬದಲಾಗಿ ಅದೇ ಒಂದು ಎಕರೆಯಲ್ಲಿ ನೆಲಗಡಲೆಯನ್ನು ಬೆಳೆದರೆ 800 ರೂಪಾಯಿ ಸಿಕ್ಕುತ್ತದೆ; ಕೊತ್ತಂಬರಿ ಬೆಳೆದರೆ 1,000 ರೂಪಾಯಿ ಸಿಕ್ಕುತ್ತೆ. ಆದರೆ ಮಲೆನಾಡಿನ ರೈತಾಪಿ ಜನರಿಗೆ ಈಗಿರುವ ತೊಂದರೆಗಳೇನೆಂದರೆ ಅಲ್ಲಿ ಅವರಿಗೆ ಸಾಕಷ್ಟು ಕೂಲಿಗಾರರು ಸಿಕ್ಕುತ್ತಿಲ್ಲ, ಅಲ್ಲಿರತಕ್ಕ ಜನರಿಗಾದರೋ ಆರೋಗ್ಯಭಾಗ್ಯವಿಲ್ಲ. ಇತ್ತಲಾಗಿ ಎಲ್ಲಾ ಸೌಕರ್ಯಗಳಿರುವ ಮೈದಾನ ಪ್ರಾಂತ್ಯದಲ್ಲಿ ಹೆಚ್ಚು ಆಹಾರ ಬೆಳೆಯಲು ಪ್ರಾಮುಖ್ಯವಾಗಿ ಬೇಕಾದ ನೀರಾವರಿ ಸೌಕರ್ಯಗಳು ಅಷ್ಟಾಗಿರುವುದಿಲ್ಲ. ಆದುದರಿಂದಲೇ ಮೈದಾನದವರು ಹೆಚ್ಚು ಆಹಾರ ಬೆಳೆಯಲು ಸಾಧ್ಯವಾಗಿಲ್ಲ. ಇದರ ಜೊತೆಗೆ ಮೈದಾನ ಪ್ರಾಂತ್ಯಗಳಲ್ಲಿ ಎಲ್ಲೆಲ್ಲಿ ಮಳೆ ಬೆಳೆಗಳ ಅಭಾವ ಜಾಸ್ತಿಯಾಗಿದೆಯೋ ಅಲ್ಲಿರುವ ಜನರು ತಮ್ಮ ಸ್ವಸ್ಥಾನವನ್ನು ಬಿಟ್ಟು ವಿಶೇಷವಾಗಿ ಭದ್ರಾವತಿಯ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕೂಲಿಗಾಗಿ ಬಂದು ಸೇರಿಬಿಟ್ಟಿದ್ದಾರೆ. ಈ ಎಲ್ಲ ಕಾರಣಗಳಿಂದ ನಾನು ಈಗ ಹೇಳಬೇಕಾಗಿರುವುದೇನೆಂದರೆ ಮಲೆನಾಡಿನ ಜನರ ಆರೋಗ್ಯ ಭಾಗ್ಯವನ್ನು ಉತ್ತಮಪಡಿಸಲಿಕ್ಕಲ್ಲದೇ ಹೋದರೂ, ಮೈದಾನದಲ್ಲಿರುವ ಜನರು ಹೊಟ್ಟೆ ಹೊರೆಯಲಿಕ್ಕೆ ಇವರಿಗೆ ಸಲೀಸಾಗಿ ದವಸ ಧಾನ್ಯಗಳನ್ನಾದರೂ ಬೆಳೆದು ಇಲ್ಲಿಗೆ ರವಾನೆ ಮಾಡತಕ್ಕ ಬಗ್ಗೆ, ಇವರೆಲ್ಲರ ಕ್ಷೇಮಕ್ಕಾದರೂ, ಅವರಿಗೆ ಈ ಮೈದಾನದಲ್ಲಿ ಹಂಚುವ ಡಿ. ಡಿ. ಟಿ. ಗಿಂತ ಹೆಚ್ಚಾಗಿ ಮಲೆನಾಡಿಗೆ ಸರಬರಾಯಿ ಮಾಡಿದರೆ ಅದರಿಂದ ಬಹಳ ಅನುಕೂಲವಾಗುತ್ತೆಂಬ ವಿಷಯವನ್ನು ತಮ್ಮಲ್ಲಿ ತಿಳಿಸಬೇಕು ಎಂದು.

ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ಬಹಳ ವಿಷಾದದಿಂದ ಅರಿಕೆ ಮಾಡಿಕೊಳ್ಳಬೇಕೆಂದಿರುವ ಮತ್ತೊಂದಂಶವೇನೆಂದರೆ, ಪಿ. ಡಬ್ಲ್ಯು. ಡಿ. ಯವರು, ನಮ್ಮ ಸರ್ಕಾರದವರು ನಿರೀಕ್ಷಿಸಿರುವ ಮಟ್ಟದಲ್ಲಿ ರೈತರಿಗೆ ನೆರವಾಗುತ್ತಿಲ್ಲವೆಂಬ ಅಂಶ. ಕೇವಲ ಸಣ್ಣ ಸಣ್ಣ ಕೆರೆಗಳು, ಅದರಲ್ಲೂ 50—100 ಎಕರೆ ಸಾಗುವಳಿಯಾಗತಕ್ಕಂಥ ಕೆರೆಗಳು, ಕೇವಲ 5,000 ರೂಪಾಯಿಗಳ ವೆಚ್ಚದಲ್ಲಿ ರಿಪೇರಿಯಾಗತಕ್ಕಂಥ ಸಣ್ಣ ಕೆರೆಗಳ ಬಗ್ಗೆ ಜಾಗ್ರತೆಯಾಗಿ ಕಾರ್ಯಕ್ರಮವನ್ನು ಕೈಗೊಂಡು ಕೆಲಸಮಾಡಬೇಕೆಂದು ಇಲಾಖೆಯಲ್ಲಿರುವ ಸಬ್-ಓವರ್ಸಿಯರ್ ಮೊದಲುಗೊಂಡು ಎಗ್ಜಿಕ್ಯುಟೀವ್ ಇಂಜಿನಿಯರವರವರೆಗೆ ಎಷ್ಟೋಸಾರ್ತಿ ಹೇಳಿದ್ದಾಯಿತು. ಆದರೆ ನಾವು ಹೇಳಿದಾಗ ನಮ್ಮ ಮುಂದೆ ಆಗಲಿ, ಮಾಡುತ್ತೇವೆಂದು ಹೇಳಿ, ನಾವು ಅಲ್ಲಿಂದ ಹೊರಟು ಬಂದಕೂಡಲೇ ರೈತರುಗಳ ಸಮಕ್ಷಮದಲ್ಲಿ "ಹಾಗೆ, ಅಷ್ಟು ಸುಲಭವಾಗಿ ನಾವು ಕೆಲಸ ಮಾಡಲಿಕ್ಕಾಗುವುದಿಲ್ಲ, ನಾವು ಹೀಗೇ ಹೇಳುತ್ತೇವೆ, ನಮ್ಮನ್ನು ಇವರೇನು ಮಾಡಬಲ್ಲರು, ಡಿಸ್‌ಮಿಸ್ ಮಾಡಿಸುತ್ತಾರೇನು, ನೋಡಿಕೊಳ್ಳುತ್ತೇವೆ' ಎಂದು ಹೇಳುತ್ತಿದ್ದಾರೆ. ಇಂಥಾ ಅಧಿಕಾರಿಗಳನ್ನೆಲ್ಲಾ ಮೊದಲು ಡಿಸ್‌ಮಿಸ್ ಮಾಡಿ, ಯಾರು ಶ್ರದ್ಧೆಯಿಂದ ಮತ್ತು ಉತ್ಸಾಹದಿಂದ ಕೆಲಸ ನಡೆಸುತ್ತಾರೋ ಅವರಿಗೆ ಬಡ್ತಿ ಮತ್ತು ಪ್ರಮೋಷನ್ ಇತ್ಯಾದಿಗಳನ್ನು ಕೊಟ್ಟು ಕೆಲಸ ಜಾಗ್ರತೆ ನೆರವೇರುವಂತೆ ಮಾಡದಿದ್ದರೆ ಬಹಳ ಅನಾನುಕೂಲವಾಗುತ್ತದೆ. ಆದರೆ ತಾವು ಈ ನ್ಯೂನಾತಿರಿಕ್ತಗಳನ್ನೆಲ್ಲಾ ಸರಿಪಡಿಸದೆ ಕೇವಲ ಇರಿಗೇಷನ್ ಆಕ್ಟೊಂದನ್ನು ತಿದ್ದುಪಡಿಮಾಡಿದ ಮಾತ್ರಕ್ಕೇ ಹೆಚ್ಚು ಬೆಳೆ ಬೆಳೆದಂತಾಯಿತೇ? ಇಂಜನಿಯರಿಂಗ್ ಇಲಾಖೆಯವರು ಬಹು ದೊಡ್ಡದಾಗಿ ಹೀಗೆ ನಿಧಾನವಾಗಲಿಕ್ಕೆ ಕಾರಣವೇನೆಂದು ಕೇಳಿದರೆ ರೈತರು ಸರ್ಕಾರಕ್ಕೆ ಮುಚ್ಚಳಿಕೆ ಬರೆದುಕೊಟ್ಟಿಲ್ಲ ಆದ್ದರಿಂದ ಇಷ್ಟೆಲ್ಲಾ ಸಾವಕಾಶವಾಯಿತೆಂದು ಹಗುರವಾಗಿ ತಿಳಿಸಿಬಿಡುತ್ತಾರೆ. ಆದರೆ ರೈತರ್ಯಾರೂ ಈ ಮುಚ್ಚಳಿಕೆಯನ್ನು ಬರೆದುಕೊಡಲು ಹಿಂದುಮುಂದು ನೋಡುತ್ತಿಲ್ಲ. 6 ಜನ ಓವರ್‌ಸೀಯರಿರತಕ್ಕ ಕಡೆ ಒಂದು ವರ್ಷಕ್ಕೆ ಒಬ್ಬೊಬ್ಬರು ಎರಡೆರಡು ಕೆರೆಗಳಂತೆ ಜೀರ್ಣೋದ್ಧಾರ ಕಾರ್ಯ ಮಾಡಿದರೂ ವರ್ಷಕ್ಕೆ 144 ಕೆರೆಗಳನ್ನು ಜೀರ್ಣೋದ್ಧಾರ ಮಾಡಿದಂತಾಗುತ್ತದೆ. ಈ ಬಗ್ಗೆ ಆಗತಕ್ಕ ಹಣದ ಖರ್ಚನ್ನು ನಿರ್ವಹಿಸಲು ಸರ್ಕಾರವಿದೆ; ರೈತರಿದ್ದಾರೆ. ಆ ಹಣದ ಗೋಜು ಇವರಿಗೇಕೆ ಬೇಕು? ಹೀಗೆ ಕಾನೂನು ರೀತ್ಯಾ ವರ್ಷಕ್ಕೆ 144 ಕೆರೆಗಳನ್ನು ಮಾಡಿಸದೆ ಇದ್ದರೂ ಚಿಂತೆಯಿಲ್ಲ, ಇದರಲ್ಲಿ ಶೇಕಡ 75ರಷ್ಟು ಅಥವಾ ಕಡೆಪಕ್ಷ 60ರಷ್ಟಕ್ಕಾದರೂ ಅಂದಾಜು ತಯಾರಿಸಿ ಕೆಲಸ ನಡೆಯುವಂತೆ ಮಾಡತಕ್ಕದ್ದು ಬಹಳ ಮುಖ್ಯವಾದ ವಿಚಾರ. ಇದೊಂದು ಆಗಿಬಿಟ್ಟರೆ ಇನ್ನುಳಿದ ಮುಚ್ಚಳಿಕೆ ವಿಚಾರ ತಾನೇ ತಾನಾಗಿ ಆಗಿಬಿಡುತ್ತದೆ. ಅಥವಾ ಅವರು ಹಾಗೆ ಬರೆದುಕೊಡುತ್ತಾರೋ, ಬಿಡುತ್ತಾರೋ ಅದು ಬೇರೆ ವಿಷಯ. ಹೀಗೆ ಈಗ ಬಹಳ ದಿನಗಳಿಂದಲೂ ರಿಪೇರಿಯಾಗದೆ ನಿಂತಿರುವ ಕೆರೆಗಳ ರಿಪೇರಿಯನ್ನು ಮೊದಲು ಮಾಡಬೇಕೆಂದು ಸೂಚಿಸುತ್ತೇನೆ.

ಮಾನ್ಯ ಮಂತ್ರಿಗಳು ಸಂಚಾರ ಹೋದಾಗ ಎಷ್ಟು ಅಂದಾಜುಗಳನ್ನು ಮಾಡಿದ್ದಾರೆ, ಎಷ್ಟು ಇನ್ನೂ ಆಗಿರುವುದಿಲ್ಲ ಎಂದು ಏಕೆ ಪ್ರಶ್ನೆ ಮಾಡಬಾರದಾಗಿತ್ತು? ಅಂದಾಜು ಮಾಡಬೇಕೆಂದು ಜನರು ಹೇಳಿದರೆ ಅವರ ಮೇಲೆ ಅಧಿಕಾರಿಗಳು ತಿರುಗಿ ಬೀಳುತ್ತಾರೆ. ಮಲೆನಾಡಿನಲ್ಲೆಲ್ಲಾ ನೀರಾವರಿ ಚೆನ್ನಾಗಿದೆಯೆಂದು ನಾನು ನಂಬುವುದಿಲ್ಲ. ಎಲ್ಲಿ ನೀರಾವರಿ ಚೆನ್ನಾಗಿದೆಯೋ, ಎಲ್ಲಿ ಕೆರೆಗಳು ಚೆನ್ನಾಗಿವೆಯೋ ಅಲ್ಲಿ ಯಾವ ಜಮೀನೂ ಪಾಳು ಬಿದ್ದಿಲ್ಲ. ಕೆರೆಗಳು ಜೀರ್ಣೋದ್ಧಾರವಾಗಿಲ್ಲದಿರುವ ಕಡೆ ಮಾತ್ರ ತರಿ ಬೆಳೆ ಮಾಡುವುದಕ್ಕೆ ಸಾಧ್ಯವಿಲ್ಲ. ಅನೇಕ ಕೆರೆಗಳು ದುರಸ್ತಿಯಾಗದೆ ತೊಂದರೆಯಾಗಿದೆ. ಆ ಬಗ್ಗೆ ಅಂದಾಜು ಮಾಡುವುದಕ್ಕೂ ಬಹಳ ಸಾವಕಾಶವಾಗುತ್ತಿದೆ. ಮೂರು ನಾಲ್ಕು ದಿವಸಗಳಿಗಿಂತ ಹೆಚ್ಚು ಕಾಲ ಅಂದಾಜು ತಯಾರಿಸಲು ಬೇಕಿಲ್ಲದಿರುವಾಗ ಏಕೆ ಅದನ್ನು ತಯಾರಿಸಲು ನಿಧಾನಮಾಡಬೇಕು? ಅಂದಾಜಾದರೆ ಒಂದು ತಿಂಗಳಲ್ಲೇ ಕೆಲಸವನ್ನು ಮಾಡಬಹುದು. ಆದರೆ ಅಂದಾಜು ಬೇಗ ಮಾಡುತ್ತಿಲ್ಲ. ಒಂದು ತಿಂಗಳಲ್ಲಿ 50 ಎಕರೆಯನ್ನು

ವ್ಯವಸಾಯ ಮಾಡಿ ಒಂದು ಸಾವಿರ ಪಲ್ಲ ಬತ್ತ ಬೆಳೆಯಬಹುದು. ಆದ್ದರಿಂದ ಅಂದಾಜು ಬೇಗ ಬೇಗ ತಯಾರಾಗುವಂತೆ ಏರ್ಪಾಡುಮಾಡಬೇಕು. ಇನ್ನು ಮುಂದೆ ಕೃತಕವಾದ ಅಕ್ಕಿ, ರಾಗಿ ತಯಾರಿಸುತ್ತೇವೆಂದು ಒಬ್ಬ ಮಹನೀಯರು ಹೇಳಿದರು. ಆದರೆ ಅದು ಬೇಕಾಗಿಲ್ಲ. ಕೆರೆಗಳ ಜೀರ್ಣೋದ್ಧಾರ ಮಾಡಿದರೆ ಜಾಗ್ರತೆ ಬೇಕಾದಷ್ಟು ಬತ್ತ ಬೆಳೆಯಬಹುದು. ಈಗ ಒಂದು ತಿಂಗಳಲ್ಲಾಗುವ ಕೆಲಸವು ಬಹಳ ನಿಧಾನವಾಗುತ್ತಿರುವುದಕ್ಕೆ ಕಾರಣ ಗೊತ್ತಿಲ್ಲ. 3–4 ಸಾವಿರ ರೂಪಾಯಿನ ಕೆಲಸಗಳು ಕೂಡ ಬೇಗ ಆಗುತ್ತಿಲ್ಲ. ತರೀಕೆರೆ ತಾಲ್ಲೂಕಿನಲ್ಲಿ ಒಂದು ಅಂದಾಜು 15 ಸಾವಿರ ರೂಪಾಯಿಗಳಿಗೆ ತಯಾರಾಗಿದೆ. ನಾಲ್ಕು ವರ್ಷದ ಹಿಂದೆಯೇ ಅಲ್ಲಿನ ಜಮೀನಿಗೆ ಜನರು ದರಖಾಸ್ತು ಕೊಟ್ಟಿದ್ದಾರೆ. ಅಲ್ಲಿ ಕೆರೆ ಕಟ್ಟುವುದು ಮಂಜೂರಾಗಿ ಜಮೀನು ಮಾರಾಟ ಮಾಡಿದರೆ ಈ ದಿವಸ 5 ಲಕ್ಷ ರೂಪಾಯಿಗಳು ಬರುತ್ತದೆ. ಇಷ್ಟು ವರ್ಷದಲ್ಲಿ ಕೆರೆ ಕಟ್ಟುತ್ತೇವೆಂದು ಹೇಳಿದ ಕೂಡಲೇ ಅಲ್ಲಿರುವ ನಾಲ್ಕು ಸಾವಿರ ಎಕರೆಗಳು ಮಾರಾಟವಾಗುತ್ತವೆ. ಹಾಗೆ ಮಾಡಿದರೆ ಬೇಕಾದಷ್ಟು ಹಣ ಬರುವುದರಿಂದ ಸರ್ಕಾರಕ್ಕೂ ಅನುಕೂಲ ಮತ್ತು ಜನರಿಗೂ ಅನುಕೂಲ.

ಇನ್ನೊಂದು ವಿಚಾರ. ಆಹಾರ ಪದಾರ್ಥಗಳನ್ನು ಬಿಟ್ಟು ಇತರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುತ್ತಾರೆಂದು ಹೇಳುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಬತ್ತ ಮತ್ತು ರಾಗಿಗಳಿಗಿಂತ ಹೆಚ್ಚು ಬೆಲೆ ಅದರಲ್ಲಿ ಬರುವುದೇ ಅದಕ್ಕೆ ಕಾರಣ. ಆ ಬೆಳೆ ಬೆಳೆಯುವುದಕ್ಕೆ ಕಂದಾಯವನ್ನು ಸಹ ಹೆಚ್ಚಿಸಿಲ್ಲ. ಆದ್ದರಿಂದ ಕಂದಾಯವನ್ನು ಅಂಥ ಪ್ರದೇಶಗಳಿಗೆ ಸ್ವಲ್ಪ ಹೆಚ್ಚಿಸಿದರೆ ಅನುಕೂಲ. ಎಲ್ಲಿ ಹೆಚ್ಚು ಬೆಲೆ ಬರುವ ಪದಾರ್ಥಗಳನ್ನು ಮತ್ತು ಆಹಾರ ಪದಾರ್ಥಗಳಿಗಿಂತ ಹೆಚ್ಚು ಉತ್ಪತ್ತಿ ಬರುವ ಪದಾರ್ಥಗಳನ್ನು ಬೆಳೆಯುತ್ತಾರೋ ಅಲ್ಲಿ ಕಂದಾಯ ಹೆಚ್ಚು ಮಾಡುವುದರಿಂದ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಎಲ್ಲಿಯವರೆಗೆ ಆಹಾರಪದಾರ್ಥಗಳನ್ನು ಬೆಳೆಯುವುದರಿಂದ ಹೆಚ್ಚು ಆದಾಯ ಬರುವುದಿಲ್ಲವೋ ಅಲ್ಲಿಯವರೆಗೆ ಅವುಗಳನ್ನು ಹೆಚ್ಚಾಗಿ ಬೆಳೆಯುವುದಿಲ್ಲ. ಆದ್ದರಿಂದ ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಈಗ ಪಾಳು ಜಮೀನನ್ನು ಸಾಗುಮಾಡುವುದಕ್ಕೆ ಒಂದು ಮಸೂದೆಯನ್ನು ತರುವುದರಿಂದ ಅಷ್ಟು ಅನುಕೂಲವಾಗುವುದಿಲ್ಲ. ಕೆಲವು ಕಡೆ ಜಮೀನು ಸಾಗುಮಾಡಲು ಸಾಕಾದಷ್ಟು ಜನರು ಸಿಕ್ಕುವುದಿಲ್ಲ. ಆದ್ದರಿಂದ ನೀರಾವರಿ ಅನುಕೂಲವಿರುವ ಕಡೆ ಮತ್ತು ಜನರು ಸಿಕ್ಕುವ ಕಡೆ ಬಂಜರು ಜಮೀನು ಸಾಗುಮಾಡಲು ಕಾರ್ಯಕ್ರಮ ಕೈಕೊಂಡರೆ ಬಹಳ ಒಳ್ಳೆಯದು. ನೀರಾವರಿಯ ಅನುಕೂಲಗಳನ್ನು ಹೆಚ್ಚಿಸುವುದರಿಂದಲೇ ಅಧಿಕ ಬೆಳೆಗೆ ಅನುಕೂಲವೆಂದು ಅನೇಕ ಸಾರಿ ನಾನು ಒತ್ತಿ ಒತ್ತಿ ಹೇಳಿದ್ದೇನೆ. ನೀರಾವರಿ ಅನುಕೂಲವಿರುವ ಒಂದು ಎಕರೆ ಜಮೀನಿಗೆ ಹತ್ತು ಎಕರೆ ಖುಷ್ಕಿ ಸಮನಾಗುತ್ತದೆ. ಖುಷ್ಕಿ ಬೆಳೆಗಿಂತ ಐದರಷ್ಟು ಹೆಚ್ಚು ಬೆಲೆ ತರಿ ಬೆಳೆಯಿಂದ ಬರುತ್ತದೆ. ಆದ್ದರಿಂದ ಸರ್ಕಾರದವರು ಆದಷ್ಟು ನೀರಾವರಿಯನ್ನು ಹೆಚ್ಚಿಸಲು ಪ್ರಯತ್ನಪಡಬೇಕು. ಅಂದಾಜು ಮಾಡಿ ಎಂದು ನಾವು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಏಕೆ ಅಂದಾಜು ಮಾಡಿರುವುದಿಲ್ಲ, ಅರ್ಜಿಗಳು ಬರಲು ಕಾರಣವೇನು ಎಂದು ವಿಚಾರ ಮಾಡಿ ಜಾಗ್ರತೆ ಕೆಲಸ ನಡೆಯುವಂತೆ ತಿಳಿವಳಿಕೆ ಕೊಡುವುದು ಒಳ್ಳೆಯದು. ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ವಿಶದೀಕರಿಸಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರೆ ಮಲೆನಾಡಿನ ಜನರು ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಎಲ್ಲಿ ಜಮೀನಿದೆಯೋ ಅಲ್ಲಿ ಅವರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕು ಎಂದು ಹೇಳಿದ್ದರೆ ಚೆನ್ನಾಗಿತ್ತು. ಶಿವಮೊಗ್ಗ ಜಿಲ್ಲೆಯೊಂದರಿಂದಲೇ ಈ ವರ್ಷ 7-8 ಲಕ್ಷ ಪಲ್ಲ ದವಸ ಬರುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. 7 ಲಕ್ಷ ಅಲ್ಲ ಇಡೀ ಸಂಸ್ಥಾನದ ಆಹಾರದ ಅಭಾವವನ್ನು ನೀಗಿಸಬೇಕಾದರೆ ಮಲೆನಾಡಿನ ಹಳ್ಳಿಗಳಿಂದಲೇ ಸಾಧ್ಯ. ಬಾಕಿ ಕಡೆಯಿಂದ ಸಾಧ್ಯವಿಲ್ಲ. ಈಗ ಜಮೀನಿನ ಅಭಾವ ಎಷ್ಟೋ ಇದೆ. ಅನೇಕ ಹಳ್ಳಿಗಳಲ್ಲಿ ಈಗಿರುವ ಜಮೀನು ವಾಸಕ್ಕೇ ಸಾಲದಾಗಿದೆ. ಮನೆ ಕಟ್ಟುವುದಕ್ಕೆ ಅನೇಕ ಜಮೀನುಗಳು ಅಕ್ವೈರ್ ಆಗುತ್ತಿವೆ. ಆದ್ದರಿಂದ ಮಲೆನಾಡನ್ನು ಎಲ್ಲಿಯವರೆಗೆ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನಿಸುವುದಿಲ್ಲವೋ ಅಲ್ಲಿಯವರೆಗೆ ಏನೂ ಪ್ರಯೋಜನವಾಗುವುದಿಲ್ಲ. ಇದು ಸ್ವಾಭಾವಿಕವಾದ ವಿಷಯ. ನಮ್ಮ ತಾಲ್ಲೂಕಿನಲ್ಲಿ ಹತ್ತು ಅಂಗುಲದಿಂದ 200 ಅಂಗುಲದವರೆಗೂ ಮಳೆ ಬರುವ ಜಾಗಗಳಿವೆ. ಅಲ್ಲಿ ಎಲ್ಲಾ ಬೆಳೆಗೂ ಅನುಕೂಲವಿದೆ. ಆದ್ದರಿಂದ ಮಲೆನಾಡಿನವರಿಗೆ ರಸ್ತೆ, ಸೇತುವೆ, ವಿದ್ಯಾಭ್ಯಾಸ, ಆರೋಗ್ಯ ಮುಂತಾದುವುಗಳಿಗೆ ಅನುಕೂಲ ಮಾಡಿಕೊಡಬೇಕು ; ಅವರು ಸಂಸ್ಥಾನಕ್ಕೆ ಅಧಿಕ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಒತ್ತಾಯಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಅಧ್ಯಕ್ಷರೇ, ಶ್ರೀಮನ್ಮಹಾರಾಜರವರ ಭಾಷಣಕ್ಕೆ ವಂದನೆಗಳನ್ನು ಸಮರ್ಪಿಸುವ ಸಲುವಾಗಿ ನಾನು ಸೂಚಿಸಿರತಕ್ಕ ನಿರ್ಣಯಕ್ಕೆ ಬಹಳವಾಗಿ ಸರ್ವಸಮ್ಮತವಾದಂಥ ಅನುಮೋದನೆ ದೊರೆತಿರುವುದರಿಂದ ನನಗೆ ಸಂತೋಷವಾಗುತ್ತಿದೆ. ಸಾಮಾನ್ಯವಾಗಿ ನನ್ನ ಸೂಚನೆಯ ಮೇಲೆ ಯಾರೂ ವಿರೋಧಾಭಿಪ್ರಾಯವನ್ನು ತಿಳಿಸಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದೆಂದು ಸಹ ನಾನು ಭಾವಿಸಿದ್ದೇನೆ. ಎದುರು ಪಕ್ಷದ ನಾಯಕರಾದ ಮತ್ತು ಮಾನ್ಯ ಮಿತ್ರರಾದ ಜನಾಬ್ ಇಮಾಂರವರು ಸೂಚಿಸಿರತಕ್ಕಂಥ ತಿದ್ದುಪಡಿಯಲ್ಲೂ ಸಹ ಒಪ್ಪಿಕೊಳ್ಳಬಹುದಾದಂಥ ಅಥವಾ ನ್ಯಾಯವಾಗಿ ಕಾಣುವಂಥ ಅಂಶಗಳು ಯಾವುವೂ ಇರುವಂತೆ ತೋರಿಬರಲಿಲ್ಲ. ಮುಖ್ಯವಾಗಿ ದೇಶದಲ್ಲಿ ಆಹಾರದ ಅಭಾವವಿದೆಯೆಂದು ಅವರು ಹೇಳಿದ್ದಾರೆ. ಜನಗಳಿಗೆ ಪಡಿತರ ಕೊಡುವ ಪ್ರಮಾಣ ಕಡಮೆಯಾಗಿದೆಯೆಂದೂ ಹೇಳಿದ್ದಾರೆ. ಅದು ನಮ್ಮ ಸರ್ಕಾರದವರೇ ಸ್ವತಂತ್ರಿಸಿ ಮಾಡಿರುವಂಥ ಏರ್ಪಾಡಲ್ಲ ಎಂಬುದನ್ನು ಜನಾಬ್ ಇಮಾಂರವರು ಬಲ್ಲರು.

ಇಂಡಿಯಾದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಕೇಂದ್ರ ಸರ್ಕಾರದವರು ಯಾವ ರೀತಿ ಪಡಿತರ ಪ್ರಮಾಣ ಇರಬೇಕೆಂದು ನಿರ್ಧಾರಮಾಡಿದ್ದಾರೋ ಅದಕ್ಕನುಸಾರವಾಗಿ ನಮ್ಮ ಸರ್ಕಾರದವರೂ ಸಹ ಆ ಪ್ರಮಾಣವನ್ನೇ ಗೊತ್ತುಮಾಡಬೇಕಾಗಿ ಬಂತು ಎನ್ನುವುದು ಜನಾಬ್ ಇಮಾಂರವರಿಗೆ ಗೊತ್ತಿದೆ. ಇನ್ನು ಈ ದವಸಧಾನ್ಯದ ಬೆಲೆ ಹೆಚ್ಚಿಸಿ ಒಂದು ರೂಪಾಯಿಗೆ ಬರುತ್ತಿದ್ದ ದವಸದ ಪ್ರಮಾಣ ಕಡಿಮೆಮಾಡಿದ್ದೀರಿ ಎಂಬ ಆಕ್ಷೇಪಣೆ. ಅದರ ಜವಾಬ್ದಾರಿ ಈ ಸಭೆಗೆ ಸೇರಿದ್ದು ಎಂಬುದನ್ನು ಜನಾಬ್ ಇಮಾಂರವರಿಗೆ ಸೂಚಿಸಬೇಕಾಗಿದೆ. ಹೋದ ಅಧಿವೇಶನದ ಕಡೆಯ ದಿನ ಚರ್ಚೆಮಾಡಿದಾಗ ಸಾಮಾನ್ಯವಾಗಿ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಜನಗಳಿಗೆ ಒದಗಿಸತಕ್ಕ ದವಸದ ಬಗ್ಗೆ ಸರ್ಕಾರದವರು ಹೆಚ್ಚು

(ಎಚ್. ಕೆ. ವೀರಣ್ಣಗೌಡರು.)

ನಷ್ಟ ಹೊರಬಾರದು, ಅಸಲಿಗಾದರೂ ಮಾರತಕ್ಕ ಪ್ರಯತ್ನಮಾಡಬೇಕು. ಆ ರೀತಿ ಹೋರಾಟಮಾಡುವ ವ್ಯವಸ್ಥೆ ಮಾಡುವುದು ಸೂಕ್ತ ಎಂದು ಹೇಳಿದ್ದರಿಂದ ಸರ್ಕಾರದವರು ಆ ಕಾರ್ಯಕ್ರಮ ಕೈಗೊಂಡರು ಎಂಬುದನ್ನು ಜನಾಬ್ ಇಮಾಂರವರು ತಿಳಿದುಕೊಳ್ಳಬೇಕು. ಆದ್ದರಿಂದ ಅವರು ಸೂಚಿಸಿರತಕ್ಕ ತಿದ್ದುಪಡಿಯಲ್ಲಿ ಒಪ್ಪಿಕೊಳ್ಳಬಹುದಾದಂಥ ಅಂಶ ಏನೂ ಇಲ್ಲ. ಅವರು ಹೂಡಿರುವ ವಾದ ನ್ಯಾಯವಾಗಿದೆ ಎಂದು ಹೇಳಬಹುದಾದ ಅಂಶವೂ ಇಲ್ಲ. ಇನ್ನೂ ಒಂದು ವಿಷಯ ಅವರು ಹೇಳಿದ್ದಾರೆ. ಹತೋಟಿ ಆಜ್ಞೆ ಯಾರಿಗೂ ಬೇಕಾಗಿಲ್ಲ ಎಂಬುದು ಅವರ ವಾದ. ಸರ್ಕಾರದವರೂ ಸಹ ಅದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಆದರೆ ಈ ಕೂಡಲೇ ತೆಗೆಯುವುದು ಸಾಧುವಲ್ಲ, ಎಲ್ಲಾ ದೃಷ್ಟಿಯಿಂದಲೂ ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಹತೋಟಿ ಆಜ್ಞೆಯನ್ನು ಸಡಿಲಮಾಡಬೇಕೆಂಬ ಅಭಿಪ್ರಾಯವನ್ನು ಈ ಸಭೆಯ ಸದಸ್ಯರು ಕಳೆದ ಅಧಿವೇಶನದಲ್ಲಿ ಸರ್ಕಾರದವರಿಗೆ ಸೂಚಿಸಿದ್ದರು. ಸರ್ಕಾರದವರು ಅದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಮಾನ್ಯ ಸದಸ್ಯರಾದ ಜನಾಬ್ ಇಮಾಂರವರು ಸೂಚಿಸಿರತಕ್ಕ ತಿದ್ದುಪಡಿಯಲ್ಲಿ ತಿರುಳೇನೂ ಇಲ್ಲವೆಂದು ಹೇಳಬೇಕಾಗಿದೆ. ಈ ಕಾರಣದಿಂದ ಅವರ ತಿದ್ದುಪಡಿಯನ್ನು ಅಂಗೀಕರಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ವಿಷಾದದಿಂದ ತಿಳಿಸಬೇಕಾಗಿದೆ. ನನ್ನ ನಿರ್ಣಯದ ಮೇಲೆ ಮಾತನಾಡುತ್ತಾ ಅನೇಕ ಮಾನ್ಯ ಸ್ನೇಹಿತರು ಯಾವ ಭಿನ್ನಾಭಿಪ್ರಾಯವನ್ನೂ ತೋರಿಸಲಿಲ್ಲವೆಂದು ಮೊದಲೇ ಹೇಳಿದ್ದೇನೆ. ಆದರೂ ಒಬ್ಬಿಬ್ಬರು ಸ್ನೇಹಿತರು ನಾನು ಹೇಳಿದ ಕೆಲವು ಮಾತುಗಳಿಗೆ ತಪ್ಪು ಅರ್ಥ ಮಾಡಿಕೊಂಡು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆ ಒಂದೆರಡು ವಿಚಾರಗಳಿಗೆ ಮಾತ್ರ ಒಂದೆರಡು ವಾಕ್ಯಗಳಲ್ಲಿ ಉತ್ತರಹೇಳಬೇಕೆಂದು ಅಪೇಕ್ಷಿಸುತ್ತೇನೆ. ಮೊದಲನೆಯದಾಗಿ ಶ್ರೀ ಮಾದಯ್ಯಗೌಡರು ಒಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅದು ನಮ್ಮ ದೇಶದ ಆಹಾರ ಅಭಾವದ ಸ್ಥಿತಿಯಲ್ಲಿ ಜನಸಂಖ್ಯೆ ಬೆಳೆಯುವುದು ಸೂಕ್ತವೇ, ಅದನ್ನು ತಡೆಗಟ್ಟುವುದು ಅಗತ್ಯವಲ್ಲವೇ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಇದು ಸಂತಾನನಿರೋಧದ ಪ್ರಶ್ನೆ. ಬಹಳ ಚರ್ಚಾಸ್ಪದವಾದದ್ದು. ನನ್ನಂತಹವನು ಹಾಗೆ ವಾದಿಸಿದರೆ ಅಭಾವ ವೈರಾಗ್ಯವಾಗಿ ಕಾಣಬಹುದು. ಮಾನ್ಯಮಿತ್ರರಾದ ಶ್ರೀ ರಂಗರಾಮಯ್ಯನವರು, ಶ್ರೀ ಮಾದಯ್ಯಗೌಡರು, ಶ್ರೀ ಬಂದೀಗೌಡರು ಮುಂತಾದವರು ಅದೇ ಮಾತು ಹೇಳಿದರೆ ಪ್ರಸೂತವೈರಾಗ್ಯದಂತೆ ಕಾಣಬಹುದು. ಆದರೆ ಒಂದು ಅಂಶವನ್ನು ಅವರು ಯೋಚನೆಮಾಡಬೇಕು. ಶ್ರೀ ಜೋಯಿಸ್‌ರವರು ಒಂದು ವಿಧವಾದ ಉತ್ತರ ಕೊಟ್ಟಿದ್ದಾರೆ. ನಮ್ಮಲ್ಲಿ 'ಮಕ್ಕಳು ಹುಟ್ಟಿದರೆ ಕೇಡೆ, ಮಳೆ ಹೊಯ್ದರೆ ಕೇಡೆ'' ಎಂಬ ಒಂದು ಗಾದೆ ಇದೆ. ನಾವು ಯೋಚನೆಮಾಡಬೇಕಾದ್ದು ಇಷ್ಟೆ. ಆಹಾರ ಅಭಾವವೇನೋ ಎದ್ದು ಕಾಣುತ್ತಾ ಇದೆ. ಆದ್ದರಿಂದ ಸಂತಾನನಿರೋಧ ಕೈಕೊಂಡು ಜನಸಂಖ್ಯೆ ಕಡಿಮೆಮಾಡಬೇಕೇ ಅಥವಾ ದೇವರು ಕೊಡುವ ಮಕ್ಕಳಿಗೆ ಅವರು ಹುಟ್ಟಿದಹಾಗೆಲ್ಲಾ ಅನ್ನ ಕಾಣಿಸುವ ಪ್ರಯತ್ನಮಾಡಬೇಕೇ ಎಂಬುದನ್ನು ಯೋಚನೆಮಾಡಬೇಕು. ಹಾಸಿಗೆ ಇದ್ದಷ್ಟು ಕಾಲು ಚಾಚುವುದು ಒಂದು ರೀತಿ. ಆದರೆ ಹಾಸಿಗೆಗಿಂತ ಕಾಲು ಉದ್ದವಾದರೆ ಆ ಹಾಸಿಗೆಯನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ಶರೀರಕ್ಕೆ ಹಿತವಲ್ಲ ಎಂಬುದನ್ನು ಮನಗಾಣಬೇಕು. ಈ ದೃಷ್ಟಿಯಿಂದ ಶ್ರೀ ಮಾದಯ್ಯಗೌಡರು ಸೂಚಿಸಿರುವ ಸಂತಾನನಿರೋಧ ವಿಚಾರ ಚರ್ಚಾಸ್ಪದವಾದ ಅಂಶವೆಂದು ಹೇಳುತ್ತೇನೆ. ನನ್ನ ಅಭಿಪ್ರಾಯ ಪ್ರಜಾಸಂಖ್ಯೆ ನಿರ್ದಿಷ್ಟಮಾಡಿಕೊಳ್ಳುವುದಕ್ಕೆ ಬದಲಾಗಿ ಪ್ರಜಾಸಂಖ್ಯೆ ಹೆಚ್ಚಿದಹಾಗೆಲ್ಲಾ ದವಸಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನಮಾಡತಕ್ಕದ್ದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು.

ಇನ್ನೊಂದು ಅಂಶವನ್ನು ಶ್ರೀ ಮಾದಯ್ಯಗೌಡರು ಹೇಳಿದರು. ಬುಲ್‌ಡೋಜರುಗಳು ಮತ್ತು ಟ್ರಾಕ್ಟರುಗಳನ್ನು ಉಪಯೋಗಿಸತಕ್ಕ ವಿಚಾರದಲ್ಲಿ ನಾನು ಹೇಳಿದುದನ್ನು ಅವರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದು ಕಾಣುತ್ತದೆ. ಬುಲ್‌ಡೋಜರುಗಳನ್ನು ಉಳುಮೆ ಕೆಲಸಕ್ಕೆ ಉಪಯೋಗಿಸುವುದಿಲ್ಲ. 30 ಲಕ್ಷ ಎಕರೆ ಸಾಗುವಳಿಗೆ ಯೋಗ್ಯವಾದ ಸರ್ಕಾರಿ ಜಮೀನು ಪಾಳುಬಿದ್ದಿದೆ. ಅದನ್ನು ಈ ದಿನ ಸಾಗುವಳಿಗೆ ಸಿದ್ಧಮಾಡಬೇಕು. ಆ ಕಾರ್ಯವನ್ನು ಜನಗಳು ಮಾಡಬಹುದು. ಆದರೆ ಜನರು ವ್ಯವಸಾಯದಲ್ಲಿ ಅಷ್ಟು ಉತ್ಸಾಹಶಾಲಿಗಳಾಗಿಲ್ಲ. ಕಷ್ಟಪಟ್ಟು ಕೆಲಸಮಾಡುವುದಕ್ಕಿಂತಲೂ ಇಂದಿನ ಜನ ಹಿಂಜರಿಯುತ್ತಿದ್ದಾರೆ. ಬೆವರು ಸುರಿಸುವುದಕ್ಕೆ ಅವರು ಸಿದ್ಧರಾಗಿಲ್ಲ. ಒಂದು ಕಾಡು ಕಡಿದು ಬಯಲುಮಾಡಬೇಕೆಂದರೆ, ಅಥವಾ ಹಳ್ಳತಿಟ್ಟಾಗಿರುವ ಭೂಮಿಯನ್ನು ಮಟ್ಟಮಾಡಬೇಕಾದರೆ ಜನಗಳು ಎಷ್ಟು ಕಾಲದಲ್ಲಿ ಮಾಡಬಹುದೋ ಅದಕ್ಕಿಂತ ಕಡಿಮೆ ಕಾಲದಲ್ಲಿ ಕಷ್ಟವಿಲ್ಲದೆ ಯಂತ್ರೋಪಕರಣದಿಂದ ಮಾಡುವುದಕ್ಕೆ ಸಾಧ್ಯ. ಅಂಥಾ ಜಮೀನುಗಳನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿಕೊಟ್ಟು ಆ ಮೇಲೆ ನೀರಾವರೀ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಹೆಚ್ಚು ಭಾಗ ಜಮೀನು ಸಾಗುವಳಿಗೆ ಬರಲು ಅವಕಾಶವಾಗುತ್ತದೆ. ಆದ್ದರಿಂದ ಅಂಥ ಕೆಲಸಗಳಿಗೆ ಬುಲ್‌ಡೋಜರುಗಳನ್ನು ಉಪಯೋಗಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಮಾನ್ಯ ಶ್ರೀ ಮಾದಯ್ಯಗೌಡರಿಗೆ ಆ ವಿಚಾರ ಗೊತ್ತಿದೆ. ಅವರ ತಾಲ್ಲೂಕಿನಲ್ಲಿ ಜಯನಗರ, ವಿಜಯನಗರ ಎಂಬ ಕಾಲೋನಿಗಳನ್ನು ಮಾಡಿದಾಗ 600 ಎಕರೆ ಸರ್ಕಾರಿ ಜಮೀನನ್ನು ಬುಲ್‌ಡೋಜರುಗಳ ಸಾಗುವಳಿಗೆ ಅನುಕೂಲಮಾಡಿಕೊಟ್ಟರು. ಅದನ್ನು ಜನಗಳಿಂದ ಮಾಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಮೊದಲು ಬುಲ್‌ಡೋಜರುಗಳಿಂದ ಕೆಲಸಮಾಡಿಸಿ ಸಿದ್ಧಮಾಡಿಕೊಟ್ಟರೆ ನಂತರ ಜನಗಳು ನೇಗಿಲು ಮುಂತಾದುವುಗಳಿಂದ ವ್ಯವಸಾಯಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಬುಲ್‌ಡೋಜರುಗಳ ಅಗತ್ಯ ಇದೆ. ಇವುಗಳನ್ನು ಹೆಚ್ಚುಹೆಚ್ಚಾಗಿ ಒದಗಿಸಿಕೊಡಬೇಕು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಬುಲ್‌ಡೋಜರುಗಳ ಸಹಾಯದಿಂದ ಹೆಚ್ಚು ತರೀ ಜಮೀನನ್ನು ಸಾಗುವಳಿಗೆ ತರಲು ಸಾಧ್ಯವಿದೆ. ಹೀಗೆ ಅವಶ್ಯಕತೆಯಿರುವ ಕಡೆ ಬುಲ್‌ಡೋಜರುಗಳ ಸೌಕರ್ಯ ಹೆಚ್ಚಿಸಿಕೊಡಬೇಕು. ಟ್ರಾಕ್ಟರ್ ವಿಚಾರ ಹೇಳಿದರು. ನಮ್ಮ ದೇಶದ ರೈತರಿಗೆ 1–1½ ಎಕರೆಗೆ ಮೇಲ್ಪಟ್ಟು ಜಮೀನಿಲ್ಲ. ಅವರಿಗೆ ಟ್ರಾಕ್ಟರುಗಳ ಅಗತ್ಯವಿಲ್ಲವೆಂದು ಶ್ರೀ ಮಾದಯ್ಯಗೌಡರು ಅಭಿಪ್ರಾಯಪಟ್ಟರು. ಟ್ರಾಕ್ಟರುಗಳನ್ನು ಉಪಯೋಗಿಸಲು ಕೆಲವು ಕಡೆ ಅನುಕೂಲವಿದೆ. ಕೆಲವು ಕಡೆ ಅನುಕೂಲವಿಲ್ಲ. ಒಂದೊಂದು ಎಕರೆ ಅಥವ 5–6 ಎಕರೆ ಇರುವ ಕಡೆ ಮನಸ್ಸುಮಾಡಿದರೆ ಟ್ರಾಕ್ಟರುಗಳ ಉಪಯೋಗ ಹೊಂದಲು ಸಾಧ್ಯ. ಅದಕ್ಕೆ ಸಹಕಾರ ಮನೋಭಾವ ಬೆಳೆಸಿಕೊಳ್ಳಬೇಕು. ಖುಷ್ಕಿ ಜಮೀನಿರುವ ಕಡೆ ಅನೇಕ ರೈತರು ಸೇರಿ 50–100 ಎಕರೆ ಜಮೀನು ಸಾಗುವಳಿಗೆ ಟ್ರಾಕ್ಟರನ್ನು ಉಪಯೋಗಿ-

ಮಾಡಿಕೊಳ್ಳುವುದು ಒಳ್ಳೆಯದು. ಇದಕ್ಕೆಲ್ಲಾ ಜನರ ಮನೋಭಾವ ಬದಲಾವಣೆಯಾಗಬೇಕು.

ಶ್ರೀಯುತ ಜೋಯಿಸರು ಅವರ ವಾದಸರಣಿಯಲ್ಲಿ ಹತೋಟಿ ಯಾರಿಗೂ ಬೇಕಾಗಿಲ್ಲ ಎಂದು ಹೇಳಿದರು. ಇದರಿಂದ ಅನೇಕ ತೊಂದರೆ ಇದೆ. ಹೋದ ಅಧಿವೇಶನದಲ್ಲಿ ಈ ವಿಷಯ ವಿಫಲವಾಗಿ ಚರ್ಚೆಯಾಗಿದೆ. ದನಗಳ ಹಿತರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಈ ಸಭೆಯ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರ್ಕಾರದವರು ಮನಗಂಡಿದ್ದಾರೆ. ಹತೋಟಿ ಆಜ್ಞೆ ಇರುವುದರಿಂದ ತೊಂದರೆಯಿಲ್ಲವೆಂದು ಯಾರೂ ಭಾವಿಸಿರುವುದಿಲ್ಲ. ಹತೋಟಿ ಇಲ್ಲದಿದ್ದರೆ ಆಗ ಏನಾಗುತ್ತಿತ್ತೆಂದರೆ ಈಗ ರೂಪಾಯಿಗೆ 2 ಸೇರು ಸಿಕ್ಕುತ್ತಿರುವುದು 2 ರೂಪಾಯಿಗೆ ಒಂದು ಸೇರು ಸಹ ಸಿಕ್ಕುತ್ತಿರಲಿಲ್ಲ, ಅನ್ನದ ಅಭಾವದಿಂದ ಅನೇಕ ಜನ ಸಾಯುತ್ತಿದ್ದರು. ಈಗ ಒಂದು ಹೊತ್ತಿಗಾದರೂ ಸಿಕ್ಕುತ್ತಿದೆ, ಆಗ 4 ದಿನವಾದರೂ ಒಂದು ಹೊತ್ತಿಗೆ ಸಿಕ್ಕದೆಇರುವ ಪರಿಸ್ಥಿತಿ ಉಂಟಾಗುತ್ತಿತ್ತು. ಅದಕ್ಕೋಸ್ಕರ ಹತೋಟಿ ಆಜ್ಞೆಗಳನ್ನು ಸರ್ಕಾರದವರು ಮುಂದುವರಿಸಿ ಕೊಂಡು ಬರಬೇಕಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಮನಗಾಣಬೇಕು.

ಇನ್ನು ಶ್ರೀ ಚನ್ನಬಸಪ್ಪನವರು ಹೇಳಿದ ಒಂದು ಮಾತು. ಅವರು ನಮ್ಮ ದೇಶದಲ್ಲಿರುವ ಈ ಆಹಾರದ ಅಭಾವ ಸರ್ಕಾರದವರಿಂದ ಉಂಟಾಗಿದೆಯೆಂಬ ಧೋರಣೆಯಲ್ಲಿ ಹೇಳಿದರು. ಅದನ್ನು ನಾನು ಒಪ್ಪಲಾರೆ. ಏಕೆಂದರೆ ಅಕ್ಕಿಯ ಅಭಾವ ಮೈಸೂರು ಸಂಸ್ಥಾನದಲ್ಲಿ ಮೊದಲಿನಿಂದಲೂ ಇದೆ. ಸರ್ಕಾರದವರು ಮಾಡದಿರುವ ಕಾರ್ಯಗಳಿಂದೇನೂ ಅದು ಬಂದುದಲ್ಲವೆಂದು ಶ್ರೀ ಚೆನ್ನಬಸಪ್ಪನವರೂ ಬಲ್ಲರು, ಮತ್ತು ಎಲ್ಲರೂ ಬಲ್ಲರು. ನಮ್ಮ ದೇಶದಲ್ಲಿ ಆಹಾರಾಭಾವವಿದೆಯೆಂಬುದು ಶ್ರೀಮನ್ಮಹಾರಾಜರವರ ಭಾಷಣದಿಂದಲೇ ಹೊರಪಟ್ಟಿದೆ. ಈ ಅಭಾವ ಇಂಡಿಯಾ ದೇಶದಲ್ಲೇ ಅಲ್ಲ, ಪ್ರಪಂಚದ ಅನೇಕ ದೇಶಗಳಲ್ಲಿ ಉಂಟಾಗಿದೆ. ಪ್ರಪಂಚದಲ್ಲಿನ ಪರಿಸ್ಥಿತಿಯ ಪರಿಣಾಮ ಇಲ್ಲಿಯೂ ಉಂಟಾಗಿದೆಯೇ ಹೊರತು ನಮ್ಮ ಸರ್ಕಾರದವರ ಲೋಪದೋಷಗಳಿಂದಲೇ ಈ ಅಭಾವ ಉಂಟಾದ್ದಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅಂದ ಮಾತ್ರಕ್ಕೇ ಸರ್ಕಾರದವರು ಮಾಡಬೇಕಾದ್ದೆಲ್ಲವನ್ನೂ ಮಾಡಿದ್ದಾರೆ. ಇನ್ನೇನು ಕೈಕಟ್ಟಿ ಕುಳಿತುಕೊಳ್ಳಬಹುದೆಂದು ನಾನು ಹೇಳುವುದಿಲ್ಲ. ಅವರೂ ಮಾಡಬೇಕಾದ್ದನ್ನೆಲ್ಲಾ ಮಾಡಿದ್ದರೂ ನಿರೀಕ್ಷಣೆ ಮಾಡಿದಷ್ಟು ಫಲ ದೊರೆಯಲಿಲ್ಲವೆಂದು ಹೇಳಬಹುದು. ಆದರೂ ಅವರೇನೂ ಕಾರ್ಯವಿಮುಖರಾಗಿಲ್ಲವೆಂದು ಧಾರಾಳವಾಗಿ ಹೇಳುತ್ತೇನೆ. ಫಲ ದೊರೆಯಲಿಲ್ಲವೆಂದ ಮಾತ್ರಕ್ಕೇ ಸರ್ಕಾರದಲ್ಲಿ ಕಾರ್ಯದಕ್ಷತೆಯಿಲ್ಲವೆಂದಾಗಲೀ, ಅವರ ಕಾರ್ಯ ಲೋಪದಿಂದ ಕೂಡಿದೆಯೆಂದಾಗಲೀ ಹೇಳುವುದು ಸಾಧುವಲ್ಲ. ಆದರೂ ಒಟ್ಟಿನಲ್ಲಿ ಸರ್ಕಾರದವರು ಇನ್ನೂ ಹೆಚ್ಚಿಗೆ ಪ್ರಯತ್ನಮಾಡಬೇಕೆಂದು ನಾನೂ ಶ್ರೀ ಚನ್ನಬಸಪ್ಪನವರ ಸಂಗಡ ಸೇರಿ ಹೇಳಲಿಚ್ಛಿಸುತ್ತೇನೆ.

ಕೊನೆಯದಾಗಿ, ಒಂದು ಸಂತೋಷವೇನೆಂದರೆ, ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಏನೊಂದು ಕಳವಳ ಹೊರಪಟ್ಟಿದೆಯೋ ಅದನ್ನು ಎದುರು ಪಕ್ಷದ ನಾಯಕರಾದಿಯಾಗಿ ಎಲ್ಲ ಸದಸ್ಯರೂ ಬಹಳ ಒತ್ತಾಯಪೂರ್ವಕವಾಗಿ ಹೆಚ್ಚಿನ ಗಮನಕೊಟ್ಟು ಚರ್ಚೆಮಾಡಿದ್ದಾರೆ. ಮೈಸೂರು ಸೈನ್ಯಕ್ಕೆ ಸೇರಿದ್ದ ಅನೇಕ ಅಧಿಕಾರಿಗಳನ್ನೂ ಸೈನಿಕರನ್ನೂ ಇಂಡಿಯಾ ಸರ್ಕಾರದವರು ತೆಗೆದು ಹಾಕಿರುವ ವಿಚಾರದಲ್ಲಿ ಸಾಮಾನ್ಯವಾಗಿ ಮಾತನಾಡಿರುವ ಸದಸ್ಯರೆಲ್ಲರೂ ಎಷ್ಟೋ ಅಂಶಗಳನ್ನು ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರ ಗಮನಕ್ಕೆ ತರಬಹುದೆಂದು ಹೇಳಿದ್ದಾರೆ. ಈ ಚರ್ಚೆಯ ಫಲಿತಾಂಶವಾಗಿ ಯಾವ ಸೈನಿಕರು ಒಮ್ಮೆ ನೆಮ್ಮದಿ ಬಾಳು ನಡೆಸುತ್ತಿದ್ದು ಇಂದು ದಾರಿಯಲ್ಲಿ ಬಿಕಾರಿಗಳಾಗಿ ತಿರುಗುತ್ತಿದ್ದಾರೋ ಅವರಿಗೆ ಸ್ವಲ್ಪವಾದರೂ ಅನುಕೂಲವಾಗುವಂತಾದರೆ ಸಾಕು ಈ ಚರ್ಚೆ ಸಾರ್ಥಕವಾಯಿತೆಂದು ಭಾವಿಸುತ್ತೇನೆ. ಇಂಡಿಯಾ ಸರ್ಕಾರದವರೂ ಈ ಸಭಾ ಸದಸ್ಯರ ಅಭಿಪ್ರಾಯವನ್ನೂ ಹಾಗೂ ಶ್ರೀಮನ್ಮಹಾರಾಜರವರ ಅಭಿಪ್ರಾಯವನ್ನೂ ಗಣನೆಗೆ ತೆಗೆದುಕೊಂಡು ನಮ್ಮ ಸೈನ್ಯದ ಅಧಿಕಾರಿಗಳಿಗೆ ಮತ್ತು ಸೈನಿಕರಿಗೆ ಆಗಿರತಕ್ಕ ಅನ್ಯಾಯವನ್ನು ತಪ್ಪಿಸುತ್ತಾರೆಂದು ನಾನು ಆಶಿಸುತ್ತೇನೆ.

ನನ್ನ ನಿರ್ಣಯದ ಮೇಲೆ ಬಂದಿರುವ ತಿದ್ದುಪಡಿಯಲ್ಲಿ ಹುರುಳೇನೂ ಇಲ್ಲವೆಂದು ಹೇಳಿದಾಗ ನಮ್ಮ ಎದುರು ಪಕ್ಷದ ನಾಯಕರು ಇಲ್ಲಿರಲಿಲ್ಲವೆಂದು ವಿಷಾದಿಸುತ್ತೇನೆ. ನಾನು ಅವರು ಹೇಳಿದ ಮಾತುಗಳಿಗೆಲ್ಲಾ ನಾನು ಉತ್ತರ ಕೊಟ್ಟಿದ್ದೇನೆ. ಅವರಾದರೂ ಎತ್ತಿದ್ದ ಆಕ್ಷೇಪಣೆಗಳೂ ಕೂಡ ಸರ್ವೇಸಾಮಾನ್ಯವಾಗಿ ಎಲ್ಲರೂ ಹೇಳುವ ಅಭಿಪ್ರಾಯವೇ ಹೊರತು ಹೆಚ್ಚಿನ ಅಂಶಗಳಿಂದೇನೂ ಕೂಡಿಲ್ಲ. ಆದ್ದರಿಂದ ಅವರು ತಮ್ಮ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡು ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ವೀರಣ್ಣಗೌಡರು ಸಭೆಯ ಮುಂದಿಟ್ಟಿರತಕ್ಕ ನಿರ್ಣಯವನ್ನು ನಿನ್ನೆ ವಿಪುಲವಾಗಿ ಈ ಸಭೆಯ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ದಿವಸ ಜನಾಬ್ ಇಮಾಂರವರ ತಿದ್ದುಪಡಿಯ ಮೇಲೂ ವಿಪುಲವಾದ ಚರ್ಚೆ ನಡೆದಿದೆ. ಸಾಮಾನ್ಯವಾಗಿ ಶ್ರೀ ವೀರಣ್ಣಗೌಡರು ತಮ್ಮ ಮುಕ್ತಾಯ ಭಾಷಣದಲ್ಲಿ ಈ ಸಭೆಯಲ್ಲಿ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಟ್ಟಿದ್ದಾರೆ. ಆ ಉತ್ತರಗಳನ್ನೇ ನಾನೂ ಪುನಃ ಹೇಳುವುದಕ್ಕೆ ಬದಲಾಗಿ ಸ್ಥೂಲವಾಗಿರತಕ್ಕ ಕೆಲವು ಅಂಶಗಳಿಗೆ ಮಾತ್ರ ಜವಾಬು ಕೊಡಬಯಸುತ್ತೇನೆ.

ಜನಾಬ್ ಇಮಾಂರವರು ತಮ್ಮ ತಿದ್ದುಪಡಿಯಲ್ಲಿ ಸ್ವಲ್ಪ ಮಟ್ಟಿಗೆ ವಿರೋಧಾಭಾಸವಿರುವ ರೀತಿಯಲ್ಲೇ ತಿದ್ದುಪಡಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಮೊದಲು ಪ್ರಸ್ತಾಪಿಸುತ್ತೇನೆ. ಹತೋಟಿ ಆಜ್ಞೆಗಳನ್ನು ತೆಗೆದರೆ ಜೀವನದಲ್ಲಿ ಉಂಟಾಗಿರುವ ಉಬ್ಬರ ನಿಂತು ಹೋಗುತ್ತದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಅವರು ಯಾವ ಭಾವನೆಯಿಂದ ಹೀಗೆ ಹೇಳಿದ್ದಾರೋ ನನಗಂತೂ ಅರ್ಥವಾಗಿಲ್ಲ. ಹತೋಟಿ ಆಜ್ಞೆಗಳು ಸಡಿಲವಾದರೆ ದೇಶದಲ್ಲಿ ಅಭಾವವಿದೆಯೆಂದು ಸ್ಪಷ್ಟವಾಗಿರುವಾಗ ಸ್ವಾಭಾವಿಕವಾಗಿ ಬೆಲೆಗಳು ಏರುವುದು ಖಂಡಿತ. ಅದರ ಪರಿಣಾಮವಾಗಿ ಇನ್ನೂ ಉಬ್ಬರ ಜಾಸ್ತಿಯಾಗುತ್ತದೆ.

Janab J. MOHAMED IMAM.—On a point of explanation. They are two independend issues No steps have been taken so far to relax the control measures and bring down the inflation. I said that steps ought to have been taken to relax control measures and also to bring down the inflation.

The Hon'ble Sri T. MARIAPPA.—The very idea that inflation has to be brought down implies control. Certain check is to be exercised over the spiral of prices and in consequence inflation has to be kept under check.

Janab J. MOHAMED IMAM.—Other steps also must be taken. I did not mention them for want of time.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶ್ರೀಮನ್ಮಹಾರಾಜರವರು ದೇಶದಲ್ಲಿ ಏನು ಪರಿಸ್ಥಿತಿಯಿದೆ ಯೆಂಬುದನ್ನು ಖಡಾಖಂಡಿತವಾಗಿ ಹೇಳಿದ್ದಾರೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಪ್ರಪಂಚದ ಸ್ಥಿತಿ ಏನು, ಭಾರತದ ಸ್ಥಿತಿ ಏನು, ಅದರ ಪರಿಣಾಮ ಮೈಸೂರು ದೇಶದಲ್ಲಿ ಏನು ಉಂಟಾಗಿದೆಯೆಂದು ಅವರು ಖಚಿತವಾಗಿ ಹೇಳಿದ್ದಾರೆ. ನಮ್ಮ ದುರದೃಷ್ಟವಶಾತ್ ಭಾರತದ ಅನೇಕ ಕಡೆಗಳಲ್ಲಿ ಈ ವರ್ಷ ಭೂಕಂಪ, ಅತಿವೃಷ್ಟಿ—ಅನಾವೃಷ್ಟಿಗಳು ತಲೆದೋರಿ, ಪೈರುಪಚ್ಚೆಗಳು ನಾಶವಾಗಿ, ಈ ದಿವಸ ಎಲ್ಲರೂ ಕಷ್ಟಪಡಬೇಕಾಗಿ ಬಂದಿದೆ. ಇದರಿಂದ ಒಂದಂಶ ಎದ್ದು ಕಾಣುತ್ತದೆ. ಮನುಷ್ಯಪ್ರಯತ್ನವೇನೇ ಇರಲಿ, ನೀರಾವರಿ ಕಾಮಗಾರಿಗಳು ಎಷ್ಟೇ ಜಾಸ್ತಿಯಾಗಲೀ, ಬಾಕಿ ಕ್ಷೇತ್ರದಲ್ಲಿ ಎಷ್ಟೇ ದುಡಿಯಲಿ, ನೈಸರ್ಗಿಕ ಅನಾಹುತಗಳು ಮನುಷ್ಯನ ಪ್ರಯತ್ನಗಳನ್ನು ವಿಫಲಗೊಳಿಸಬಹುದೆಂಬುದಕ್ಕೆ ಇದೊಂದು ಉದಾಹರಣೆ. ಕಳೆದ ವರ್ಷ ದೇಶದಲ್ಲಿ ಉಂಟಾದ ಒಂದು ವೈಪರೀತ್ಯದ ದೆಸೆಯಿಂದ ಈ ಆಹಾರಾಭಾವದ ಬಿಸಿ ಇನ್ನೂ ಹೆಚ್ಚಿಗೆ ನಮಗೆ ತಟ್ಟಿದೆ. ಆದ್ದರಿಂದ ಈ ಆಹಾರದ ಹತೋಟಿ ಆಜ್ಞೆಗಳು ಇರಬೇಕೇ ಇಲ್ಲವೇ ಎನ್ನುವ ಪ್ರಶ್ನೆಯನ್ನು ನಾವು ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡಿನೋಡುವುದು ಅವಶ್ಯಕ. ನಿಜ; ಹತೋಟಿ ಆಜ್ಞೆಗಳು ಯಾರಿಗೂ ಪ್ರಿಯವಲ್ಲ. ಈ ಅಂಶವನ್ನು ಶ್ರೀ ವೀರಣ್ಣಗೌಡರು ಬಹಳ ಚೆನ್ನಾಗಿ ವಿವರಿಸಿ ಹೇಳಿದ್ದಾರೆ. ಇದು ನಮ್ಮ ಮೈಸೂರು ದೇಶಕ್ಕೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲ. ಇಡೀ ಭಾರತಕ್ಕೆ ಸಂಬಂಧಿಸಿದ್ದು. ಭಾರತ ದೇಶ ವಿಭಾಗವಾದಮೇಲೆ ಬಹಳಮಟ್ಟಿಗೆ ಹೆಚ್ಚಿಗೆ ಆಹಾರ ಬೆಳೆಯುವ ಪ್ರಾಂತಗಳೇ ಬೇರೆ ದೇಶಕ್ಕೆ ಹೊರಟುಹೋದುವು. ಇದರಿಂದಲೇ ನಮಗೆ ಹೆಚ್ಚಿನ ಅಭಾವಕ್ಕೆ ಕಾರಣವಾಯಿತು. ಜನಾಬ್ ಇಮಾಂರವರು ಹೇಳಿದರು, 1942-43 ರಲ್ಲಿ ಯುದ್ಧ ನಡೆಯುತ್ತಿದ್ದು, ಎಷ್ಟೋ ಹೊರದೇಶದ ಮಿಲಿಟರಿ ಸೈನಿಕರಿದ್ದರೂ ಇಷ್ಟೊಂದು ಕಷ್ಟ ತಲೆದೋರಲಿಲ್ಲವೆಂದು ಹೇಳಿದರು. ಅವರು ಹೇಳಿದ್ದು ವಾಸ್ತವ. ಬೇರೆ ದೇಶಗಳಿಂದ ಸರಾಗವಾಗಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಬೇಕಾದಷ್ಟು ಧಾನ್ಯ ಬರುತ್ತಿದ್ದಾಗ ಅಷ್ಟೊಂದು ಬಿಸಿ ತಟ್ಟಿರಲಿಲ್ಲ. ಅದೇ ಬರ್ಮ ಯಾವಾಗ ಜಪಾನೀಯರ ಕೈಸೇರಿತೋ ಆಗಲೇ ನಮಗದರ ಬಿಸಿ ತಟ್ಟಲು ಪ್ರಾರಂಭವಾಯಿತು. ಜನಾಬ್ ಇಮಾಂರವರ ಕಾಲದಲ್ಲೇ ಹತೋಟಿ ಆಜ್ಞೆ ಮೊದಲು ಬಂದುದು. ಅದನ್ನೆಲ್ಲಾ ಅವರೀಗ ಮರೆತಿರುವಂತೆ ಕಾಣುತ್ತೆ. ಈಗ ಆರು ತಿಂಗಳ ಕೆಳಗೆ ಆದುದನ್ನೂ ಕೂಡ ಅವರು ಮರೆತಿರಬಹುದು. ಹಾಗೆ ಮರೆಯುವುದೂ ಒಳ್ಳೆಯದೇ. ಇಲ್ಲದಿದ್ದರೆ ಜೀವನದಲ್ಲಿ ನಿರಾಶೆ ಮೂಡುತ್ತದೆ. 1942-43 ರಲ್ಲಿ ಏನು ನಡೆಯುತ್ತಿತ್ತು, ಈಗೇನು ಮಾಡಿದ್ದೇವೆಂಬುದನ್ನು ಅವರೇ ನೋಡಲಿ. ಎಷ್ಟು ಕೆರೆಗಳನ್ನು ರಿಪೇರಿ ಮಾಡಿದರೂ ಸಕಾಲಕ್ಕೆ ಮಳೆ ಬಾರದೆ ಹೋದರೆ ಏನು ಮಾಡುವುದು? ಈ ಸಾರಿ ತಮಗೆ ಗೊತ್ತಿರುವ ಹಾಗೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಳೆ ಬರದೆ ಒಂದು ಕೆರೆಯೂ ತುಂಬಲಿಲ್ಲ. ರಾಮಸಾಗರದಂಥ ಮಹಾ ಕೆರೆಯನ್ನು ಇಂದು ನೋಡಿದರೆ ಕಣ್ಣಲ್ಲಿ ನೀರು ಬರುತ್ತೆ. ದನ ಕುಡಿಯುವುದಕ್ಕೂ ಒಂದು ತೊಟ್ಟು ನೀರಿಲ್ಲ. ಹೀಗೆ ಕೆರೆಗಳು ತುಂಬದೆ ಹೋದರೆ ಆ ವಿಸ್ತೀರ್ಣವನ್ನು H. S. ಲೆಕ್ಕದಲ್ಲಿ ಹಾಕುವುದಕ್ಕಾಗುವುದಿಲ್ಲ. ಹೀಗಾಗಿ ವಿಸ್ತೀರ್ಣ ಕಡಿಮೆಯಾಗುತ್ತೆ. ಆದ್ದರಿಂದ ಯಾರೂ ಸುಮ್ಮನೆ ಜಮೀನು ಪಾಳುಬಿಟ್ಟಿದ್ದಾರೆಂದು ಭಾವಿಸಕೂಡದು. ನೀರು ಸರಿಯಾಗಿ ಇದ್ದರೆ ಖಂಡಿತವಾಗಿಯೂ ರೈತರು ಪಾಳು ಬಿಡುವುದಿಲ್ಲ. ಏಕೆಂದರೆ ಇರ್ವಿನ್ ನಾಲಾ ಪ್ರದೇಶವನ್ನೇ ನೋಡಿ. ಕನ್ನಂಬಾಡಿ ಕಟ್ಟೆ ಒಣಗಿ ಹೋದರೆ ಅಲ್ಲೇನು ಬೆಳೆ ಬೆಳೆಯುತ್ತೆ. 1949 ನೆಯ ಇಸವಿಯಲ್ಲಿ ಕಾರು ಪೈರನ್ನೂ ಕೂಡ ಮಾಡಿದಂಥ ಕಡೆ ಈ ಸಾರಿ ಏನು ಮಾಡುವುದಕ್ಕೂ ಧೈರ್ಯವಿಲ್ಲ. ನಮಗೇನು ದುರದೃಷ್ಟವೋ ಕಾಣೆ!! ಕಾವೇರಿ ನದಿಯಲ್ಲಿ ಈಚೀಚೆಗೆ ಬರುವ ನೀರೇ ಕಡಮೆಯಾಗಿಬಿಟ್ಟಿದೆ. ಈಗೇನಿದ್ದರೂ ಕಪಿಲಾ ಹೇಮಾವತಿ ನದಿಗಳಿಂದ ಮಾತ್ರ ನೀರ ಬರುತ್ತದೆ, ಅಷ್ಟೆ.

ನೀರು ಎಷ್ಟು ಒದಗಬಹುದೆಂಬುದನ್ನು ನೋಡಿಕೊಂಡು ಹೋದಸಾರಿ 60 ಸಾವಿರ ಎಕರೆಗೆ ಬತ್ತ ಹಾಕಿದುದನ್ನು ಈ ಸಾರಿ 76 ಸಾವಿರ ಎಕರೆಗೆ ಹಾಕಿದ್ದಾಯಿತು. ಎಲ್ಲೆಲ್ಲಿ ಕೆರೆಗಳ ರಿಪೇರಿ ಮಾಡಬಹುದೋ ಅಲ್ಲಿ ರಿಪೇರಿ ಮಾಡಿದರೆ, ಎಲ್ಲಿ ಕೆರೆಯ ಅನುಕೂಲವಿಲ್ಲವೋ ಅಲ್ಲಿ ಕೆರೆ ಕಟ್ಟಿದರೆ, ರೈತರು ಬೆಳೆಯುತ್ತಾರೆ. ಅಲ್ಲದೆ ಮಲೆನಾಡಿನಲ್ಲಿ ಮಲೇರಿಯಾ ನಿವಾರಣೆ ಕಾರ್ಯಕ್ರಮ ಕೈಕೊಂಡು, ಗ್ರಾಮಾಂತರ ರಸ್ತೆಗಳ ಅನುಕೂಲ ಮಾಡಿಕೊಟ್ಟರೆ ಬೆಳೆಯುತ್ತಾರೆ. ಉದಾಹರಣೆಗೆ ಸಾಗರದ ಪ್ರದೇಶದಲ್ಲಿ ಮೊದಲು ಮಲೇರಿಯಾ ಹಾವಳಿ ಹೆಚ್ಚಾಗಿತ್ತು. ಈಚೆಗೆ ಅಲ್ಲಿ World Health Organization ಪ್ರಾರಂಭವಾಡಿದ ಮೇಲೆ ಅಲ್ಲಿ ಬೆಳೆ ಹೆಚ್ಚಾಗಿದೆಯೆಂದು ಅಲ್ಲಿಯ ಪ್ರತಿನಿಧಿಗಳೇ ಹೇಳಿದ್ದಾರೆ. ಹಾಗೆ ರೈತರಿಗೆ ಸೌಲಭ್ಯ ಹೆಚ್ಚಿದರೆ ಹೆಚ್ಚು ಬೆಳೆಯುತ್ತಾರೆ. ಜನಾಬ್ ಇಮಾಂರವರು ಹೇಳಿದ್ದರಲ್ಲಿ ವಿರೋಧಾಭಾಸವಿತ್ತು. ಅವರು ನಣ್ಣ ಕಾಮಗಾರಿಗಳನ್ನು ಮಾಡುತ್ತಿದ್ದೀರಿ, ಭಾರಿ ಕಾಮಗಾರಿಗಳಿಗೆ ಹೆಚ್ಚಿನ ಗಮನ ಕೊಡುತ್ತಿಲ್ಲವೆಂದು ಹೇಳಿದರು. ಹೀಗೆ ಹೇಳುವಾಗ ಈಗ ನಮಗೆ ಎಷ್ಟುಮಟ್ಟಿನ ಹಣದ ಸೌಲಭ್ಯವಿದೆ, ಎಷ್ಟು ಕೆಲಸ ಮಾಡಿದ್ದೇವೆ ಎಂಬುದನ್ನೆಲ್ಲಾ ಅವರು ಮನಸ್ಸಿನಲ್ಲಿಟ್ಟುಕೊಂಡು ಯೋಚನೆ ಮಾಡಿದ್ದರೆ ಸರಿಯಾಗುತ್ತಿತ್ತು. ವಿಧಿಯಿಲ್ಲದೆ ಕೈಕೊಳ್ಳಬೇಕಾದ short term projects ಗಾಗಿ ಹೆಚ್ಚು ಹಣವನ್ನು ವಿನಿಯೋಗಿಸಿದ್ದೇವೆ. ಆಮೇಲೆ ನಮ್ಮಲ್ಲಿರುವ ಹಣವನ್ನು ನೋಡಿಕೊಂಡು ಅತ್ಯಾವಶ್ಯಕವಾದ ನುಗು ಮುಂತಾದ ಪ್ರಾಮುಖ್ಯವಾದ ಎರಡು ಮೂರು ದೊಡ್ಡ ಜಲಾಶಯಗಳಿಗಾಗಿ ಒಂದು ಕೋಟಿ ರೂಪಾಯಿ ಒದಗಿಸಿದ್ದೇವೆ. ಈಗಿನ ಜನಸಂಖ್ಯೆಯನ್ನು ನೋಡಿ ನಮಗೆ ಬಹಳ ಹೆದರಿಕೆಯಾಗಿದೆ. ನಮ್ಮ ಸಂಸ್ಥಾನದ ಜನಸಂಖ್ಯೆ 80 ಲಕ್ಷ ಎಂಬ ಆಧಾರದ ಮೇಲೆ ನಮ್ಮ ಯೋಜನೆಗಳನ್ನು ಮಾಡಿದೆವು. ಆದರೆ ಈಗ ಜನಸಂಖ್ಯೆ 90 ಲಕ್ಷ ಆಗಿದೆ. ಸರಿಯಾಗಿ ವಿಮರ್ಶೆ ಮಾಡುವುದಾದರೆ 1905 ರಿಂದ ಇಲ್ಲಿಯವರೆಗೆ ಎಷ್ಟೆಷ್ಟು ಜನಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ನೋಡಬೇಕು. ಆದರೆ ಒಂದು ಸಮಾಧಾನಕರವಾದ ವಿಚಾರವೇನೆಂದರೆ, ಹಿಂದೆ ಮಲೆನಾಡಿನ ಜನಸಂಖ್ಯೆ

ಕಡಿಮೆಯಾಗುತ್ತಿತ್ತು. ಈಗ ಅದು ಹೆಚ್ಚಾಗಿದೆ. ಇದೊಂದೇ ನಿದರ್ಶನ ಸಾಕು. ಸರ್ಕಾರದವರು ಕಳೆದ ಮೂರು ನಾಲ್ಕು ವರ್ಷಗಳಿಂದ ಅಲ್ಲಿಯ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂಬುದನ್ನು ತೋರಿಸುವುದಕ್ಕೆ. ಅಲ್ಲಿ ಇತರ ಅನುಕೂಲತೆಗಳಲ್ಲದೆ ಹೆಲ್ತ್ ಯೂನಿಟ್ಟುಗಳನ್ನು ಹೆಚ್ಚು ಮಾಡಿದ್ದಾರೆ. ಇದರಿಂದ ಜನರ ಆರೋಗ್ಯ ಉತ್ತಮಗೊಂಡು ಉತ್ಪತ್ತಿ ಜಾಸ್ತಿಯಾಗಿದೆ. ಹಿಂದೆ ಎರಡು ಮೂರು ಲಕ್ಷ ರೂಪಾಯಿ ಇದಕ್ಕಾಗಿ ಖರ್ಚುಮಾಡುತ್ತಿದ್ದರೆಂದು ಜನಾಬ್ ಇಮಾಂರವರು ಹೇಳುತ್ತಿದ್ದರು ಈಗ ಅದಕ್ಕಿಂತ ಎಷ್ಟೋ ಹೆಚ್ಚು ಖರ್ಚಾಗುತ್ತಿದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು,—ಆಗ ಖರ್ಚಾದ ಹಣವೆಲ್ಲವೂ ಸದ್ವಿನಿಯೋಗವಾಗುತ್ತಿತ್ತು. ಆದರೆ ಈಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಲೂ ಆಗುತ್ತದೆ.

ಆದುದರಿಂದ ಈ ವಿಷಯವನ್ನು ವಿಮರ್ಶೆ ಮಾಡಬೇಕಾದರೆ ಸ್ಥಿತಿಗತಿಗಳನ್ನೂ ಸೌಲಭ್ಯಗಳನ್ನೂ ಗಮನದಲ್ಲಿಟ್ಟುಕೊಂಡು ಹೋಗಬೇಕು. ಅಲ್ಪಕಾಲಾವಧಿ ಯೋಜನೆಗಳಿಗೆ ಹೆಚ್ಚಿನ ಗಮನ ಕೊಡುತ್ತಿದ್ದರೂ ಕೂಡ ದೀರ್ಘಕಾಲಾವಧಿ ಯೋಜನೆಗಳನ್ನು ಕೈಬಿಟ್ಟು ಕುಳಿತಿಲ್ಲ. ಇವುಗಳನ್ನು slow down ಮಾಡಿದ್ದರೂ ನುಗು ಮುಂತಾದ ಮುಖ್ಯವಾದುವುಗಳನ್ನು ಏನಾದರೂ ಪ್ರಯತ್ನ ಮಾಡಿ ಹೆಚ್ಚು ಮುಂದುವರಿಸಬೇಕೆಂದು ಪ್ರಯತ್ನಿಸುತ್ತಿದ್ದೇವೆ. ಹಣದ ಸೌಲಭ್ಯ ಒದಗಿದ ಹಾಗೆ ಮಾಡುತ್ತಿದ್ದೇವೆ. ಹಾಗೂ ಜಂಬದ ಹಳ್ಳಿ ಮುಂತಾದ ಅನೇಕ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಶ್ರೀ ಮಲ್ಲಿಕಾರ್ಜುನಪ್ಪನವರು ಹೇಳಿದ ವಿಷಯಗಳಲ್ಲಿ ಸ್ವಲ್ಪ ಮಟ್ಟಿಗೆ ನಿಜಾಂಶವಿದೆ. ನಾವು ಕೊಡತಕ್ಕದ್ದರಲ್ಲಿ ಬಹುಭಾಗ ದುರುಪಯೋಗವಾಗುತ್ತದೆಂದು ಹೇಳಿದರು. ಅವರ ಸಲಹೆಯಂತೆ ಮಾಡಿದರೆ, ಇದ್ದು ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಯಾವ ಒಂದೇ ವಿಷಯವನ್ನೇ ನಂಬಿಕೊಂಡಿರುವುದಕ್ಕಾಗುವುದಿಲ್ಲ. Fertilisers ಜೊತೆಗೆ farm yard manure ಕೂಡ ಶೇಖರಣೆಮಾಡಿ ಉಪಯೋಗ ಮಾಡಬೇಕಾಗುತ್ತದೆ. ಎಲ್ಲಾ ಹಳ್ಳಿಗಳಲ್ಲಿಯೂ ಜನರು ತಮ್ಮ ತಮ್ಮಲ್ಲಿ ದೊರೆಯುವ ಗೊಬ್ಬರವನ್ನು ಶೇಖರಿಸಿದರೆ ಈ ಕಷ್ಟ ತಪ್ಪುತ್ತದೆ. ನಾವು ಬರೀ ಒಂದೇ ಒಂದು ವಿಚಾರಕ್ಕೆ ಪ್ರಾಮುಖ್ಯತೆ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಜನಾಬ್‌ಇಮಾಂರವರಿಗೆ ನಾನು ಹೇಳುವುದಿಷ್ಟು: ನಾವು multiplication or distribution of seeds ಗಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿಲ್ಲ. ಪೇಟೆ ಧಾರಣೆಗಿಂತ ಸ್ವಲ್ಪ ಕಡಿಮೆ ಬೆಲೆಗೆ ಕೊಡುತ್ತೇವೆ, ಅಷ್ಟೆ. Manure loans, ಎಂದರೆ ಗೊಬ್ಬರದ ಸಾಲವನ್ನು ಹೆಚ್ಚು ಜಮೀನಿರುವವರಿಗೆ ಕೊಡುವುದಿಲ್ಲ, ನಾಲ್ಕು ಎಕರೆಯಷ್ಟು ಇರುವವರಿಗೆ ಕೊಡುತ್ತೇವೆ. ಅದೂ ನೂರು ರೂಪಾಯಿಗಿಂತ ಹೆಚ್ಚಾಗಿ ಕೊಡುವುದಿಲ್ಲ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—1949–50 ರಲ್ಲಿ 1 ಕೋಟಿ 35 ಲಕ್ಷ ರೂಪಾಯಿ ಖರ್ಚಾಗಿದೆ. ಇದು ಯಾವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಭಾರಿ ನೀರಾವರಿ ಕಾಮಗಾರಿಗಳಿಗೆ ಖರ್ಚಾಗಿದೆ.

Multiplication and distribution of seeds ಗೆ ಸ್ವಲ್ಪ ಖರ್ಚಾಗಿದೆ. ಇನ್ನು ಗೊಬ್ಬರದ ಗುಂಡಿಗಳಿಗೆ-ಒಂದೊಂದು ಗುಂಡಿಗೆ ಎರಡು ರೂಪಾಯಿ ನಂತೆ ಕೊಡುತ್ತಿದ್ದಾರೆ. ಒಂದು ಊರಿನಲ್ಲಿ ನೂರು ಗುಂಡಿಗಳನ್ನು ತೆಗೆದರೆ 200 ರೂಪಾಯಿ ಕೊಡುತ್ತೇವೆ. ಒಬ್ಬೊಬ್ಬರಿಗೇ ಕೊಟ್ಟರೆ ತೊಂದರೆಯಾಗಬಹುದೆಂದು ಹಳ್ಳಿಗೆ ಕೊಟ್ಟುಬಿಡುತ್ತೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಒಂದು ವಿಷಯವನ್ನು ಮಾನ್ಯ ಸದಸ್ಯರು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮೈಸೂರು ದೇಶದಲ್ಲಿ ಎಲ್ಲರೂ ಕೆಟ್ಟವರು ಎನ್ನುವುದು ತಪ್ಪು, ಅನೇಕರು ಒಳ್ಳೆಯವರಿದ್ದಾರೆ. ನೀರಾವರಿ ಬಾವಿಗಳಿಗಾಗಿ ಕೊಟ್ಟ ಹಣವೆಲ್ಲಾ ದುರುಪಯೋಗವಾಗಿದೆ ಎಂದು ಕೆಲವರು ಹೇಳಿದರು. ಎಲ್ಲವೂ ಹೀಗಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹಾಗಾಗಬಹುದು, ಅಷ್ಟೆ. 1949–50 ರಲ್ಲಿ 867 ಭಾವಿಗಳು ಸಂಪೂರ್ಣವಾಗಿವೆ ಮತ್ತು 964 ಬಾವಿಗಳ ಕೆಲಸ ನಡೆಯುತ್ತಿತ್ತು. ಈ ಯೋಜನೆ ಜಾರಿಗೆ ಬಂದಲಾಗಾಯಿತು ಒಟ್ಟು 2,273 ಬಾವಿಗಳು ಸಂಪೂರ್ಣವಾಗಿವೆ ಮತ್ತು 3,419 ಬಾವಿಗಳ ಕೆಲಸ ನಡೆಯುತ್ತಿವೆ. ಇದು ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಜಾರಿಯಲ್ಲಿದೆ. ನೀರಿನ ಅಭಾವದ ಪ್ರದೇಶಗಳಲ್ಲಿ ಇದರಿಂದ ತುಂಬಾ ಉಪಯೋಗವಾಗಿದೆ. ಯಾರೋ ಒಬ್ಬರು ತಪ್ಪು ಮಾಡಿದ್ದು ನನ್ನ ಗಮನಕ್ಕೆ ಬಂತು, ಅವರು ಈ ಹಣವನ್ನು ಮದುವೆಗೆ ಉಪಯೋಗಿಸಿದರೆಂದು ಗೊತ್ತಾಯಿತು. ಅವರ ಮೇಲೆ ತಕ್ಷಣ distraint warrant ಜಾರಿ ಮಾಡಿದ್ದಾರೆ. ಯಾರೋ ಒಬ್ಬಿಬ್ಬರು ದುರುಪಯೋಗಮಾಡುತ್ತಾರೆಂದು ಪ್ರಜೆಗಳಿಗೆ ಉಪಯೋಗವಾಗುವ ಒಂದು ಯೋಜನೆಯನ್ನೇ ಅಲ್ಲಗಳೆಯಬಾರದು. ಇದರ ಉಪಯುಕ್ತತೆಯನ್ನು ಮನಗಂಡು ಅನೇಕ ಸಂದರ್ಭಗಳಲ್ಲಿ 500 ರೂಪಾಯಿ ಸಾಕಾಗುವುದಿಲ್ಲವೆಂಬುದು ಗಮನಕ್ಕೆ ಬಂದು 500 ರೂಪಾಯಿ ಇದ್ದುದನ್ನು ಸಾವಿರಕ್ಕೆ ಹೆಚ್ಚು ಮಾಡಿದೆವು. ಇಂಡಿಯಾ ಸರ್ಕಾರದವರು ಈ ಸಾವಿರದಲ್ಲಿ 500 ರೂಪಾಯಿ ಗ್ರಾಂಟು ಮತ್ತು 500 ರೂಪಾಯಿ ಸಾಲವೆಂದು ಮಾಡಿದರೆ ಸಾಕೆಂದು ಹೇಳಿದರು. ಎಲ್ಲಿ ಮಳೆ ಸರಿಯಾಗಿ ಆಗುವುದಿಲ್ಲವೋ, ಎಲ್ಲಿ subsoil water ಇರುತ್ತದೆಯೋ ಅಲ್ಲಿ ಈ ಬಾವಿಗಳಿಂದ ಬಹಳ ಅನುಕೂಲವಾಗುತ್ತದೆ. ವಿದ್ಯುಚ್ಛಕ್ತಿ ಇದ್ದರೆ ಇರಿಗೇಷನ್ ಪಂಪುಗಳನ್ನು ಹಾಕಿ ಕೆಲಸ ಮಾಡಬಹುದು. ಎಲ್ಲೆಲ್ಲಿ ಜನರು ವಿದ್ಯುಚ್ಛಕ್ತಿ ಪಂಪುಗಳು ಬೇಕೆಂದು ಒತ್ತಾಯ ಮಾಡಿದರೋ ಅಲ್ಲಿ ಕೊಟ್ಟಿದ್ದೇವೆ. 1949–50 ರಲ್ಲಿ 420 ಪಂಪುಗಳನ್ನು ಸರ್ವಿಸ್ ಮಾಡಿದೆವು, 60 ಡೀಸೆಲ್ ಆಯಿಲ್ ಪಂಪುಗಳನ್ನು ಹಾಕಿದೆ. ಈ ವರ್ಷ 269 ಪಂಪುಗಳನ್ನು ಸರ್ವಿಸ್ ಮಾಡಿದ್ದೇವೆ. ಒಟ್ಟು 1949–50ರಲ್ಲಿ 1,782 ಪಂಪುಗಳೂ 1950–51 ರಲ್ಲಿ ಡಿಸೆಂಬರ್ ವರೆಗೆ 1965 ಪಂಪುಗಳೂ ಉಪಯೋಗದಲ್ಲಿವೆ.

ಆದುದರಿಂದ ಈ ಭಾಗದಲ್ಲೂ ಕೊಂಚ ಆಹಾರವಸ್ತುಗಳ ಬೆಳವಣಿಗೆಗೆ ಅಡಚಣೆಯುಂಟಾಗಿದೆ. ಆದರೆ ಇದೆಲ್ಲಾ ಕೆಲವು ಬಾವಿಗಳು ಇರತಕ್ಕ ಕಡೆ ಬೆಳೆದುಕೊಳ್ಳಬಹುದಾಗಿದೆ. ಆಹಾರಾಭಾವ ಈಗ ಹೇಗೆ ಉಂಟಾಗಿದೆಯೋ ಅದೇ ರೀತಿ ಹತ್ತಿ, ಸೆಣಬು, ಎಣ್ಣೆಯ ಬೀಜ ಇತ್ಯಾದಿಗಳಿಗೂ ಅಭಾವವುಂಟಾಗಿದೆ. ಮತ್ತೆ ಕೆಲವರು ಹೆಚ್ಚು ಲಾಭ ಬರುವಂಥ ಕಮರ್ಷಿಯಲ್ ಕ್ರಾಪುಗಳನ್ನು ಬೆಳೆಯುವ ಕಡೆಗೆ ಮನಸ್ಸನ್ನು ತಿರುಗಿಸಿದ್ದಾರೆ. ಆದರೆ ಈ ಸಂಬಂಧವಾಗಿ ಸರ್ಕಾರದವರು ಈಗಾಗಲೆ ಏನು ಆಲೋಚನೆ ಮಾಡಿದ್ದಾರೋ ಅದರ ಜೊತೆಗೆ ಈಗ ಮಾನ್ಯ ಸದಸ್ಯರು ಸೂಚಿಸಿರುವಂಥ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಅಮೂಲ್ಯವಾದ ಸಲಹೆಗಳನ್ನೂ ಗಮನಕ್ಕೆ ತೆಗೆದುಕೊಂಡು ಆದಷ್ಟು ಬೇಗ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆಂಬ ಭರವಸೆಯನ್ನು ಸಭೆಗೆ ನೀಡುತ್ತೇನೆ.

ಆದರೆ ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು ಸುಮ್ಮನೆ ಕಾನೂನುಗಳನ್ನು ಮಾಡಿ ಜನರನ್ನು ಹಿಂಸಿಸುವುದಕ್ಕೆ ಬದಲಾಗಿ ಲಾಭದಾಯಕ ಬೆಳೆಗಳನ್ನಿಡುವ ಜನರ ಮೇಲೆ ಒಂದಕ್ಕೆ ಹತ್ತರಷ್ಟು ತೆರಿಗೆ ಬೇಕಾದರೂ ತೆರಿಗೆ ವಿಧಿಸಿ ಎಂಬುದಾಗಿ ಒಂದಂಶವನ್ನು ಸೂಚಿಸಿದ್ದಾರೆ. ಇದು ಬಹಳ ಉತ್ತಮವಾಗಿಯೇ ಕಾಣುತ್ತದೆ. ಕಮ್ಮಿ ಹಣದಿಂದ ತೃಪ್ತರಾಗಿರದೆ ಹೆಚ್ಚು ಹಣ ಸಂಪಾದನೆ ಮಾಡಬೇಕೆಂದು ಹಾಗೆ ಲಾಭದಾಯಕವಾದ ಬೆಳೆಗಳನ್ನಿಡತಕ್ಕವರಿಗೆ ಅಧಿಕ ತೆರಿಗೆ ಹಾಕತಕ್ಕದ್ದೂ ಸೂಕ್ತವಾಗಿಯೇ ಇದೆ. ಈ ಹೆಚ್ಚು ಆಹಾರವನ್ನು ಬೆಳೆಯಬೇಕೆಂಬ ಯೋಜನೆಗಾಗಿ ನಾವು ಈಗಾಗಲೇ ಶಿವಮೊಗ್ಗ,ಚಿಕ್ಕಮಗಳೂರು, ಚಿತ್ರದುರ್ಗ. ಈ ಜಿಲ್ಲೆಗಳಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಿದ್ದೇವೆ. ಇನ್ನು ಅಧಿಕಾರಿಗಳ ಮತ್ತು ನೌಕರರ ವಿಚಾರವಾಗಿ ಹೇಳುವುದಾದರೂ ಇಷ್ಟೆ. ಯಾರಾದರೂ ಒಬ್ಬಿಬ್ಬರು ಅಂಥಾ ಉದಾಸೀನಭಾವದಿಂದ ನಡೆದಿರಬಹುದೇ ಶಿವಾಯಿ ಸಾರ್ವತ್ರಿಕವಾಗಿ ಆ ವರ್ಗದವರೆಲ್ಲರೂ ಹಾಗೇ ಉದಾಸೀನ ಭಾವದಿಂದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಹಾಗೊಂದು ವೇಳೆ ಉದಾಸೀನದಿಂದ ಯಾರಾದರೂ ವರ್ತಿಸಿದ್ದರೆ ಅಂಥವರ ವಿಚಾರದಲ್ಲಿ ಖಂಡಿತ ಉಗ್ರ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂಬುದರ ಬಗ್ಗೆ ಶ್ರೀ ಬೋರಣ್ಣಗೌಡರನ್ನು ವಿಚಾರಿಸಿದರೆ ತಮಗೆಲ್ಲಾ ತಿಳಿದುಬರುತ್ತೆ. ಕೆಲವು ನೌಕರರಿಗೆ ವರ್ಗಮಾಡಿದ್ದೇವೆ. ಮತ್ತೆ ಕೆಲವರಿಗೆ ಎಚ್ಚರಿಕೆ ಕೊಟ್ಟಿದ್ದೇವೆ. ಇಂಥಾ ವಿಚಾರದಲ್ಲಿ ನಿರ್ದಿಷ್ಟವಾದ ಕೇಸುಗಳೇನಾದರೂ ಇದ್ದಲ್ಲಿ ತಾವು ತಿಳಿಸಿದರೆ, ಅದನ್ನು ಖಂಡಿತ ವಿಚಾರ ಮಾಡುತ್ತೇವೆ.

ಇನ್ನು ಈ ಹೆಚ್ಚು ಆಹಾರವನ್ನು ಬೆಳೆಯಬೇಕೆಂಬ ಯೋಜನೆಯ ಬಗ್ಗೆ ಎಷ್ಟು ಇರಿಗೇಷನ್ ವರ್ಕ್ಸ್‌ಗಳನ್ನು ನಡೆಸಬೇಕೆಂಬ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳ ಪಟ್ಟಿಯನ್ನೇ ಹಾಕಿಕೊಂಡು ಅದರಂತೆ ನಡೆಸಲಾಗುತ್ತಿದೆ. River channel areas, Irrigation works under progress ಐಟಂಗಳನ್ನು ತಾವು ನೋಡುವುದಾದರೆ ಈಗಾಗಲೆ 700 ಛಾನಲ್‌ಗಳ ಕೆಲಸ ನಡೆಯುತ್ತಿದೆಯೆಂಬುದು ಗೊತ್ತಾಗುತ್ತದೆ. ಈ ಬಗ್ಗೆ ಈಗಾಗಲೆ ಎಷ್ಟು ಕೆರೆಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ, ಎಷ್ಟು ಕೆರೆಗಳಿಗೆ ತೂಬು ಇತ್ಯಾದಿಗಳನ್ನು ದುರಸ್ತು ಮಾಡಿಸಲಾಯಿತು, ಮತ್ತು ಎಷ್ಟು ಫೀಡರ್ ಛಾನಲ್‌ಗಳನ್ನು ರಿಪೇರಿ ಮಾಡಲಾಗಿದೆ ಎಂಬುದಕ್ಕೆ ಸಾಕಷ್ಟು ಅಂಕಿಅಂಶಗಳನ್ನು ಕೊಡಬಲ್ಲೆ. 1-4-50 ರಿಂದ 31-4-50 ರ ವರೆಗೆ ಹೆಚ್ಚಾಗಿ ಹಣ ಖರ್ಚಾಗಿದೆ. ಸುಮಾರು 450 ಲಕ್ಷ 50 ಸಾವಿರ ರೂಪಾಯಿ ಖರ್ಚಾಗಿದೆ. ಈ ನೀರಾವರಿ ಕಾಮಗಾರಿಗಳ ಬಗ್ಗೆ ಕೇಂದ್ರ ಸರ್ಕಾರದವರು ಹಣ ಸಹಾಯ ನೀಡುವುದಾಗಿ ಭರವಸೆ ಕೊಟ್ಟ ಮೇಲೆ ನಾವು ಈ ಬಗ್ಗೆ ವಿಶೇಷ ಹಣವನ್ನು ಖರ್ಚುಮಾಡುತ್ತಿದ್ದೇವೆ. ಹೀಗೆ ನಮಗೆ ಈ ಕಾಮಗಾರಿಗಳ ಬಗ್ಗೆ 1949-50 ರಿಂದ ಕೇಂದ್ರ ಸರ್ಕಾರದವರ ಸಹಾಯ ದೊರೆಯುತ್ತಿದೆ. ಇಲ್ಲಿಯತನಕ ಎಲ್ಲೆಲ್ಲಿ ಇಮ್ಯಾಜಿನರಿ ಭಾವನೆಯ ಮೇಲೆ ಹಣವನ್ನು ಖರ್ಚುಮಾಡಲಾಗುತ್ತಿತ್ತೋ ಅದೆಲ್ಲವನ್ನೂ ಈಗ ನಿಲ್ಲಿಸಲಾಗಿದೆ. ಇಷ್ಟೇ ಅಲ್ಲದೆ ಅನಾವಶ್ಯಕವಾಗಿ ಎಲ್ಲೆಲ್ಲಿ ಹಣ ದುಂದುವ್ಯಯವಾಗುತ್ತಿತ್ತೋ ಅದೆಲ್ಲವನ್ನೂ ಸಂಪೂರ್ಣವಾಗಿ ತಡೆಗಟ್ಟಲಾಗಿದೆ. ಈಗಾಗಲೆ ನಾವು ಕೈಗೊಂಡಿರುವ ಮೂರು ದೊಡ್ಡ ನೀರಾವರಿ ಯೋಜನೆಗಳ ವಿಷಯ ತಮಗೆಲ್ಲಾ ತಿಳಿದಿರುವುದೇ ಆಗಿದೆ. ಈ ಬಗ್ಗೆ ನಮಗೆ ಕೇಂದ್ರ ಸರ್ಕಾರದವರು ದ್ರವ್ಯ ಸಹಾಯ ನೀಡತಕ್ಕವರಾಗಿದ್ದಾರೆ. ಆದರೆ ನಾವು ಇಷ್ಟೆಲ್ಲವನ್ನೂ ಮಾಡಿಸಿದ್ದಾಗ್ಯೂ ಪರಿಸ್ಥಿತಿ ಹತೋಟಿಗೆ ಬಾರದಿರುವುದಕ್ಕೆ ಇನ್ನೂ ಅನೇಕ ಕಾರಣಗಳಿವೆ ನಾವು ಎಷ್ಟೇ ಕೆರೆ ಕಾಲುವೆಗಳ ರಿಪೇರಿಯನ್ನು ಮಾಡಿಸಿದ್ದಾಗ್ಯೂ ಸಕಾಲದಲ್ಲಿ ಮಳೆ ಬಾರದೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಜನರು ಎಷ್ಟೇ ಕಷ್ಟಪಟ್ಟರೂ ಸಾರ್ಥಕವಾಗುವುದಿಲ್ಲ. ಹೀಗಾಗಿ ನಾವು ಸಾವಿರಾರು ಪಲ್ಲ ಧಾನ್ಯ ಬರಬಹುದೆಂದು ನಿರೀಕ್ಷಿಸಿದ್ದ ಕಡೆಗಳಲ್ಲೆಲ್ಲಾ ಮಳೆ ಬಾರದೆ ಹೋಗಿ ನೂರು ಪಲ್ಲಾ ಕೂಡ ದೊರೆಯಲು ಕಷ್ಟವಾಯಿತು. ಈ ತೆರನಾದ ಪರಿಸ್ಥಿತಿ ಮಾಲೂರು ತಾಲ್ಲೂಕಿನಲ್ಲಿ ನವೆಂಬರ್ ತಿಂಗಳಲ್ಲಿ ಒಂದು ಹದ ಮಳೆ ಬಾರದೆ ಹೋಗಿ ಎಕರೆಗೆ 10-15 ಪಲ್ಲಾ ರಾಗಿ ಬೆಳೆಯುತ್ತಿದ್ದ ಕಡೆ ಎಕರೆಗೆ 1-2 ಪಲ್ಲಾ ಕೂಡ ಆಗಲು ಕಷ್ಟವಾಯಿತು. ಹೀಗೆ ಈ ಆಹಾರ ಸಮಸ್ಯೆ ನಾನಾ ವಿಚಾರಗಳನ್ನು ಅವಲಂಬಿಸಿರುತ್ತದೆ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವುದು ಬಹಳ ಸುಲಭ; ಆದರೆ ಬೆಳೆಯುವುದು ಅತಿ ಕಷ್ಟ. ಎಷ್ಟೋ ಕಡೆ ಕೆರೆಗಳನ್ನು ನಾವು ರಿಪೇರಿಮಾಡಿಸಿದ್ದಾಗ್ಯೂ ಮಳೆಯೇ ಬಾರದೆ ಹೋಗಿ ಅಲ್ಲಿ ಯಾವ ಬೆಳೆಯೂ ಆಗಿರುವುದಿಲ್ಲ. ಇದಕ್ಕೆ ನಾನು ತಮಗೊಂದು ನಿದರ್ಶನ ಹೇಳುವುದಾದರೆ ಯಳಂದೂರು ತಾಲ್ಲೂಕೊಂದರಲ್ಲಿಯೇ ಸರ್ಕಾರದವರು ಹಿಂದಿನ 50 ವರ್ಷಗಳಲ್ಲಿ ಕೂಡ ಖರ್ಚುಮಾಡದೆಯಿರುವಷ್ಟು ಹಣವನ್ನು ಬಳಸಿ, ಸುಮಾರು ಒಂದು ಲಕ್ಷ ರೂಪಾಯಿಗಳ ತನಕ ವೆಚ್ಚಮಾಡಿ ಇನನ್‌ಡೇಷನ್ ಛಾನಲ್‌ಗಳನ್ನು ಮಾಡಿಸಿದ್ದಾಯಿತು. ಆದರೆ ಮಳೆಯೇ ಬಾರಲಿಲ್ಲ. ಹೊನ್ನುಹೊಳೆಗೆ ನೀರೇ ಬಾರದೆ ಅಲ್ಲಿ ಹಾಕಿದ್ದ ಭತ್ತದ ಫಸಲೆಲ್ಲಾ ನಿಷ್ಫಲವಾಗಿ ಹೋಯಿತು. ಹೀಗೆ ಈ ವ್ಯವಸಾಯದ ಕಸುಬು ಬರಿ ಮನುಷ್ಯ ಪ್ರಯತ್ನವೊಂದನ್ನೇ ಅವಲಂಭಿಸಿರುವುದಿಲ್ಲ. ನೀರು ಇದಕ್ಕೆ ಮುಖ್ಯ.

ಜನಾಬ್ ಜೆ. ಮಹಮದ್ ಇಮಾಂರವರು.—ಪರ್ಜನ್ಯ ಜಪಮಾಡಿ, ನೀರು ಬರುತ್ತೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ತಮಗೇ ಬಿಟ್ಟು ಬಿಡುತ್ತೇನೆ. ಆದರೆ ಈ ಹೆಚ್ಚು ಆಹಾರ ಬೆಳೆಯಬೇಕೆಂಬುವ ಯೋಜನೆಯ ಸಂಬಂಧದಲ್ಲಿ ಈಗ ಸಭೆಯ ಮುಂದೆ ಕೈಗೆ ಬರುವ ಬೆಳೆಯನ್ನು ಅಂದಾಜು ಮಾಡಿರುವುದು ಸರಿಯಾಗಿಲ್ಲವೆಂದು ವಾದ ಮಾಡಿದ್ದಾರೆ. ಆದರೆ ಹಾಗೆ ಅಂದಾಜು ಮಾಡಿರತಕ್ಕ ಪ್ರಸಂಗಗಳು ಬಹಳ ಕಮ್ಮಿ. ಶ್ರೀ ಎಚ್. ಎಂ. ಚನ್ನಬಸಪ್ಪನವರು ಬ್ಲಾಕ್ ಮಾರ್ಕೆಟ್ ವಿಚಾರದಲ್ಲಿ ಒಂದು ವಾದವನ್ನು ಬಹಳ ಸೊಗಸಾಗಿ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ಪಿರಿಯಾಪಟ್ಟಣ, ಹುಣಸೂರು, ಚಾಮರಾಜನಗರ ಈ ತಾಲ್ಲೂಕುಗಳಲ್ಲಿ ಅನೇಕ ಕೆರೆಗಳನ್ನು ರಿಪೇರಿ ಮಾಡಿಸಲಾಗಿದೆ. ಈಗಾಗಲೇ 40-42 ಕೆರೆಗಳ ಕೆಲಸವನ್ನು ಮುಗಿಸಲಾಗಿದೆ. ಆ ಪ್ರಾಂತ್ಯದಲ್ಲಿ ನವೆಂಬರ್ ಮೊದಲನೆಯ ವಾರದಲ್ಲಿ ಒಂದು ಹದ ಮಳೆ ಬಂದಿದ್ದರೆ ಬೆಳೆಗಳು ಬಹಳ ಚೆನ್ನಾಗಿ ಆಗುತ್ತಿದ್ದವು. ಆದರೆ ಶ್ರೀ ಚೆನ್ನಬಸಪ್ಪನವರು ಹೇಳತಕ್ಕ ಪ್ರಕಾರ ಆಹಾರದ ಬಾಬಿನಲ್ಲಿ ನಾವು ಸ್ವಪರಿಪೂರ್ಣತೆಯನ್ನು ಇನ್ನೂ ಹೊಂದಿಲ್ಲ. ಬರೀ ಆಕಾಶ ಪುರಾಣವನ್ನು ಒಪ್ಪುವುದಕ್ಕಾಗುವುದಿಲ್ಲ. ಈ

ಬಗ್ಗೆ ಅಂಕಿ ಅಂಶಗಳನ್ನೊದಗಿಸಲು ನಮಗಿರತಕ್ಕದ್ದು ಒಂದೇ ಒಂದ ಏಜನ್ಸಿ. ಅವರಿಂದ ನಮಗೆ ಅಂಕಿ ಅಂಶಗಳು ಬಾರದ ವಿನಾ ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಆದರೆ ನಾನು ನಮ್ಮ ಮಾನ್ಯ ಸದಸ್ಯರಿಗೆಲ್ಲಾ ಇಷ್ಟು ಮಾತ್ರ ಭರವಸೆ ಕೊಡಬಲ್ಲೆ: ಯಾರು ಯಾರು ಸರ್‌ಪ್ಲಸ್ ಹೋಲ್ಡರುಗಳಲ್ಲವೋ ಅಂಥವರಿಂದ, ಮತ್ತು ಯಾರಿಗೆ 12 ತಿಂಗಳಿಗೂ ಆಗುವಷ್ಟನ್ನು ಬಿಡದೆ ಅವರಿಂದ ವಸೂಲು ಮಾಡಿ ತಂದಿದ್ದಾರೋ ಅಂಥಾ ಸಂದರ್ಭಗಳನ್ನೆಲ್ಲಾ ಪರಾಂಬರಿಸಿ ಪುನಃ ತನಿಖೆ ನಡೆಸಿ, ಹಾಗೆ ತಂದಿದ್ದ ದವಸವನ್ನೆಲ್ಲಾ ಪುನಃ ಅವರಿಗೆ ವಾಪಸು ಕೊಡಲಾಗಿದೆ. ಈ ವಿಚಾರ ಶ್ರೀ ಬೋರಣ್ಣ ಗೌಡರಿಗೆ ಚೆನ್ನಾಗಿ ಗೊತ್ತಿದೆ. ಆದರೆ ಯಾರ್ಯಾರು ನಿಜವಾಗಿಯೂ ಸರ್‌ಪ್ಲಸ್ ಹೋಲ್ಡರುಗಳಾಗಿದ್ದರೂ ಸರಿಯಾದ ಅಂಕಿ ಅಂಶಗಳನ್ನು ಕೊಡದೆ ವಂಚನೆ ಮಾಡಿದ್ದಾರೋ ಅಂಥವರ ವಿಷಯದಲ್ಲಿ ಸ್ವಲ್ಪ ಕಟುವಾಗಿ ಕಾರ್ಯಕ್ರಮವನ್ನು ಕೈಗೊಂಡಿರಲಾಗಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹೆಚ್ಚಾಗಿ ಬೆಳೆದಿರುವವರಲ್ಲಿ, ಅವರಿಗೆ ಆಗುವಷ್ಟನ್ನೂ ಬಿಟ್ಟು ಸರ್‌ಪ್ಲಸ್ ದವಸವನ್ನು ಮಾತ್ರ ತಂದಿರುತ್ತೀರೋ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಆದರೆ ಈ ಸಭೆಯಲ್ಲೇ ಎಷ್ಟೋ ಜನ ಸರ್‌ಪ್ಲಸ್ ಹೋಲ್ಡರುಗಳಿದ್ದಾರೆ. ಅವರುಗಳ್ಯಾರೂ ನಮ್ಮಿಂದ ದವಸವನ್ನೇ ವಸೂಲು ಮಾಡಲಿಲ್ಲವೆಂಬುದಾಗಿಯಾಗಲೀ ಅಥವಾ ಹೆಚ್ಚಾಗಿ ವಸೂಲು ಮಾಡಿದ್ದಾರೆಂಬುದಾಗಿಯಾಗಲೀ ಹೇಳಿರುವುದಿಲ್ಲ. ಏನೋ ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತು ಎಂದು ಹೇಳಿದ್ದಾರೇ ಶಿವಾಯಿ ನಿರ್ದಿಷ್ಟವಾಗಿ ಯಾರೂ ತಿಳಿಸಿಲ್ಲ. ಒಂದು ವೇಳೆ ನಮಗೆ ಅಲ್ಲಲ್ಲೇ ಬರತಕ್ಕ ಫಿರ್ಯಾದುಗಳನ್ನು ವಿಚಾರಣೆ ನಡೆಸಲು ಸ್ಥಳಕ್ಕೆ ಹೋದಾಗ ಯಾರೊಬ್ಬರೇ ಆಗಲಿ ಮುಂದೆ ಬಂದು ಸತ್ಯಾಂಶಗಳನ್ನು ತಿಳಿಸುತ್ತಿಲ್ಲ. ಆದರೆ ಇಷ್ಟೊಂದು ದೊಡ್ಡ ಲೆಕ್ಕಗಳನ್ನು ಇಡತಕ್ಕ ಕಡೆ, ಸುಗ್ಗಿಯ ಲೆಕ್ಕಗಳನ್ನು ಬರೆಯುವ ಕಡೆ ಒಂದೆರಡು ಪ್ರಸಂಗಗಳಲ್ಲಿ ಹೆಚ್ಚು ಕಡಿಮೆಯಾಗಿರಬಹುದು.

Sr M. N. JOIS.—The whole issue is this. ನಮ್ಮಲ್ಲಿ ದವಸ ನ್ಯಾಯವಾಗಿ ವಸೂಲಾಗುತ್ತಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನ್ಯಾಯವಾಗಿ ಮತ್ತು ಸರಿಯಾಗಿ ವಸೂಲ್ ಮಾಡದೆ ಇರುವಂಥಾದ್ದು ನೂರಾರು ಕೇಸುಗಳಿವೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಜಿಲ್ಲೆ).—ಮಾರ್ಕೋನಹಳ್ಳಿ ಕೆರೆಯ ಕೆಳಗೆ ಸರಿಯಾಗಿ ದವಸ ವಸೂಲಾಗಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಮಾರ್ಕೋನಹಳ್ಳಿ ಕೆರೆಯ ಕೆಳಗೆ ಒಂದು ಕಾರ್ನರಿಸಿಯೇ ನಡೆದಿರುತ್ತೆಂದು ಮಾನ್ಯ ಹುಚ್ಚಮಾಸ್ತಿಗೌಡರು ತಿಳಿಸಿದ ಕೂಡಲೇ ಅದನ್ನೆಲ್ಲಾ ಸರಿಪಡಿಸಲಾಯಿತು. ಆದರೆ ಮಾನ್ಯ ಸದಸ್ಯರಿಗೆಲ್ಲಾ ನಾನು ಇಷ್ಟು ಹೇಳುತ್ತೇನೆ. ಅನ್ಯಾಯವಾಗಿ ಯಾರಿಂದಲೂ ನಾವು ಒಂದು ಪಲ್ಲ ದವಸ ಕೂಡ ತರಬೇಕೆಂದಿಲ್ಲ, ಜನರಿಗೆ ಹೀಗೆ ಉದ್ದಿಶ್ಯವಾಗಿ ಅನಾನುಕೂಲ ಮಾಡಬೇಕೆಂದು ಯಾರ ಮನಸ್ಸಿನಲ್ಲೂ ಇಲ್ಲ. ಆದರೆ ಎಲ್ಲಿ ಯಾರ್ಯಾರು ಕದ್ದು ಮುಚ್ಚಿಟ್ಟು ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೆಂದು ತಿಳಿದು ಬಂದಿದೆಯೋ ಅಂಥಾ ಕಡೆಗಳಲ್ಲೆಲ್ಲಾ ಕೂಡಲೇ ಕಾರ್ಯಕ್ರಮವನ್ನು ಕೈಕೊಂಡಿದ್ದೇವೆ. ಆದರೆ ಶ್ರೀ ಎಚ್. ಎಂ. ಚನ್ನಬಸಪ್ಪನವರು ಈಗಾಗಲೇ ತಿಳಿಸಿರುವ ದೂರುಗಳ ಬಗ್ಗೆ ತನಿಖೆ ನಡೆಯುತ್ತಿದೆ. ಈ ಬಗ್ಗೆ ಒಬ್ಬ ಸಬ್ ಡಿವಿಜನ್ ಅಧಿಕಾರಿಗಳನ್ನೇ ಪ್ರತ್ಯೇಕವಾಗಿ ನೇಮಿಸಿ ಆ ಬಗ್ಗೆ ಸಂಪೂರ್ಣ ವಿವರಗಳನ್ನೊಳಗೊಂಡ ಒಂದು ವರದಿಯನ್ನು ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ. ಆದರೆ ಆ ವಿಚಾರಣೆಗಳೆಲ್ಲಾ ಇನ್ನೂ ಮುಗಿದಿಲ್ಲ. ಹಾಗೆ ವಿಚಾರಣೆ ಇನ್ನೂ ನಡೆಯುತ್ತಿರುವುದರಿಂದ ಆ ಬಗ್ಗೆ ಹೆಚ್ಚು ಮಾತನಾಡುವುದು ಉಚಿತವಾದ್ದಲ್ಲ ಮತ್ತು ಸರಿಯಲ್ಲವೆಂದು ಭಾವಿಸುತ್ತೇನೆ.

ನಂಜನಗೂಡು ತಾಲ್ಲೂಕು ವಿಚಾರ ಕೋರ್ಟಿನಲ್ಲಿದೆ. ಆದ್ದರಿಂದ ಅದನ್ನು ಪ್ರಸ್ತಾಪಿಸುವುದು ಸರಿಯಲ್ಲ. ಯಾರಿಗಾದರೂ ತೊಂದರೆಯಾಗಿದೆಯೆಂದು ಹೇಳಿದರೆ ಅದನ್ನು ವಿಚಾರಮಾಡಿ ಸೂಕ್ತ ಪರಿಹಾರ ನೀಡಲು ಖಂಡಿತ ಸಿದ್ಧವಾಗಿದ್ದೇವೆ. ಹತೋಟಿ ಆಜ್ಞೆ ಜಾರಿಗೆ ಬಂದಿದ್ದರೂ ಅದು ಕ್ರಮವಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಲು ತಕ್ಕ ವ್ಯವಸ್ಥೆ ಮಾಡಿದೆ ಎಂಬುದನ್ನು ಯಾರೂ ಮರೆಯಬಾರದು. ಏನೂ ಬೆಳೆಯದೇ ಇರುವವರೂ ಬತ್ತವನ್ನಿಟ್ಟುಕೊಂಡಿರುವ ಪ್ರಸಂಗಗಳಿವೆ. ಅವರಲ್ಲಿಟ್ಟುಕೊಳ್ಳಬಹುದಾದ ಪ್ರಮಾಣಕ್ಕಿಂತ ಹೆಚ್ಚಾಗಿ ಕೆಲವರ ಮನೆಗಳಲ್ಲಿದ್ದುದು ಹೊರಪಟ್ಟಿದೆ. ಆ ಮೇಲೆ ಕೆಲವರು ಕೂಲಿಮಾಡಿ ತಂದಿರುತ್ತಾರೆಂದು ಹೇಳಿದ್ದಾರೆ. ಆದರೆ ಹತ್ತು ಹನ್ನೆರಡು ಪಲ್ಲ ಅಂಥವರ ಮನೆಯಲ್ಲಿ ಒಂದೇ ತರಹ ಬತ್ತ ಇರುವುದಕ್ಕೆ ಸಾಧ್ಯವೆ! ಮೂರು ನಾಲ್ಕು ತರಹವಾದರೂ ಇರಬೇಕು. ಇದನ್ನು ವಿವರ್ಶ ಮಾಡಿ ನೋಡಬೇಕು. ಸತ್ಯ ಮತ್ತು ಅಸತ್ಯವನ್ನು ಪರಿಶೀಲನೆಮಾಡಿ ತಪ್ಪುಮಾಡಿರುವ ಅಧಿಕಾರಿಗಳಿಗೆ ಖಂಡಿತ ಶಿಕ್ಷೆ ಮಾಡಿದ್ದೇವೆ. ಆದರೆ ಸ್ವಾಭಾವಿಕವಾಗಿ ಜನರಲೈಸ್ ಮಾಡಿದರೆ ಏನಾಗುತ್ತದೆಂದರೆ ಕೆಲಸಮಾಡತಕ್ಕ ಅಧಿಕಾರಿಗಳಲ್ಲಿ ದಕ್ಷತೆಯು ಜಾಸ್ತಿಯಾಗುವುದಕ್ಕೆ ಬದಲಾಗಿ ಕುಗ್ಗುವುದಕ್ಕೆ ಅವಕಾಶವಾಗುತ್ತದೆ. ಆದರೆ ಆ ರೀತಿ ಆಗಬಾರದು. ಎಷ್ಟೋ ದಕ್ಷತೆಯಿಂದ ನಿಸ್ಪೃಹತೆಯಿಂದ ಕೆಲಸ ಮಾಡುವ ಅಧಿಕಾರಿಗಳಿದ್ದಾರೆ. ತಪ್ಪು ಮಾಡಿರುವ ನಿದರ್ಶನಗಳನ್ನು ಹೇಳಿದ್ದರೆ ಸಂಬಂಧಪಟ್ಟವರಿಗೆ ಉಗ್ರವಾದ ಶಿಕ್ಷೆ ಮಾಡೋಣ. ತಪ್ಪುಮಾಡಿದವರನ್ನು ಶಿಕ್ಷಿಸದೆ ಸರ್ಕಾರದವರು ಬಿಟ್ಟಿರುವುದಿಲ್ಲ ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಮಾನ್ಯ ಸದಸ್ಯರು ತಿಳಿಸಿರುವ ವಿಚಾರಗಳನ್ನು ಆಲೋಚನೆ ಮಾಡಿ ಕೂಡಲೇ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಮೂರನೆಯದಾಗಿ ಹೋಟಲುಗಳು ಜಾಸ್ತಿಯಾಗುತ್ತವೆಯೆಂದು ಶ್ರೀ ಮಾದಯ್ಯಗೌಡರು ಹೇಳಿದ್ದಾರೆ. ಆದರೆ ಹಾಗಿಲ್ಲ ಎಂದು ಅವರಿಗೆ ಭರವಸೆ ಕೊಡಬಲ್ಲೆ. ಹಿಂದಿದ್ದ ಹೋಟಲುಗಳ ಸಂಖ್ಯೆಯನ್ನು ಒಂದು ಆಕ್ಟ್ ಮಾಡಿ ಕಡಿಮೆಮಾಡಿದೆ. ಅಲ್ಲಲ್ಲಿ ಕೆಲವು ಲೈಸೆನ್ಸ್ ಪಡೆಯದೆ ಪ್ರಾರಂಭಿಸಿರುವ ಹೋಟಲುಗಳಿವೆ, ನಿನ್ನೆ ಕೂಡ ಆ ವಿಚಾರವಾಗಿ ತಿಳಿವಳಿಕೆ ಕೊಟ್ಟು ಅಂಥವುಗಳನ್ನು ಮುಚ್ಚಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದೆ. ಹೊಸದಾಗಿ ಹೋಟಲುಗಳನ್ನಿಡಲು ಅವಕಾಶಕೊಡಕೂಡದು, ಹೆಚ್ಚು ಜನರು ಬಂದು ಹೋಗುವ ಕಡೆ ಮತ್ತು ಸರ್ವಿಸ್ ಬಸ್ಸುಗಳಿರುವ ಜಾಗಗಳಲ್ಲಿ ಮಾತ್ರ ಲೈಸೆನ್ಸ್ ಕೊಡಬಹುದು, ಬಾಕಿ ಪ್ರದೇಶಗಳಲ್ಲಿ ಅವಕಾಶಕೊಡಕೂಡದು. ಎಂದು ಎಚ್ಚರಿಸಿದೆ. ಇದುವರೆಗೆ ಸುಮಾರು 4,000 ಹೋಟಲುಗಳನ್ನು ಮುಚ್ಚಿಸಿದೆ ಈ ವಿಚಾರವು ಹೈಕೋರ್ಟಿಗೆ ಕೂಡ ಹೋಗಿ ಮೂಲಭೂತ ಹಕ್ಕಿಗೆ ಲೋಪಬರಬಹುದು ಎಂದು ಟೀಕೆ ಬಂದಿದೆ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಪಟ್ಟಣಗಳವರಿಗಾಗಿ ಹಳ್ಳಿಯವರಿಂದ ದವಸಧಾನ್ಯಗಳನ್ನು ಕಿತ್ತುಕೊಂಡು ಬರುತ್ತಾರೆ ಎಂದು ಶ್ರೀ ಹುಚ್ಚೇಗೌಡರು ಹೇಳಿದ್ದಾರೆ. ಆದರೆ ಯಾರೋ ಅವಿವೇಕಿಗಳು ಒಂದೆರಡು ಕಡೆ ತೊಂದರೆ ಮಾಡಿರುವ ಪ್ರಸಂಗದಿಂದ ಎಲ್ಲಾ ಕಡೆಯೂ ಹಾಗಾಗಿದೆಯೆಂದು ಹೇಳುವುದು ಸಮಂಜಸವಲ್ಲ ಎಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಬೆಳೆಯದೇ ಇರುವವರು ಪಟ್ಟಣದಲ್ಲಿರಲಿ ಅಥವಾ ಮೈನರ್ ಮುನಿಸಿಪಾಲಿಟಿಗಳಲ್ಲಿರಲಿ, ಹತೋಟಿ ಆಜ್ಞೆಯಿರುವವರೆಗೆ ಅವರಿಗೆಲ್ಲಾ ಧಾನ್ಯ ಒದಗಿಸುವುದು ವಿಧಿಯಿಲ್ಲದೆ ಬಂದಿರುವ ಕರ್ತವ್ಯ. ಅದು ಸರ್ಕಾರದ ಜವಾಬ್ದಾರಿ. ಆದ್ದರಿಂದ ಪ್ರಜೆಗಳ ಸೌಕರ್ಯಕ್ಕಾಗಿ ಮಾಡುವ ಕಾನೂನುಗಳು ಸುಸೂತ್ರವಾಗಿ ಜಾರಿಗೆ ಬರಲು ಮತ್ತು ಅಡಚಣೆಗಳು ಬಾರದೇ ಇರಲು ತಕ್ಕ ಸಲಹೆಗಳನ್ನು ನೀಡಿ ಸಹಕರಿಸುವುದು ಪ್ರತಿನಿಧಿಗಳ ಕರ್ತವ್ಯವೆಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಹತೋಟಿ ಆಜ್ಞೆ ತೆಗೆದ ಕೂಡಲೆ ದೇಶವು ಸುಖಮಯವಾಗಿರುತ್ತದೆಂಬ ನಂಬಿಕೆಯಿಲ್ಲ. ಮದ್ರಾಸಿನ ಅಸೆಂಬ್ಲಿ ನಡವಳಿಕೆಗಳನ್ನು ಕೂಲಂಕಷವಾಗಿ ವಿಮರ್ಶೆ ಮಾಡಿದರೆ ರೇಷನ್ ತೆಗೆದಿರುವ ಪ್ರದೇಶವಲ್ಲಿ ಪುನಃ ಕಂಟ್ರೋಲ್ ಜಾರಿಗೆ ತರಬೇಕು, ಆಹಾರ ಸಿಕ್ಕುತ್ತಿಲ್ಲ ಎಂದು ಒತ್ತಾಯ ಬರುತ್ತಿದೆಯೆಂದು ತಿಳಿದುಬರುತ್ತದೆ. ನಿಜವಾಗಿಯೂ ಅವರು ಪರೀಕ್ಷಾರ್ಥವಾಗಿ ಆ ರೀತಿ ಮಾಡಲಾಗಿ ಈ ದಿವಸ ಬೆಲೆ ಗಗನಕ್ಕೆ ಏರುತ್ತಿದೆ. ಹಳ್ಳಿಗಳಲ್ಲಿ ಆಹಾರ ಪದಾರ್ಥಗಳು ಸಿಕ್ಕುವುದಿಲ್ಲ ಎಂಬ ಸುದ್ದಿಯು ಪತ್ರಿಕೆಗಳಲ್ಲಿ ಸಹ ಪ್ರಕಟವಾಗಿದೆ. ಆದ್ದರಿಂದ ಹತೋಟಿ ಆಜ್ಞೆಗಳು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಟ್ಟಿವೆ ಎಂಬುದನ್ನು ಎಲ್ಲರೂ ಮನಸ್ಸಿನಲ್ಲಿಡಬೇಕು. ನಾವು ಎಷ್ಟು ಅನುಕೂಲವನ್ನೊದಗಿಸಿ ಜನರನ್ನು ಸುಖಮಯವಾಗಿ ಮಾಡಬಹುದೋ ಅಷ್ಟು ಮಾಡಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಗ್ರಾಮಾಂತರಗಳಿಗೆ ದವಸವನ್ನೊದಗಿಸುವ ವಿಚಾರದಲ್ಲಿ ಏನು ಏರ್ಪಾಡಿದೆ? ಅಲ್ಲಿ ಬೆಳೆಯದಿರುವವರಿಗೆ ಕೊಡುವುದು ಸರ್ಕಾರದ ಜವಾಬ್ದಾರಿಯಲ್ಲವೆ? ಹಾಗೆ ಕೊಡದಿದ್ದರೆ ಅದು ಭೇದ ಮಾಡಿದಂತಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಇನ್‌ಫಾರ್ಮಲ್ ರೇಷನಿಂಗ್ ಇರುವ ಕಡೆ ಸಾಕಷ್ಟು ದವಸವಿದ್ದರೆ ಸರಬರಾಯಿ ಮಾಡುತ್ತೇವೆ. ಅದೇ ಸ್ಟ್ಯಾಟ್ಯೂಟರಿ ರೇಷನಿಂಗ್ ಇರುವ ಪ್ರದೇಶದಲ್ಲಿ ಒದಗಿಸಬೇಕಾದ್ದು ಸರ್ಕಾರದ ಮೇಲಿರುವ ಜವಾಬ್ದಾರಿ. ಸಾಧ್ಯವಾದಷ್ಟು ಇತರ ಕಡೆಗಳಿಗೂ ಒದಗಿಸುತ್ತಿದೆ.

ಆ ಮೇಲೆ ಪ್ರಪಂಚದ ಪರಿಸ್ಥಿತಿಯಿಂದ ಮುಂದೆ ಏನೇನಾಗುತ್ತದೆಯೋ ಎಂದು ಶ್ರೀಮನ್ಮಹಾರಾಜರವರು ಹೇಳಿದ್ದಾರೆ. ಬಟ್ಟೆ ಮತ್ತು ನೂಲಿನ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಮೈಸೂರಿಗೆ ಸಾಕಷ್ಟು ಬಟ್ಟೆ ಮತ್ತು ನೂಲು ಸರಬರಾಯಿ ಆಗುತ್ತಿತ್ತು, ನಾಲ್ಕೈದು ತಿಂಗಳುಗಳಿಂದ ಈಚೆಗೆ ಬಟ್ಟೆ ಮತ್ತು ನೂಲಿನ ಅಲಾಟ್‌ಮೆಂಟ್ ಕಡಮೆಯಾಗಿದೆ. ಆದ್ದರಿಂದ ಬಟ್ಟೆ ಮತ್ತು ನೂಲಿನ ಅಭಾವ ಸಹ ನಮ್ಮ ದೇಶದಲ್ಲಿದೆ. ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಹತ್ತಾರು ಸಾರಿ ಹೇಳಿ ಎಲ್ಲವನ್ನೂ ಗಮನಕ್ಕೆ ತಂದಿದೆ. ಟೆಕ್ಸ್‌ಟೈಲ್ ಕಮಿಷನರಿಗೂ ಇದನ್ನು ತಿಳಿಸಿದ ಮೇಲೆ ಏಪ್ರಿಲ್‌ನಿಂದ ಹೆಚ್ಚು ಕೋಟ ಕೊಡುವುದಾಗಿ ಹೇಳಿದ್ದಾರೆ. ಬಟ್ಟೆ ಹಂಚಿಕೆ ಕ್ರಮವನ್ನು ಈ ಸಭೆಯವರೇ ಅನುಮೋದಿಸಿದ್ದಾರೆ. ನಮ್ಮಲ್ಲಿರುವಷ್ಟು ಅನುಕೂಲತೆ ಬೇರೆ ಕಡೆ ಇಲ್ಲ. ವರ್ತಕರು ಮೋಸ ಮಾಡುವುದಕ್ಕೆ ಅವಕಾಶವಿಲ್ಲ. ಬೊಂಬಾಯಿ, ಅಹಮದಾಬಾದ್ ಮುಂತಾದ ಕಡೆಗಳಿಂದ ಬರುವ ಬಟ್ಟೆಗೆ ಸಿವಿಲ್ ಸಪ್ಲೈಸ್ ಕಂಟ್ರೋಲರು ಮುದ್ರೆ ಒತ್ತಿ, ತನಿಖೆಮಾಡಿ ಕಳುಹಿಸುತ್ತಾರೆ. ಆ ಮೇಲೆ ಒಟ್ಟು ವ್ಯಾಪಾರಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಕೊಡುವ ಕೋಟ ಮತ್ತು ಅದನ್ನು ಹಂಚಿಕೆ ಮಾಡಬೇಕಾದ ವಿಧಾನ ಗೊತ್ತು ಮಾಡಿದೆ. ಆದರೆ ಬಟ್ಟೆ ಅಭಾವದಿಂದ ಸ್ವಲ್ಪ ತೊಂದರೆಯಾಗಿದೆ. ಒಬ್ಬೊಬ್ಬ ಚಿಲ್ಲರೆ ವ್ಯಾಪಾರಿಗೆ 150 ಗಜ ಮತ್ತು ಒಬ್ಬೊಬ್ಬ ಒಟ್ಟು ವ್ಯಾಪಾರಿಗೆ $2\frac{1}{2}$—3 ಬೇಲುಗಳಂತೆ ಕೊಡುವುದರಿಂದ ಸ್ವಲ್ಪ ತೊಂದರೆಯಾಗಿದೆ. ಬಟ್ಟೆ ಅಭಾವವು ತಾತ್ಕಾಲಿಕ. ಅದಕ್ಕೆ ಕಾರಣವನ್ನು ಶ್ರೀ ಕೃಷ್ಣಪ್ಪನವರು ಹೇಳಿದರು. ನೂಲಿನ ತೊಂದರೆ ಜೊತೆಗೆ ಎರಡು ತಿಂಗಳು ಬೊಂಬಾಯಿನಲ್ಲಿ ಸ್ಟ್ರೈಕ್ ಆದ್ದರಿಂದ ಸ್ವಲ್ಪ ತೊಂದರೆಯಾಗಿದೆ. ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಹೇಳಿದೆ.

ಶ್ರೀ ಎಂ. ಎಚ್. ಜೋಯಿಸರು.—ಖಾದಿ ಬಟ್ಟೆಯನ್ನು ಹೆಚ್ಚಾಗಿ ಸರಬರಾಯಿ ಮಾಡಿದರೆ ಎಲ್ಲಾ ಸರಿಹೋಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತ ಅದನ್ನು ಒಪ್ಪುತ್ತೇನೆ. ಅದಕ್ಕೆ ಮಾನ್ಯ ಸದಸ್ಯರು ಮನಸ್ಸು ಮಾಡಬೇಕು.

ಬೆಂಕಿ ಅನಾಹುತಕ್ಕೆ ಒಳಗಾದವರಿಗೆ ಪರಿಹಾರ ಕೊಡಬೇಕೆಂದು ಶ್ರೀ ಮಾದಯ್ಯಗೌಡರು ಹೇಳಿದರು. ಆ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿಯಿದೆ. ಈ ವರ್ಷ ಕೆಲವು ಜನರು ಕಷ್ಟ ಪಟ್ಟಿದ್ದಾರೆ. ಅವರಿಗೆ ಆದಷ್ಟು ಪರಿಹಾರ ಕೊಟ್ಟಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ದೇಶದಲ್ಲಿ ಬೆಂಕಿ ಅನಾಹುತ ಹೆಚ್ಚಾಗುತ್ತಿರುವುದರಿಂದ ಅದರಲ್ಲಿ ನಷ್ಟ ಹೊಂದಿದವರಿಗೆ ಪರಿಹಾರವನ್ನೊದಗಿಸಲು ಮುಂದಿನ ಬಡ್ಜೆಟ್‌ನಲ್ಲಿ ಸಾಕಾದಷ್ಟು ಹಣ ಒದಗಿಸಬೇಕೆಂಬುದನ್ನು ಮನಗಂಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಂಸ್ಥಾನದಲ್ಲಿ ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕಾಗಿ 19 ಲಕ್ಷ ರೂಪಾಯಿಗಳವರೆಗೂ ಕೊಡುತ್ತಾ ಇದ್ದೇವೆ. ಸರಿಯಾದ ಮನೆಗಳನ್ನು ಕಟ್ಟಿಕೊಂಡರೆ ಆ ರೀತಿ ಬೆಂಕಿ ಅನಾಹುತಗಳಾಗುವುದು ಕಮ್ಮಿ ಆಗುತ್ತವೆ. ಶ್ರೀ ಮಾದಯ್ಯನವರು ಸಬ್‌ಸಿಡಿ ಸರಿಯಾಗಿ ವಿನಿಯೋಗವಾಗುತ್ತಿಲ್ಲವೆಂದು ಹೇಳಿದರು. ಅವರ ಮನಸ್ಸಿನಲ್ಲಿ ಚಾಮರಾಜನಗರದ ವಿಷಯ ಇರಬಹುದು. ಅಲ್ಲೂ ಕೂಡ ಅನೇಕರು ತೆಗೆದುಕೊಂಡಿದ್ದಾರೆ. ನಾನು ಕಂಡ ಹಾಗೆ ಕುದೂರು ಪ್ರದೇಶದಲ್ಲಿ ತೆಗೆದುಕೊಂಡಿದ್ದಾರೆ. ಸಾಕಾದಷ್ಟು ಬೀಜ ಸರಬರಾಯಿ ಮಾಡಿಲ್ಲವೆಂದು ಹೇಳಿದರು. ಗುಂಡ್ಲುಪೇಟೆ, ಚಾಮರಾಜನಗರ ಮತ್ತು ಯಳಂದೂರು ಈ ಮೂರು ಪ್ರದೇಶಗಳಿಗೂ ಬೇರೆ ಕಡೆಯಿಂದ ಬೀಜ ಒದಗಿಸಿದ್ದೇವೆ. ಈ ವರ್ಷ ಅದೃಷ್ಟವಶಾತ್ ಗುಂಡ್ಲುಪೇಟೆ, ಚಾಮರಾಜನಗರದಲ್ಲಿ ರಾಗಿ ಬೆಳೆ ಚೆನ್ನಾಗಿ ಬಂದಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಬೇಕಾಗಿದೆ.

ಜನಾಬ್ ಇಮಾಂರವರು ಈ ಕಡೆ ಲೇವಿ ಖೋತಾ ಮಾಡಿದಿರಿ, ಆ ಕಡೆ ದರ ಹೆಚ್ಚಿಸಿದಿರಿ ಎಂದು ಹೇಳಿದರು. ಆ ರೀತಿ ಮಾಡಬೇಕೆಂಬ ಉದ್ದೇಶ ಇರಲಿಲ್ಲ. ಇಂಡಿಯಾ ಸರ್ಕಾರದ ನೀತಿಯಂತೆ 9 ಔನ್ಸ್‌ಗೆ ತಾತ್ಕಾಲಿಕವಾಗಿ ಇಳಿಸಬೇಕೆಂದು ಹೇಳಿದರು. ಅದರಂತೆ ಖೋತಾ ಮಾಡಿದೆವು. ಬೆಲೆ ಇಳಿಸುವ ವಿಚಾರದಲ್ಲಿ

ಮಾನ್ಯ ಸದಸ್ಯರೆಲ್ಲರೂ ಇದುವರೆಗೂ ನಷ್ಟವಾಗಿರುವುದೇ ಸಾಕು, ಇನ್ನು ಹೆಚ್ಚಿಗೆ ನಷ್ಟ ಮಾಡಿಕೊಳ್ಳಕೂಡದೆಂದು ಅಭಿಪ್ರಾಯಪಟ್ಟರು. ಅದಕ್ಕೆ ತಲೆಬಾಗಿ ಆ ರೀತಿ ಬೆಲೆ ಜಾಸ್ತಿ ಮಾಡಿದ್ದೇವೆ.

ಮೂರನೆಯ ಪ್ರಶ್ನೆ ನಮ್ಮ ಸೈನ್ಯದಲ್ಲಿ ಕೆಲವು ಅಧಿಕಾರಿಗಳನ್ನು ಏಕ್‌ದಂ ಹುದ್ದೆಯಿಂದ ವಜಾ ಮಾಡಿರುವ ವಿಷಯ. ಈ ವಿಷಯದಲ್ಲಿ ಅವರಿಗೆ ಆಗಿರುವ ಕಷ್ಟವನ್ನು ಸರ್ಕಾರದವರು ಮನಗಂಡು ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡುತ್ತಿದ್ದೇವೆ. ಕೇಂದ್ರದ ಡಿಫೆನ್ಸ್ ಮಿನಿಸ್ಟ್ರಿಗೂ ಸಹ ಟೆಲಿಗ್ರಾಂ ಕೊಟ್ಟು ಅವರ ವಿಚಾರದಲ್ಲಿ ಆಗಿರತಕ್ಕ ಒಪ್ಪಂದದ ಪ್ರಕಾರ ರಿಯಾಯಿತಿಗಳನ್ನು ಕೊಡಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಆ ವಿಚಾರದಲ್ಲಿ ನಾವು ಕೈಲಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಮೈಸೂರು ಮಿಲಿಟರಿ ವಿಚಾರದಲ್ಲಿ ವಿವರ ಕೊಡಬೇಕಾಗಿಲ್ಲ. ಬೇರೆ ಸಮಯ ಬಂದಾಗ ಸಭೆಯ ಮುಂದಿಡುತ್ತೇನೆ. ಅವರ ಕಷ್ಟವನ್ನು ಮನಗಂಡಿಲ್ಲವೆಂದು ಯಾರೂ ಭಾವಿಸಬಾರದು. ಅವರ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿ ಇದೆ. ಅವರು ಮೈಸೂರು ದೇಶಕ್ಕೆ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಆದಷ್ಟು ಸಹಾಯ ಮಾಡಬೇಕೆಂತಲೇ ಇದ್ದೇವೆ. ಶ್ರೀ ಗೋವಿಂದರೆಡ್ಡಿಯವರು ಕೇಡೆಟ್ ಆಫೀಸರುಗಳ ವಿಚಾರ ಹೇಳಿದರು. ಅವರಲ್ಲಿ 10 ಜನರನ್ನು ಸಬ್ ಇನ್ಸ್‌ಪೆಕ್ಟರುಗಳಾಗಿ ತೆಗೆದುಕೊಳ್ಳುತ್ತೇವೆ. ಮತ್ತು ಆರ್ಮಿ ರಿಸರ್ವ್ ಬ್ಯಾಟಾಲಿಯನ್ ಪ್ರಾರಂಭ ಮಾಡಿ ಅದರಲ್ಲಿ ಎಷ್ಟು ಮಟ್ಟಿಗೆ ಸೇರಿಸಿಕೊಳ್ಳಬಹುದು ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಆದರೂ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಜಾಸ್ತಿ ಇದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಕೇಂದ್ರ ಸರ್ಕಾರದವರು ಸಿಪಾಯಿಗಳನ್ನು ರೆಕ್ರೂಟ್ ಮಾಡುತ್ತಾ ಇದ್ದಾರಲ್ಲಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಬೇರೆ ವಿಚಾರ. ನಮಗೆ ಸಂಬಂಧಪಟ್ಟದ್ದಲ್ಲ. ಇನ್ನೊಂದು ವಿಚಾರ ಹೇಳಿದರು. ದೊಡ್ಡ ದೊಡ್ಡ ಜಮೀನ್ದಾರರು ದವಸಧಾನ್ಯ ಸಮರ್ಪಕವಾಗಿ ಕೊಟ್ಟಿಲ್ಲದಿದ್ದರೆ ಬಹಳ ಕಷ್ಟವಾಗುತ್ತಿತ್ತು. ಕೊಟ್ಟಿಲ್ಲ ಎಂದು ಹೇಳುವುದನ್ನು ಒಪ್ಪುವುದಿಲ್ಲ. ಪ್ರೊಕ್ಯೂರ್‌ಮೆಂಟ್ ಆಗುವುದೆಲ್ಲಾ ಈ ಒಂದು ತಿಂಗಳಿನಲ್ಲಿ. ಅನಂತರ ಸ್ವಲ್ಪ ಸ್ವಲ್ಪ ತೆಗೆದುಕೊಂಡು ಬರಬೇಕು. ನಿಜವಾಗಿಯೂ ಹತೋಟಿ ಆಜ್ಞೆಯ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಹತೋಟಿ ಆಜ್ಞೆಯಲ್ಲಿ ತಪ್ಪಿಲ್ಲ. ಅದನ್ನು ಜಾರಿ ಮಾಡತಕ್ಕವರ ತಪ್ಪಿನಿಂದ ಜನಗಳ ಮನಸ್ಸು ನೋಯಬಹುದು. ಇಂಗ್ಲೆಂಡಿನಲ್ಲಿ ಹತೋಟಿ ಆಜ್ಞೆ ಸುಸೂತ್ರವಾಗಿ ನಡೆಯುತ್ತಾ ಇದೆ. ಜನಗಳು ಅನುಸರಿಸಿಕೊಂಡು ಹೋಗುತ್ತಾರೆ, ಆಡಳಿತ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ನಮ್ಮ ದೇಶ ಇನ್ನೂ ಆ ಮಟ್ಟಕ್ಕೆ ಬಂದಿಲ್ಲ. ಆದ್ದರಿಂದ ಹತೋಟಿ ಆಜ್ಞೆ ಜಾರಿ ಮಾಡುವಾಗ, ಅದರ ಶಕೆ ತಟ್ಟುವಾಗ ಮನಸ್ಸಿಗೆ ಬೇಸರವಾಗುವುದು ಸ್ವಾಭಾವಿಕ. ಹತೋಟಿ ಆಜ್ಞೆ ನೆನ್ನೆ ಮೊನ್ನೆ ಪ್ರಾರಂಭವಾದುದಲ್ಲ. ಅದು ದೇಶದಲ್ಲಿ ವಿಧಿ ಇಲ್ಲದೆ ಆದಷ್ಟು ಮಟ್ಟಿಗೆ ನಡೆಯಬೇಕಾಗಿದೆ. ಆದಷ್ಟು ಬೇಗ ಹತೋಟಿ ಆಜ್ಞೆ ಹೋಗಿ ಜನಗಳಲ್ಲಿ ಸಂತೃಪ್ತಿ, ಸಮಾಧಾನವುಂಟಾಗಲೆಂದು ಹಾರೈಸುತ್ತೇನೆ. ಯಾವ ರೀತಿ ಮಾಡಿದರೆ ಅತ್ಯಂತ ಕಡಿಮೆ ಏರು ಪೇರು ಆಗುತ್ತದೆ ಎಂಬುದನ್ನು ನೋಡಿಕೊಂಡು ಮಾಡುವುದು ಬುದ್ಧಿವಂತಿಕೆ ಎಂದು ಹೇಳಿ ಮಾನ್ಯ ಸದಸ್ಯರಾದ ಜನಾಬ್ ಇಮಾಂರವರು ಅವರ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಏಕೆಂದರೆ, ಸಾಮಾನ್ಯವಾಗಿ ಅವರು ವಿಷಯ ಮನದಟ್ಟಾದ ಮೇಲೆ ಅವರು ಹೇಳಿರತಕ್ಕ ಮಾತಿಗೆ ಸರಿಯಾದ ಸಮಜಾಯಿಷಿ ದೊರೆತ ಮೇಲೆ ವಾಪಸ್ಸು ತೆಗೆದುಕೊಳ್ಳುವುದು ಅವರ ಸ್ವಭಾವ. ಈ ದಿನ ಯಾವ ರೀತಿ ವರ್ತಿಸುತ್ತಾರೆ ಎಂದು ನಾನು ಎದುರು ನೋಡುತ್ತೇನೆ.

***The Hon'ble Sri K. CHENGALARAYA REDDY** (Chief Minister).—Mr. Speaker, Sir, I have not risen to make a speech now at this stage. Indeed, I had intended to make some general observations on certain matters of high policy which have been raised in the course of the debate on the Motion of Thanks. But I will deal with some of them in the course of discussion on the Budget Estimates. It is not my desire to detain the House any longer at this stage.

So far as some of the aspects are concerned, the Hon'ble Home Minister has covered them during his reply to the debate. Attention was concentrated on two subjects, namely, control of food and Grow More Food schemes and secondly on the future of the military personnel who have been disbanded by the Government of India. Regarding both these issues, I want to say this much, that the Government are keenly alive to the various aspects of the problems and are doing their utmost in order to bring about satisfactory situations. We will take the House into confidence at a later stage and place all the details before them. And particularly so far as the military personnel question is concerned, as has already been admitted by Hon'ble Members who have spoken, the Government of Mysore are doing their utmost in order to secure satisfaction. I do not know what the difficulties of the Government of India are. But whatever difficulties they have, they have also to take into account the seriousness of the problem and the equity and justice that have got to be rendered to the military personnel. We have put forward our views unambiguously and unreservedly to the Government of India and I want to make use of this opportunity to publicly urge on the floor of this House the grave risks

(THE HON'BLE SRI K. CHENGALA-RAYA REDDY.)

that we will be running into as a nation if we do not deal with this problem satisfactorily. I wish to advert to this again in the course of the Budget discussion and therefore I do not think I need say anything more at present. I hope the Motion of Thanks will be adopted unanimously.

Janab J. MOHAMED IMAM.—I press the amendment, Sir.

Mr. SPEAKER.—The question is :

"That the following words may be added at the end of the resolution :

"but regret that Your Highness's Ministers have not taken effective steps to implement their policy and programme of 'Grow More Food Campaign' with the result that there has been acute shortage of food grains necessitating curtailment of food ration, enhancement of prices, recourse to stringent form of procurement; and no steps have been taken so far to relax control measures and bring down inflation."

The motion was negatived.

Mr. SPEAKER.—The question is :

"That an Address be presented to His Highness the Maharaja in the following terms:—

'May it please Your Highness,

'We the members of the Mysore Legislative Assembly assembled in this Session, beg leave to thank Your Highness for the Address delivered to the Assembly.'"

The motion was adopted.

Mr. SPEAKER.—The House will now adjourn to meet again on Monday at One O'clock.

The Assembly adjourned at Forty-three Minutes past One of the Clock to meet again at One of the Clock on Monday, 19th March 1951.

WD 3189—GPB—500—31-3-51